ed No. M. 1393.

doc-38
T P-16

ವಾರಕ್ಕೆರಡಾವರ್ತಿ ಪ್ರಕಟವಾಗುವ ಶ್ರೇಷ್ಠವರ್ಗದ ಕನ್ನಡ ವಾರ್ತಾಪತ್ರಿಕೆ.

ಸಂಪುಟ ೨೩ ಮಂಗಳೂರು, ೧೯೪೧ನೇ ಇಸವಿ ಸಪ್ಟಂಬರ ತಾರೀಕು ೨೩ನೇ ಮಂಗಳವಾರ ಸಂಚಿಕೆ ೫೧
VOL. XXIII MANGALORE, TUESDAY, SEPTEMBER 23, 1941 NO. 51

ಹಿಟ್ಲರನ ಅಷ್ಟ "ಸ್ವಾಹಾ" ಮಂತ್ರಗಳು

ಮಿ। ರೂಜ್‌ವೆಲ್ಟರೂ, ಮಿ। ಚರ್ಚ್‌ಹಿಲ್ಲರೂ ಸೇರಿ, "ಅಟ್ಲಾಂಟಿಕ ನಲ್ಲಿ ಎಲ್ಲಿಯೋ ಒಂದು ಕಡೆ" ಕುಳಿತು ಜಗತ್ತಿನ ಮುಂದಿನ ಉದ್ಧಾರ ಮಾರ್ಗ ಯಾವುದೆಂದು ಆಲೋಚಿಸಿ ಅದರ ಫಲವಾಗಿ ಚಿರಾರ್ಯಪೂರ್ಣವಾದ ಎಂಟು ವರಗಳದೊಂದು ದಾನಶಾಸನವನ್ನು ಪ್ರಕಟಿಸಿರುವರೆಂದು ಪ್ರಜಾಪ್ರಭುತ್ವದ ಕೆಲವೊಂದು ರಾಷ್ಟ್ರಗಳ ಪತ್ರಿಕೆಗಳು, ಆ ಇಬ್ಬರು ಮಹನೀಯರನ್ನು ಮುಕ್ತ ಕಂಠದಿಂದ ಹೊಗಳುತ್ತಿರುವುದನ್ನು ನಾವಿಂದಿಗೂ ಕೇಳುತ್ತಿದ್ದೇವೆ. ಈ ದಾನಶಾಸನದಿಂದ ಭಾರತಕ್ಕೆ ಚಿಕ್ಕಾಸಿನ ಉಪಕಾರವಾಗದಿದ್ದರೂ, ಯುರೋಪಿನಲ್ಲಿ ನಾಜಿ ಹಿಂಸೆಗೆ ಗುರಿಯಾದ ರಾಷ್ಟ್ರಗಳಿಗೆ ಉಪಕಾರವಾಗುವುದೆಂಬ ಭರವಸೆಯ ಮಾತು ಆ ಶಾಸನದಲ್ಲಿ ಇದೆ. ಅದು ಯಾವ ರೀತಿಯಲ್ಲಿ ಪೂರೈಸಲ್ಪಡುವುದೆಂಬ ವಿಚಾರ ಅದು ಇಂದು ಪ್ರಕೃತವಲ್ಲವೆನ್ನುವ!

ಆದರೆ ಹಿಟ್ಲರನೂ ಜರ್ಮನಿಯ ಉದ್ದೇಶಗಳೇನೆಂಬುದನ್ನು ಜಗತ್ತಿಗೆ ಸಾರಿದ್ದಾನೆ; ಅವನ ಅನುಯಾಯಿಗಳೂ ಸಾರಿದ್ದಾರೆ. ಈ ಸಂದರ್ಭದಲ್ಲಿ ಅವನ್ನು ನಾವು ತಿಳಿದುಕೊಳ್ಳುವುದು ಅಗತ್ಯವೇಕೆಂದರೆ, ಅವರ "ಸ್ವಾಹಾ" ಮಂತ್ರಗಳಿಗೂ, ಇವರ "ಲೋಕೋದ್ಧಾರ" ತತ್ತ್ವಗಳಿಗೂ ಎಷ್ಟು ವ್ಯತ್ಯಾಸ ವಿದೆ ಎಂಬುದು ಅದರಿಂದ ತಿಳಿದುಬರುತ್ತಿದೆ. ಸದ್ಯ ರೂಜ್‌ವೆಲ್ಟ್, ಚರ್ಚ್‌ಹಿಲ್ಲರ ದಾನಶಾಸನದ "ಮತಲಬು" ಈಚಿಗೆ ತಾನೇ ಪ್ರಕಟವಾಗಿರುವುದರಿಂದ, ಜರ್ಮನಿಯ ಉದ್ದೇಶಗಳನ್ನು ಮಾತ್ರ ನಾವು ಸ್ಮರಣೆಗೆ ತಂದುಕೊಟ್ಟರೆ ಸಾಕಾಗಿದೆ.

ಹಿಟ್ಲರನ ಸ್ವಂತ ನುಡಿಗಳು

"ನಮಗೆ ಯುರೋಪು ಬೇಕು; ಅದರ ಕಾಲನಿಗಳೂ ಬೇಕು; ಜರ್ಮನಿ ತನ್ನ ಪ್ರಭಾವದ ಶಕ್ತಿಯನ್ನು ಪೂರ್ವದಲ್ಲಿ ಅದರ ಗಡಿಗಳ ಹೊರಗೆ ಬಹು ದೂರದಲ್ಲಿಯೂ, ದಕ್ಷಿಣ ಪೂರ್ವದಲ್ಲಿಯೂ ಪಸರಿಸುವುದು; ನಮಗೆ ದಕ್ಷಿಣ ಅಮೆರಿಕದಲ್ಲಿಯೂ ಹಕ್ಕಿದೆ; ಯಾವತ್ತು ಪ್ರಾಣಿಗಳನ್ನು ಜಯಿಸುವುದಲ್ಲದೆ ಅವುಗಳನ್ನು ಧ್ವಂಸ ಮಾಡಬೇಕೆನ್ನುವುದೂ ಸ್ವಾಭಾವಿಕವಾದ ಅಂತರ್ಯದ ಪ್ರೇರಣೆ.

"ಈ ಯುದ್ಧವು ಜಗತ್ತಿನ ಸ್ವಾಮಿತ್ವದ ಹೆಬ್ಬಾಗಿಲನ್ನು ನಮಗಾಗಿ ತೆರೆದಿಡುವುದು; ಇನ್ನೂ ಅಲ್ಲಿ ಅಧೀನ ಶತ್ರು ಕುಲದ ವರ್ಗವೊಂದಿದ್ದೇ ಇರುವುದು. ಅವರನ್ನು ನಾವು "ಆಧುನಿಕ ಗುಲಾಮ ವರ್ಗ"ದವರೆಂದು ಕರೆಯಲು ಹಿಂಜರಿಯಬಾರದು.

"ಸಣ್ಣ ಪುಟ್ಟ ರಾಷ್ಟ್ರಗಳ ಕಾಲ ಮುಗಿಯಿತು. ನಮಗೆ ಸಮಾನತೆ ಬೇಡ; ಸ್ವಾಮಿತ್ವವೇ ಬೇಕು. ನಾವು "ಪೈನಾರಿಟಿ"ಗಳ ಹಕ್ಕುಬಾಧ್ಯತೆಗಳ ಸಮಾಲೋಚನೆಗಾಗಿ ಸಮಯ ಕಳೆಯಬೇಕಾಗಿಲ್ಲ; ಅಥವಾ ಗೊಡ್ಡು ಪ್ರಜಾಪ್ರಭುತ್ವದ ತತ್ತ್ವರೂಪದ ಗರ್ಭಪಾತಗಳ ಕುರಿತೂ ಚಿಂತಿಸಬೇಕಾಗಿಲ್ಲ."

ಜರ್ಮನ್ ಪತ್ರಿಕೆಯ ವಾಣಿ

"ಯುದ್ಧಾನಂತ್ಯದಲ್ಲಿ ಜರ್ಮನಿ ತಾನು ನುಂಗಿರುವುದನ್ನು ಜೀರ್ಣಿಸಿಕೊಳ್ಳಬೇಕು; ಆರ್ಥಿಕ ದೃಷ್ಟಿಯಿಂದ ಇದರ ಅರ್ಥವೇನೆಂದರೆ, ಜರ್ಮನಿಯು ಆರ್ಥಿಕ ಪರಿಸ್ಥಿತಿಯನ್ನು ಹೊಂದಿಸಿಕೊಳ್ಳುವುದೆಂಬುದೇ."

ನಾಜಿ ಕೃಷಿ ಇಲಾಖೆಯ ಮಂತ್ರಿಗಳ ಹೇಳಿಕೆ (ಮೇ ೧೯೪೦)

"ಜರ್ಮನಿ ತನ್ನ ಪರಮೋತ್ಕೃಷ್ಟ ಸಾಮಗ್ರಿಗಳನ್ನು ಅತ್ಯಲ್ಪ ಬೆಲೆಯಲ್ಲಿ ಇಡೀ ಜಗತ್ತಿಗೇ ಮಾರುವುದು; ಆಗ ಅಮೆರಿಕದ ಈಗಿನ ೭,೦೦೦,೦೦೦ ಮುಂದಿನ ನಿರುದ್ಯೋಗಿಗಳ ಸಂಖ್ಯೆ, ೫೦—೪೦,೦೦೦,೦೦೦ ಸಂಖ್ಯೆಗೇರುವಂತೆ ಏರ್ಪಡುವುದು. ಆಗ ಮಿ। ರುಜ್‌ವೆಲ್ಟರು ವೊಣಕಾಲೂರಿ, "ತಯಾರಾದ ಪದಾರ್ಥಗಳನ್ನೆಲ್ಲ; ಹಸಿ ಪದಾರ್ಥಗಳನ್ನೇ ನಮ್ಮಲ್ಲಿಂದ ಕೊಳ್ಳಿರೆ"ಂದು ಹಿಟ್ಲರನನ್ನು ಪ್ರಾರ್ಥಿಸುವರು. ಆಗ ನಾವು ಆ ಹಸಿ ಪದಾರ್ಥಗಳ ಬೆಲೆ ಇಂತಿಷ್ಟೇ ಎಂದು ಅಮೆರಿಕದವರಿಗೆ ಹೇಳಿ ಬರಯಿಸುವೆವು.

"ಜರ್ಮನಿಯ ಮೂಲವಿಲ್ಲದ ಯಾವತ್ತು ನಿವಾಸಿಗಳ ಭೂಮಿಕಾಣಿಕೆ, ಕೈಗಾರಿಕೆಗಳ ಸೊತ್ತು ಇವನ್ನು ಒಂದೂ ಬಿಡದ ಹಾಗೆ ಎಲ್ಲವನ್ನೂ ನಾವು ಸೆಳೆದುಕೊಂಡು, ಈ ಯುದ್ಧದಲ್ಲಿ ಶೌರ್ಯ ಪ್ರದರ್ಶನಕ್ಕಾಗಿ ಬಿರುದು ಬಾವಲಿಗಳನ್ನು ಪಡೆದ ಆ ಯೋಗ್ಯ ಪಂಗಡ ಮತ್ತು ಆ ಸೋಲ್ಜರರುಗಳಿಗೆ ಅವನ್ನು ಹಂಚಿ ಬಿಡುತ್ತೇವೆ. ಅಲ್ಲದೆ ಈ ಜರ್ಮನಿಯ ವೈಭವಶಾಲಿಗಳು, ಅವರವರಿಗೆ ಕೊಡಲಾಗುವ ಆ ಗುಲಾಮರನ್ನೂ ಪಡೆಯುವರು; ಆ ಗುಲಾಮರೂ ಆ ಜರ್ಮನ್ ಕುಲೀನರ, ಶ್ರೀಮಂತರ ಒಂದು ಆಸ್ತಿಯೇ; ಅವರು ಮನೆಮಾರುಗಳಿಲ್ಲದ,—ಜರ್ಮನರ ಹೊರತಾದ—ಪರ ರಾಷ್ಟ್ರೀಯರು. ನಮಗೆ ಮಧ್ಯ ಯುಗದ ಆಧುನಿಕ ಸ್ವರೂಪದ ಗುಲಾಮುಗಿರಿ ಅಗತ್ಯವೆಂದು ಖಚಿತವಾಗಿದೆ. ಆ ದಾಸ ಪದ್ಧತಿಯನ್ನು ನಾವು ಪ್ರವೇಶಗೊಳಿಸುವುದು ಖಂಡಿತ. ನಮ್ಮ ಆರ್ಥಿಕ ವಿಜಯದ ವರ್ಚಸ್ಸು ಎಲ್ಲೆಲ್ಲೂ ಬೇಗನೆ ವ್ಯಾಪಿಸುವಂತೆ, ಶ್ರಮಜೀವನವು ಅಗ್ಗವಾಗಿರಬೇಕೆಂಬುದು ನಿರ್ವಿವಾದ."

ಹಿಟ್ಲರನ ನುಡಿಗಳು

"ಬೆದರಿಕೆಯ ದಂಡದಿಂದ ಮಾತ್ರವೇ ಜಗತ್ತನ್ನು ಆಳಲು ಸಾಧ್ಯ. ಭಯಪ್ರದರ್ಶನವೇ ಅತ್ಯಂತ ಪರಿಣಾಮಕಾರಿಯಾದ ರಾಜಕೀಯ ಆಯುಧ. ರಾಜನೀತಿಯಲ್ಲಿ ಏನಾದರೂ ನೈತಿಕ ಶಾಸನವಿದೆ ಎಂಬುದನ್ನು ನಾನು ಒಪ್ಪಲಾರೆನು. ವ್ಯಕ್ತಿಯೊಬ್ಬ ತನಗೆ ಸಂಬಂಧಿಸಿದುದೆಂದು ತಿಳಿಯಬಹುದಾದ ಸ್ವತಂತ್ರ ಪ್ರದೇಶವಾಗಲೀ, ಲೈಸನ್ಸ್ ಆಗಲಿ ಎಲ್ಲಿಯೂ ಇರಲಾರದು."

ಎಡ್ಮಿರಲ್ ರೈಡರಿನ ಮಾತು

"ಜಗತ್ತಿನ ಅಧಿಕಾರಕ್ಕೆ ಯೋಗ್ಯವೆನಿಸುವಷ್ಟು ಪ್ರಬಲವಾದ ರೀತಿಯಲ್ಲಿ ಜರ್ಮನ್ ನೌಕಾಬಲವನ್ನು ವಿಸ್ತಾರಗೊಳಿಸಲಾಗುವುದು. ಅದು ಜರ್ಮನಿಯ ಧ್ವಜವನ್ನೂ, ಹೆಸರನ್ನೂ ಜಗತ್ತಿನ

(೧೫ನೇ ಪುಟಕ್ಕೆ ಮುಂದರಿಸಿಯದೆ)

To meet WAR TIME orders FIXED DEPOSITS IN CASH

repayable after 3, 6, 9, 12 & 24 months

at 4, 4½, 5, 6 & 7½% interest respectively (interest paid quarterly) are accepted by

CALICUT HOSIERIES, LTD.,

(ESTD. 1936) CHALAPURAM POST. (Malabar.)

List will remain open only for one month and will close immediately the required amount of Deposits are received.

Apply with 0—2—0 postage stamps for rules and application form at once to Managing Agents.

N. B. Special Rates for Deposits for sums over Rs. 5000/-

Every Kanarite finds in the "**POPULAR**" a successful Life Assurance company of their own. To patronise it- to actively work for it- must continue to be the aim of every one who looks to the progress of Kanara enterprise.

Represent the "POPULAR". A permanent appointment on very remunerative basis awaits you.

THE POPULAR INSURANCE COMPANY LIMITED,

Head Office: Mangalore, S. India.

Pandit Bank,

MANGALORE

ಪಂಡಿತ್ ಬೇಂಕ್,

ಕೋರ್ಟು ರಸ್ತೆ, ಮಂಗಳೂರು.

ಕರೆಂಟ್, ಸೇವಿಂಗ್ಸ್ ಬ್ಯಾಂಕ್, ವ ಕಾಯಂ ಠೇವಣಾತಿ ಯಾನೆ ಡಿಪೊಜಿಟ್‌ಗಳನ್ನು ಪಡಕೊಳ್ಳುವದೂ, ಚಿನ್ನಾಭರಣ ವಗೈರೆಗಳ ಈಡಿನ ಮೇಲೆ ಹಣ ಎಡ್ವಾನ್ಸ್ ಮಾಡುವದೂ, ಸೇಫ್ ಡಿಪೊಜಿಟ್ ಪಡೆಯುವದೂ ವಗೈರೆ ಯಾವತ್ತೂ ಬ್ಯಾಂಕಿಂಗ್ ಕೆಲಸಗಳನ್ನು ಬಹಳ ಸುಲಭವಾದ ಬಡ್ಡಿ ವ ಶರತಗಳೊಡನೆ ಮಾಡೋಣಾಗುತ್ತದೆ.

ಈ ಬ್ಯಾಂಕ್ ಲಿಮಿಟೆಡ್ ಲಾಯ್ಬಲಿಟಿ ಯದು ಅಲ್ಲವಾದುದರಿಂದ ಡಿಪೊಜಿಟರಿಗೆ ಹೆಚ್ಚಿನ ಭದ್ರತೆ ಉಂಟು.

ಚಿನ್ನಾಭರಣಗಳ ಈಡಿನ ಮೇಲೆ ಈ ಕೆಳಗಿನ ಬಡ್ಡಿ ದರಗಳಲ್ಲಿ ಹಣ ಎಡ್ವಾನ್ಸ್ ಮಾಡೋಣಾಗುತ್ತದೆ.

ರೂ. 50ರ ತನಕ ಸೇ. 8%
ರೂ. 51ರಿಂದ ರೂ. 500ರ ತನಕ ಸೇ 7%
ರೂ. 501ರಿಂದ ಮೇಲ್ಪಟ್ಟು ಸೇ. 6½%

ಬಡ್ಡಿ ದರವನ್ನು ಈ ತಿಂಗಳ ಮೊದಲ್ಗೊಂಡು ತಬ್ದಿಲು ಮಾಡಿದೆ.—

ಚಾಲ್ತಿ ಠೇವಣಾತಿ:

ಪ್ರತಿದಿನದ ತಿಲ್ಕಿನ ಮೇಲೆ ಸೇ. 1 %
ಸೇವಿಂಗ್ಸ್ ಬ್ಯಾಂಕ್: ಸೇ. 3 %

ನಿರಖು ಠೇವಣಾತಿ:

6 ತಿಂಗಳುಗಳಿಗೆ ಸೇ 3½ %
1 ವರ್ಷಕ್ಕೆ ಸೇ. 4 %

PANDIT SHIVA RAO, B.A., LL.B.
PROPRIETOR.
PANDIT SANJIVA RAO, B.A.
AGENT.

JAYA LAXMI BANK, LTD., MANGALORE.

ಜಯಲಕ್ಷ್ಮೀ ಬೇಂಕ್, ಲಿಮಿಟೆಡ್, ಮಂಗಳೂರು.

(ಸ್ಥಾಪಿಸಲ್ಪಟ್ಟದ್ದು—1923)

ಶಾಖೆಗಳು: ಪುತ್ತೂರು, ಕಾಸರಗೋಡು, ಚಿಕ್ಕಮಗಳೂರು, ಮೂಡಿಗೆರೆ, ಕಣ್ಣಾನೂರು, ಕಲ್ಲಿಕೋಟೆ, ಕುಂಡೊಟ್ಟು, ಮಾಲಾಪುರಂ ಮತ್ತು ಮಂಗಳೂರು.

ಅಧಿಕೃತ ಮೂಲಧನ . . .	ರೂ. 5,00,000
ಆರ್ಪಿಸಲಾದ ಮೂಲಧನ . . .	ರೂ. 2,50,000
ಚೆಂದಾಹಾಕಿದ ಮೂಲಧನ . .	ರೂ. 1,27,000
ತೆತ್ತ ಮೂಲಧನ . . .	ರೂ. 1,17,000
ಕ್ಷೇಮ ಮತ್ತಿತರ ನಿಧಿಗಳು . .	ರೂ. 1,20,753

ಕಾಯಂ ಠೇವಣಾತಿಗಳು.

3 ತಿಂಗಳ ಠೇವಣಾತಿಗಳಿಗೆ-ಸೇ.3%; 6 ತಿಂಗಳ ಠೇವಣಾತಿಗಳಿಗೆ-ಸೇ.3½%; 12 ತಿಂಗಳ ಠೇವಣಾತಿಗಳಿಗೆ—4%.

ಮಾಸಿಕ, ಸೇವಿಂಗ್ಸ್ ಬೇಂಕ್, ಮತ್ತು ಚಾಲ್ತಿ ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲಾಗುವುವು. ಮುಖ್ಯವಾಗಿ ಬಂಗಾರ, ಸರಕು ಈಡಿನ ಮೇಲೆ, ಸಾಲವನ್ನು ಕೊಡುವುದು.

M. Ganesh Rao,
ಸೆಕ್ರಟರಿ.

ಶಾಸ್ತ್ರೀಯ ಅಮೂಲ್ಯ ಔಷಧಗಳು

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡು ಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕ ಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪ್ಯಾ 1—2—0. ಅಂಚೆವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕೋಶ, ಕ್ಷಯ, ಹೃದ್ರೋಗಗಳೆಂಬ ಮಕ್ಕಳ ವ್ಯಾಧಿಗಳಿಗೂ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು ಒಂದಕ್ಕೆ ರೂ. 3—0—0 ಅಂಚೆವೆಚ್ಚ ಬೇರೆ.

ಕಸ್ತೂರಿಮಿಶ್ರಣ! ದಶಮೂಲ ಸುಖಪ್ರದ ಔಷಧಿ.

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯ ಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಅಂಕುಚಿತಮಾಡುವುದು.

ರಸಾಯನ ಗುಣದಿಂದ ಬಾಣಂತಿಯು – ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವುದು. ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 2—0—0 ಪೋಸ್ಟೇಜು ವಗೈರೆ ಬೇರೆ.

ಶ್ರೀ ಪಿ. ಮಹಾಬಲ ಹೆಬ್ಬಾರ್,
ತೀರ್ಥಹಳ್ಳಿ, ಇವರನ್ನು ಮೈಸೂರು ಸಂಸ್ಥಾನದ ನಮ್ಮ ಏಜೆಂಟರನ್ನಾಗಿ ನೇಮಕಮಾಡಿಯದೆ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು, ದ. ಕನ್ನಡ.

(ರಿಜಿಸ್ಟರ್ಡ್)

ಬಾಲಾರ್ಕಮಧು

ಲಕ್ಷಗಟ್ಟಲೆ ಮಕ್ಕಳ ಪ್ರಾಣವನ್ನು ಕಾಪಾಡಿದೆ.

ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗ್ರಹಣಿ; ಆಸ್ತಿಜ್ವರವನ್ನು ಹೋಗಲಾಡಿಸುವುದು. ಗೂಡು ಕಟ್ಟಿ ಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ ಹೆಚ್ಚುವುದು. ಮಧುರವಿದೆ.

ಬೆಲೆ: 0-12-0, ಟ. ಖ. 0-9-0.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿದ್ದಾರೆ

ಧಾರಾಳ ಕಮಿಶನ್ ಕೊಡಲ್ಪಡುವುದು. ಬರೆಯಿರಿ:—

ಯಂ. ವಿ. ಪ್ರಸಾದಿಕೆ ಔಷಧಾಲಯ,
ಶಿವಮೊಗ್ಗಾ. (ಮೈಸೂರು ಸೀಮೆ)

ಡಾಕ್ಟರ್ ಜಿ. ಬಿ. ಇವರ

ಸುಗಂಧ ನಸ್ಯದ ಪುಡಿ

?

ನೀವು ಯಾರು? ಉಪಾಧ್ಯಾಯರೆ? ವರ್ತಕರೆ? ಆರಂಬಗಾರರೆ? ಅಥವಾ ಚದುರಂಗ ಆಡುವವರೆ? ನೀವು ಯಾರಾದರೂ ಸರಿ–ನಿಮಗೆ ಬೇಸರಿಕೆಯುಂಟಾಗಿ, ಕೆಲಸದಲ್ಲಿ ಆಸಕ್ತಿ ತಪ್ಪಿದಾಗ, ಡಾಕ್ಟರ್ ಜಿ. ಬಿ. ಇವರ ಸುಗಂಧ ನಸ್ಯದ ಪುಡಿಯನ್ನು ಉಪಯೋಗಿಸಿ. ಆಗ ನಿಮ್ಮಲ್ಲಿ ನವಚೇತನವುಂಟಾಗಿ, ಉತ್ಸಾಹವೂ ಸ್ಫೂರ್ತಿಯೂ ತೋರಿ ಬರುವುದು. **ಬೆಲೆ: ಬುಡ್ಡಿ ಒಂದಕ್ಕೆ ನಾಲ್ಕಾಣೆ** (ಟಪ್ಪಾಲು ಖರ್ಚು ಪ್ರತ್ಯೇಕ.)

ಗುರುಬಸವ ಅಂಡ್ ಕಂಪೆನಿ, ಲಿಮಿಟೆಡ್,

ಪೋಸ್ಟು ಬಾಕ್ಸು ನಂಬರು ೫೧೦, ಪಾರ್ಕು ಟೌನ್, ಮದರಾಸು.



ಪೊಲಿಶ್ ಫೈಟರ್ ಸ್ಕ್ವಾಡರ್ನನ್ನು ಪ್ರೆಸಿಡೆಂಟರು ವಿಮರ್ಶಿಸುತ್ತಿರುವುದು.

ಪೊಲಿಶ್ ಪ್ರೆಸಿಡೆಂಟರಾದ ಏಮ್. ರೆಸಿವಿಜ್‌ರು ಇಂಗ್ಲೆಂಡಿನಲ್ಲಿಯ ಒಂದು ಪೊಲಿಶ್ ಫೈಟರ್ ಸ್ಕ್ವಾಡರ್ನನ್ನು ವಿಮರ್ಶಿಸುತ್ತಿರುವುದು. ಈಚೆಗೆ ಹಲವು ಕಡೆ ವಿಜಯಗಳನ್ನು ಸಂಪಾದಿಸಿದ ಈ ಬಲವೀಗ, ಪೋಲೆಂಡಿನ ಧ್ವಜದ ಸಹಿತ ಪೆರೇಡ್ ಮಾಡುತ್ತಿರುವುದೀ ಚಿತ್ರದಲ್ಲಿದೆ.

ಬಲ್ಗೇರಿಯದ ಬೊರಿಸ್ ದೊರೆ!

ಹಿಟ್ಲರನ ಆಶ್ರಿತನಾಗಿದ್ದಾನೆ!

[ಇಂದು ಬಲ್ಗೇರಿಯವು ಜರ್ಮನ್ ಸೇನೆಗಳ 'ಕ್ಯಾಂಪ್' ಆಗಿದೆ. ಒಡೆಸ್ಸಾ, ಕ್ರೀಮಿಯಾ, ಕೊಕಾಸಸ್‌ಗಳ ಅತ್ತ ಜರ್ಮನರು, ಬಲ್ಗೇರಿಯವನ್ನು ತಮ್ಮ ಸಮರ ಸದನವನ್ನಾಗಿ ಮಾಡಿಕೊಂಡೇ ಯುದ್ಧ ಹೂಡುತ್ತಿದ್ದಾರೆ. ಯುರೋಪಿನ ಕೊನೆಯ ಸ್ವತಂತ್ರ ರಾಜ ರಾಷ್ಟ್ರವಾದ ಬಲ್ಗೇರಿಯಕ್ಕೂ ಏನೋ ಒಂದು ಕಾಲ ಬಂದಿದೆ. ಜರ್ಮನರೀಗ ಪ್ರವಾಸಿಗಳ ವೇಷವನ್ನು ಧರಿಸದೆಯೇ, ಬಲ್ಗೇರಿಯಕ್ಕೆ ಅಸಂಖ್ಯಾಕರಾಗಿ ನುಗ್ಗುತ್ತಿದ್ದಾರೆ.

ಬಲ್ಗೇರಿಯ–ರಷ್ಯಗಳೊಳಗಿನ ಸಂಬಂಧವೂ ಕೆಡುತ್ತ ಬಂದಿದೆ. ಜರ್ಮನಿಯ ಆಶ್ರಿತ ರಾಜ್ಯವಾಗಿರುವ ಬಲ್ಗೇರಿಯ ಏಕ್ಸಿಸ್ ರಾಷ್ಟ್ರಗಳ ಪಕ್ಷವನ್ನು ಹಿಡಿದು ಯುದ್ಧ ಸಾರುವುದೂ ಅಸಾಧ್ಯವಲ್ಲ.]

ಬಲ್ಗೇರಿಯದ ದೊರೆ ಬೋರಿಸನ ಜೀವನ ಪರಿಚಯವಿಲ್ಲಿದೆ. ಸ್ವಾಭಿಮಾನಿಯಾದ ಪ್ರಜಾಪ್ರೇಮಿಯಾದ ಬೋರಿಸನ ಜೀವನದ ಕೆಲವು ಸ್ವಾರಸ್ಯಕರ ಸನ್ನಿವೇಶಗಳು ಇಲ್ಲಿವೆ.

ಸಾದಾ ಜೀವನ

ಎರಡು ವರುಷಗಳಿಗೆ ಹಿಂದೆ, ಬೋರಿಸ್ ತನ್ನ ಜೆಲುವೆಯಾದ ಪತ್ನಿ ಅಯೊನ್ನಾಳೊಡನೆ ಬ್ರಿಟನ್ನನ್ನು ಸಂದರ್ಶಿಸಿದ್ದ. ಆ ಸಂದರ್ಶನದಲ್ಲಿ, ಅವರು ಎಲ್ಲರ ಮೆಚ್ಚುಗೆಗೂ ಪಾತ್ರರಾಗಿದ್ದರು. ಲಂಡನಿನ ಬೀದಿಗಳಲ್ಲಿ ಅವರು ನಡೆದಾಡಿದರು. ಸಮರಪಟುಗಳ ಯುನಿಫಾರ್ಮುಗಳನ್ನು ಪ್ರೀತಿಸದ, ಬೀದಿಯ ಬಳಿಯಿರುವ ಒಂದು ಕೆಫೆಯಲ್ಲಿ ಬೀರ್ ಕುಡಿಯುವ, 'ರಿಸರ್ವ್' ಮಾಡಿದ ಸ್ಥಾನಗಳಗೊಂದಲವಿಲ್ಲದೆ, ಇತರರಂತೆಯೇ ಹೋಗಿ ಸಿನೆಮಾ ನೋಡುವ ಒಬ್ಬ ದೊರೆಯಿಂದ ಜನರು ಆಶಿಸುವುದಾದರೂ ಇಂತಹ ದನ್ನೆ!

ಹಲವು ಹೆಸರಿನ ವ್ಯಕ್ತಿ

ತನ್ನ ಹಲವಾರು ಪ್ರವಾಸಗಳಲ್ಲಿ, ಎಷ್ಟೋ ಬಾರಿ, ಬೋರಿಸ್ ಬೇರೆ ಹೆಸರುಗಳನ್ನಿಟ್ಟುಕೊಂಡು ಪಿಡುತ್ತಾನೆ. ೧೯೩೩ರಲ್ಲಿ ಲಂಡನಿಗೆ ಹೋಗಿದ್ದಾಗ, "ಕೌಂಟ್ ರಿಲ್ಸ್‌ಕೋ" ಎಂದೂ "ಹ್ಯಾಂಡಿ ಜೀಫ್" ಎಂದೂ ಹೆಸರು ಧರಿಸಿದ್ದ.

ಒಮ್ಮೆ ಕೌಂಟ್ ಮೊರಾಂಡಿ ಎಂದು ಹೆಸರಿಟ್ಟುಕೊಂಡು, ಬೋರಿಸ್ ಒಂದು ಸ್ವಿಸ್ ಹೊಟೆಲಿನಲ್ಲಿದ್ದಾಗ, ಅಲ್ಲಿಯ ಮಾಲಕ ಅರಸನನ್ನು "ಮಹಾರಾಜರೇ!" ಎಂದು ಸಂಭೋದಿಸ ತೊಡಗಿದ. ಬೋರಿಸ್, "ನಿನ್ನ ಮಹಾರಾಜನನ್ನು ಸುಡು! ನಾನು ಇಲ್ಲಿ ಎಲ್ಲರಿಗೂ ಕೌಂಟ್ ಮೊರಾಂಡಿ; ಇಲ್ಲವಾದರೆ, ಈಗ ಹೊರಡುತ್ತೇನೆ," ಎಂದು ಬೆದರಿಕೆ ಹಾಕಿದ.

ಬೋರಿಸಿಗೆ ರಾಜಭೋಗಗಳ ಮೇಲೆ ಆಶೆಯಿಲ್ಲ. ಬಹಳ ಸರಳ ಜೀವನವನ್ನು ನಡೆಸುತ್ತಾನೆ. ಅವನ ರಾಜತನದ ಸೌಕರ್ಯವೇನೆಂದು ಯಾರಾದರೂ ಪ್ರಶ್ನಿಸಿದರೆ, "ರೈಲು ಬಂಡಿಯನ್ನು ನಡೆಸಬೇಕು ಎಂದು ಇಚ್ಛೆಯುತ್ಪನ್ನವಾದಾಗ ಹಾಗೆ ಮಾಡುವುದು," ಎಂದು ಆ ದೊರೆ ಉತ್ತರವಿತ್ತಾನು!

"ಯಂತ್ರ ಚಾಲಕ" ಅರಸ

ಅವನ ಪ್ರಯಾಣಗಳು, ಅವನಿಗೆ, "ಯಂತ್ರವಾಹಕ ಅರಸ"ನೆಂಬ ಬಿರುದನ್ನು ತಂದಿವೆ. ೧೯೨೯ರಲ್ಲಿ ಮುದ್ರಿಸಿದ ಅಂಚೆ ಚೀಟುಗಳಲ್ಲಿ, ಯಂತ್ರವನ್ನು ಬಿಡುತ್ತಿರುವ ಬೋರಿಸನ ಚಿತ್ರವಿತ್ತು. ಬ್ರಿಟನನ್ನು ಸಂದರ್ಶಿಸಿದ್ದಾಗಲೊಮ್ಮೆ, ಬೋರಿಸ್ ೫೦ ಮೈಲುಗಳ ತನಕ ಕೆಲವೊಮ್ಮೆ ಗಂಟೆಗೆ ೮೮ ಮೈಲುಗಳ ವೇಗದಲ್ಲಿ ಕಾರು ಓಡಿಸಿಯೂ ಈತ ಸಂತುಷ್ಟನಾಗಿದ್ದಾನೆ.

ಯಂತ್ರ ಚಾಲನೆಯಲ್ಲಿ ಅವನೇನೂ ನಿಷ್ಣಾತನಲ್ಲ. ಆದರೂ ಬಂಡಿಯನ್ನು ಹತೋಟಿಯಲ್ಲಿಟ್ಟು, ಸಮಯಕ್ಕೆ ಸರಿಯಾಗಿ ಓಡಿಸಲು ಪ್ರಯತ್ನ ಪಡುತ್ತಾನೆ. ಒಂದು ಬಾರಿ, ಟೈನೊಂದನ್ನು, ಕೆಲವು ನಿಮಿಷ ತಡಮಾಡಿ ತಂದುದಕ್ಕೆ ರೈಲ್ವೇ ಮೇಲಧಿಕಾರಿಯಿಂದ ಚೆನ್ನಾಗಿ ಬೈಸಿಕೊಂಡಿದ್ದಾನೆ. ಮುಖಕ್ಕೆಲ್ಲ ಇದ್ದಲಿನ

(೧೫ನೇ ಪುಟಕ್ಕೆ ಮುಂದರಿಸಿಯದೆ)

ಸಾಂಬಕ್ ಉಪಯೋಗಿಸಿ ನಿಮ್ಮ ಪಾದದ ನೋವುಗಳನ್ನು ಗುಣಪಡಿಸಿಕೊಳ್ಳಿ

ಪ್ರತಿ ರಾತ್ರಿಯಲ್ಲೂ ಅದನ್ನು ಸರಿಯಾಗಿ ತಿಕ್ಕಿ ಸವರಿಕೊಳ್ಳಿ.

ಪಾದಗಳ ನೋವಿಗೆ, ಬಾವುಗೊಂಡ ಮಣಿಗಂಟುಗಳಿಗೆ, ಸಾಂಬಕ್‌ಗೆ ಸಮಾನವಾದ ಚಿಕಿತ್ಸೆ ಬೇರಿಲ್ಲ. ಪ್ರತಿದಿನವೂ, ಮಣಿಗಂಟು, ಮೇಲಡಿ, ಆಂಗಾಲು, ಕಾಲ್ಬೆರಳುಗಳ ಮಧ್ಯಕ್ಕೂ ನಿಧಾನವಾಗಿ ಸಾಂಬಕ್ ಸವರಿ ತಿಕ್ಕಿಕೊಳ್ಳಿ. ಸಾಂಬಕ್‌ನಲ್ಲಿರುವ ಉತ್ತಮ ವನಸ್ಪತಿತೈಲಗಳು ಜರ್ಮದೊಳಗೆ ಹೀರಲ್ಪಟ್ಟು, ನೋವು ಉಪಶಮನಗೊಳ್ಳುವುದು. ದಡ್ಡು (ಆಣಿ) ಹಡಗೊಳ್ಳುವುದು; ಬಿರುಕು ಕೂಡಿಕೊಂಡು ನೀವು ಪುನಃ ಎಂದಿನಂತೆ ನಡೆಯುವಂತಾಗುವುದು.

ಸಾಂಬಕ್ ರೂಪ್ಯಾ ಒಂದು ಅಥವಾ ರೂ. 2–4–0; ಸಾಬೂನ್ ರೂಪ್ಯಾ ಒಂದು. ಪೌಡರು ರೂಪ್ಯಾ ಒಂದು.
ಏಜೆಂಟರು:—ಮೆಸರ್ಸ್ ಧಾಥಾ & ಕೊ., ಪಿ. ಟಿ.
ಮದ್ರಾಸು.

ಯಾವಾಗಲೂ ಸಾಂಬಕ್ ಉಪಯೋಗಿಸಿ

ZAM-BUK

ಪ್ರಾಣಿಗಳ ಕೊಬ್ಬಿನಿಂದ ವಿರಹಿತವಾಗಿದೆ

In the language of flowers

Blue SALVIA MEANS Wisdom

Need we say more? It is wisdom, foresight, thoughtfulness to order your seeds, bulbs and gardening requisites from Pocha's. Famous in India, Burma and Ceylon for the last 55 years for Seeds of Pedigree and quality.

Post a card now for Pocha's free Catalogue

Pestonjee P. Pocha & Sons
Seed Merchants
8, Napier Road, Poona

ಈ ವಾರದ ಕಥೆ

ಕಾರಣ ? ? ? ? ?

ಕಥೆಗಾರ:—ಮಾಸ್ಟರ್ ಬಿ. ಎಸ್. ಮುಹಮ್ಮದ್ ಕುಮಾರ್

ಸಂಜೆ ೫॥ ತಾಸಾಗುವುದೇ ತಡ; ಆಗ ನಾವೆಲ್ಲರೂ,—ಅಂದರೆ, ನಾನು, ರತ್ನಾಕರ್, ಹರೀಶ್, ಸುಧಾಕರ್ ನಾವೆಲ್ಲಾ ಒಂದೇ ಆಫೀಸಿನಲ್ಲಿ ಕೆಲಸ ಮಾಡುತಿದ್ದವರು,–ಮನೋಹರ ರಾಯರಲ್ಲಿಗೆ ಹೋಗುತಿದ್ದೆವು. ಇದೂ ನಮ್ಮ ಆಫೀಸಿನ ಕೆಲಸದಂತೆ ಒಂದು ಕೆಲಸ; ಕಾರಣ—ಮನೋಹರ ರಾಯರು, ರಿಟೈರ್ಡ್ ಐ. ಸಿ. ಎಸ್. ಆಫೀಸರರು. ೫॥ ತಾಸಿಗೆ ಅವರಲ್ಲಿಗೆ ಹೋಗಿ, "ಪೇಪರ್" ಓದುವುದು ಇಲ್ಲವೆ ಇತರ ವಿಷಯಗಳ ಕುರಿತು ಚರ್ಚಿಸುವುದೇ ನಿತ್ಯದ ಉದ್ಯೋಗ. ಅಂತೂ, ೮ ತಾಸಿನ ವರೆಗೆ ಅಲ್ಲೇ ಇರಬೇಕು ಎಂಬುದು ರಾಯರ ಅಪ್ಪಣೆ. ಸಂಜೆಯ ಕಾಫಿಯೂ ನಮಗೆ ಅಲ್ಲೇ. ಅದೂ ಸಂಭ್ರಮದಿಂದಲೇ ನಡೆಯುತಿದ್ದಿತು. ರಾಯರಿಗೆ ನಮ್ಮೆಲ್ಲರ ಮೇಲೆ ಬಹಳ ಪ್ರೀತಿ. ನಮ್ಮಲ್ಲಾರಾದರೂ ಒಬ್ಬನೇ ಒಬ್ಬನು ದುರ್ದೈವವಶಾತ್ "ಗೈರುಹಾಜರಾದಲ್ಲಿ" ಆ ದಿನ ಅವರಿಗೆ ಹಿಡಿಸಲಾರದಷ್ಟು ವ್ಯಥೆ.

ಇಂದು ನಾನು ಹೋಗುವಾಗ, ತುಸು ವೇಳೆಯಾಯಿತು. ಅಂಗಳದ ಎದುರಿಗಿರುವ ಉದ್ಯಾನವನ್ನು ಹೊಕ್ಕುವಾಗಲೇ, ನನ್ನೆದುರಿಗೆ ವ್ಯಾಯ ದಾಟುತ್ತಿದ್ದ ಒಬ್ಬ ಹೆಂಗಸು ಹಾದು ಹೋದಳು. ಆಕೆ ರಾಯರ ಮನೆಯಿಂದಲೇ ಹೊರಟು ಹೋದಳೆಂಬುದನ್ನು ನಾನು ನನ್ನಲ್ಲೆ ಊಹಿಸಿಕೊಂಡೆ. ಅಂತೇ ಒಳಹೊಕ್ಕು, ಹಜಾರಕ್ಕೆ ಬಂದು ಕುಳಿತು ಕೊಳ್ಳುವುದಕ್ಕೆ ಮೊದಲಾಗಿಯೇ, ರತ್ನಾಕರನು ನನ್ನ ಕಿವಿಯಲ್ಲುಸುರಿದ—"ಅದೋ, ಈಗ ನಿನ್ನೆದುರಿಗೆ ಹಾದು ಹೋದ ಆ ವಿಧವೆಗೆ, ರಾಯರು ಒಂದು ಸಾವಿರ ರೂಪಾಯಿಗಳನ್ನು ಕೊಟ್ಟರು!"

ರಾಯರು ತುಸು ದೂರ ಆರಾಮು ಕುರ್ಚಿಯಲ್ಲಿ ಬಿದ್ದುಕೊಂಡಿದ್ದರು. ನಾನು ಅಚ್ಚರಿಗೊಂಡು, ಫಕ್ಕನೆ ರಾಯರ ಮುಖವನ್ನೀಕ್ಷಿಸಿದೆ. ಆದರೆ ಅವರೂ ನಮ್ಮನ್ನೇ ನೋಡುತಿದ್ದರು. ಬಹುಶಃ ಅವರಿಗೆ ನಮ್ಮ ಮಾತು ಕೇಳಿಸಿರಬೇಕು. ಯಾಕಂದರೆ, ಆಗವರ ಮುಖದಲ್ಲಿ ಮುಗುಳು ನಗು ಮಿನುಗುತಿದ್ದಿತು; ಅವರಂದರು—

"ಹೌದು! ನಾನಾ ವಿಧವೆಗೆ ಒಂದು ಸಾವಿರ ರೂಪಾಯಿಗಳನ್ನು ಕೊಟ್ಟೆನು. ಆಕೆ ಇಲ್ಲೊಂದು ಆಶ್ರಮವನ್ನು ತೆರೆಯುವಳಂತೆ. ನಾನೂ ಅದಕ್ಕೆ ಆಗಾಗ ಕೈಲಾದ ಮಟ್ಟಿಗೆ ಸಹಾಯ ಮಾಡುವೆನೆಂದು ವಾಗ್ದಾನವನ್ನಿತ್ತಿದ್ದೇನೆ."

ನಾವೆಲ್ಲರೂ ಇನ್ನಷ್ಟು ಆಶ್ಚರ್ಯ ಭರಿತರಾದೆವು. ನಮಗೆ ಮಾತಾಡಲು ನಾಲಗೆಯೇ ಬರಲಿಲ್ಲ. ನಾವವರ ಮುಖವನ್ನೇ ಒಂದೇ ನೋಟದಿಂದ ಎವೆಯಿಕ್ಕದೆ ನೋಡುತಿದ್ದೆವು. ಪುನಃ ಅವರ ಮುಖದಲ್ಲಿ ಗಂಭೀರತೆಯು ಮೂಡಿತು; ಅವರಂದರು—

"ನಿಮಗಾಶ್ಚರ್ಯವಾಯಿತಲ್ಲವೇ? ಆಗಲೇ ಬೇಕು. ಅದಕ್ಕೊಂದು ಕಾರಣವಿದೆ; ಅದೊಂದು ಹಳೆಯ ಕಥೆ!" ರಾಯರು ಸುಮ್ಮನಾದರು.

ನಾವವರನ್ನು ಬಲಾತ್ಕರಿಸಿದೆವು—ಅದೇನು ಆ ಕಥೆ? ಅದನ್ನು ಹೇಳಲೇ ಬೇಕು; ನಾವಾದರೂ ಅನ್ಯರಲ್ಲ; ನಮ್ಮ ಗದನ್ನು ಕೇಳಬೇಕಾಗಿದೆ—ಎಂದು. ಕೊನೆಗೆ ರಾಯರೂ ಒಪ್ಪಿ ಹೇಳಲುಪಕ್ರಮಿಸಿದರು:—

"ನಮ್ಮೂರು ಅದೊಂದು ಚಿಕ್ಕ ಹಳ್ಳಿ; ನಾನು ಐ. ಸಿ. ಎಸ್. ಪರೀಕ್ಷೆ ಕೊಟ್ಟು ಮನೆಗೆ ಮರಳಿದ್ದೆನು. ಬಹಳ ಕಾಲದಿಂದ ಊರನ್ನು ಅಗಲಿದ್ದ ನನಗೆ, ಹೆಚ್ಚಿನವರ ಪರಿಚಯವೇ ಇದ್ದಿಲ್ಲ. ಆದರೂ ನಾನು ಐ. ಸಿ. ಎಸ್. ಆಫೀಸರನಾದುದರಿಂದ, ಎಲ್ಲರಿಗೂ ನನ್ನಲ್ಲಿ ಭಾರೀ ಗೌರವಾದರ. ದಿನ ಒಂದಕ್ಕೆ ಹತ್ತಿಪ್ಪತ್ತು ಜನರಾದರೂ ಬಂದು, ನನ್ನ ಭೇಟಿ ಮಾಡದ ದಿನವಿಲ್ಲ. ಎಲ್ಲರಿಗೂ ನಾನೊಂದು ಆದರ್ಶ ವ್ಯಕ್ತಿ; ಹೆಣ್ಣು ಮಕ್ಕಳಿದ್ದ ಹೆತ್ತವರಿಗೆ ನಾನೊಂದು ಆಶಾವಸ್ತು; ತರುಣಿಯರಿಗೆ ನಾನೊಂದು ಆಕರ್ಷಕ ವ್ಯಕ್ತಿ. ಅಂತೂ, ಒಬ್ಬೊಬ್ಬರಿಗೆ ನಾನು ಒಂದೊಂದು ವಿಧವಾಗಿದ್ದು; ಒಂದೊಂದು ರೀತಿಯವನಾಗಿದ್ದೆ. ಒಂದೇ ಮಾತಿನಿಂದ ಹೇಳುವುದಿದ್ದರೆ, ಎಲ್ಲರಿಗೂ ನಾನೊಂದು ಹೆಮ್ಮೆಯ ತರುಣ; ಹೀಗಿತ್ತು ಅಂದಿನ ಮಾತು!

"ನಾನು ಬಂದು ಅನೇಕ ದಿನಗಳಾಗಿ ಹೋಗಿದ್ದುವು. ನಮ್ಮ ನೆರೆಯಲ್ಲೊಂದು ಕಡೆ ಒಂದು ವಿವಾಹವು ನಡೆಯಿತು. ಅದಕ್ಕೆ ನನ್ನನ್ನು ಬಹಳ ವಿಜೃಂಭಣೆಯಿಂದ ಕರೆದೊಯ್ದರು. ನನಗೆ ಆ ಹಳೆ ಸಂಪ್ರದಾಯವು, ಬಹಳ ತಮಾಷೆಯಾಗಿ ಕಾಣುತಿದ್ದಿತು. ಮುಹೂರ್ತ ಸಮೀಪಿಸಲು, ವಧುವರರನ್ನು ಕರೆತಂದು ಅಗ್ನಿಕುಂಡದ ಬಳಿ ಕುಳ್ಳಿರಿಸಿದರು. ಪುರೋಹಿತರಾದ ಮಾಧವ ಭಟ್ಟರ ಬಳಿಯಲ್ಲೇ ನಾನೂ ಕುಳಿತಿದ್ದೆ. ಕಾರಣ, ವಿವಾಹದ ಪ್ರತಿಯೊಂದು ರೀತಿ ನಡೆನುಡಿಗಳನ್ನೂ ತಿಳಿದುಕೊಳ್ಳುವ ಕುತೂಹಲವು ನನ್ನಲ್ಲುಂಟಾಗಿದ್ದಿತು. ಅಂತೇ, ಒಂದೊಂದೇ ತಿಳಿದುಕೊಳ್ಳುತ್ತಿದ್ದೆ.

"ವಿವಾಹವು ಮುಗಿಯಿತು. ಸ್ತ್ರೀಯರ ಹಾಡು ಪ್ರಾರಂಭವಾಯಿತು. ಎಲ್ಲರೂ ಒಬ್ಬರನ್ನೊಬ್ಬರು ಒತ್ತಾಯಿಸುತಿದ್ದರು. ಕೊನೆಗೊಂದು ಕೋಕಿಲ ಕಂಠದ ಮಧುರ ಸ್ವರವು, ನನ್ನ ದೃಷ್ಟಿ ಪಥವನ್ನಾಕಡೆಗೊಯ್ದಿತು. ಸುಮಾರು ಹನ್ನೆರಡು ಹದಿಮೂರು ವರ್ಷ ಪ್ರಾಯದ ಸುಕುಮಾರಿ ಹಾಡುತ್ತಿದ್ದಳು. ಆಕೆಯ ವರ್ಣವು ಸುವರ್ಣದಂತೆ ಮನೋಹರವಾಗಿ, ಬೆಳದಿಂಗಳಿನಂತೆ ನಿರ್ಮಲವಾಗಿದ್ದಿತು; ಸ್ನೇಹಮಯವಾಗಿದ್ದಿತು. ಕಮಲದ ದಳಗಳಂತಿದ್ದ ನೇತ್ರಗಳು, ಧೈರ್ಯ, ಗಾಂಭೀರ್ಯ, ಪವಿತ್ರತೆಗಳ ಚಿನ್ಹೆಗಳಾಗಿದ್ದುವು. ಕರಿಯ ಮುಂಗುರುಳು, ಗುಂಗುರಾಗಿ, ಭ್ರಮರಗಳಂತಿದ್ದು, ಮುಖ ಪದ್ಮವನ್ನು ಆವರಿಸಿದ್ದುವು. ದೀರ್ಘವೂ, ಸೂಕ್ಷ್ಮವೂ ಆದ ತನುವಲ್ಲರಿಯು, ಮುಖಪದ್ಮವನ್ನು ಧರಿಸಿದ ಮೃಣಾಲದಂತೆ ಶೋಭಿಸುತಿದ್ದಿತು. ನಾನು ದಿಙ್ಮೂಢನಾದೆ; ನನ್ನ ಇಂದಿನ ವರೆಗಿನ ಜೀವನದಲ್ಲಿ, ನಾನು ಅನೇಕ ತರುಣಿಯರನ್ನು ಕಂಡಿದ್ದೆ. ಆದರೆ ಯಾರಲ್ಲೂ, ಇಂಥ ಮನಮೋಹನ ಸ್ವರೂಪವನ್ನು ಕಂಡದ್ದಿಲ್ಲ!

"ರೂಪಕ್ಕೆ ಸರಿಯಾದ ಕಂಠ; ಸಾಕ್ಷಾತ್ ರತಿ! ನನ್ನ ನೋಟವನ್ನು ಹಿಂತೆಗೆಯಲಾರದಾದೆನು. ನನ್ನ ಮನವು, ನನ್ನ ಜೀವನದಲ್ಲಿ ಪೊದಲ ಬಾರಿಯಾಗಿ ಆಕೆಯಲ್ಲಿ ನೆಟ್ಟಿತು. ಹಾಡು ನಿಂತೊಡನೆ, ನಾನು ಮೆಲ್ಲನೆ ಆ ತರುಣಿಯು ಯಾರೆಂದು ಮಾಧವ ಭಟ್ಟರೊಡನೆ ಪ್ರಶ್ನಿಸಿದೆನು. ಅವರು,—ಅದು ಆಚೆ ಮನೆ ಶ್ರೀನಿವಾಸ ಶಾಸ್ತ್ರಿಗಳ ಮಗಳೆಂದೂ, ಅಲ್ಲದೆ ಅವರು ಬಡವರಾದುದರಿಂದ, ವರದಕ್ಷಿಣೆಯ ಪಿಶಾಚಿಯಿಂದಾಗಿ, ಇನ್ನೂ ಮದುವೆ ಮಾಡದೆ ಹಾಗೆಯೇ ಇಟ್ಟಿದ್ದಾರೆಂದೂ ತಿಳಿಸಿದರು. ನನಗೆ ಒಮ್ಮೆಲೆ ದುಃಖವು ಉಕ್ಕೇರಿತು. ಇಂಥ ರತ್ನವನ್ನು ಪಡೆಯಲು ಎಷ್ಟು ಪುಣ್ಯವನ್ನು ಗಳಿಸಬೇಡ? ಅನ್ನಿಸಿತು.

"ಊಟೋಪಚಾರಗಳೆಲ್ಲಾ ತೀರಿದ ಬಳಿಕ, ನನ್ನನ್ನು ಅಂದು ಅಲ್ಲೇ ಕುಳಿತುಕೊಳ್ಳುವಂತೆ ಒತ್ತಾಯಿಸಿದರು. ನನಗೂ ಕುಳಿತುಕೊಳ್ಳುವ ಆಪೇಕ್ಷೆ ಇದ್ದಿತು. ಹಾಗೇ ನಾನು ಕುಳಿತುಕೊಂಡೆನು. ಕೆಲ ಹೊತ್ತಿನ ಮೇಲೆ, ನಾನೊಂದು ಕಾಗದದಲ್ಲಿ,– ನಾನಾಕೆಯನ್ನು ವಿವಾಹವಾಗುವೆನೆಂದೂ, ಅದಕ್ಕಾಕೆ ಒಪ್ಪುವುದಾದರೆ, ತನ್ನ ಮುಡಿಯಲ್ಲಿ ಧರಿಸಿದ್ದ ಆದೊಂದು ಗುಲಾಬಿ ಹೂವನ್ನು, ನನಗೆ ಕೊಡಬೇಕೆಂದೂ ಬರೆದು, ಸಮಯ ಸಾಧಿಸಿ ಆಕೆಯ ಕೈಯ್ಯಲ್ಲಿತ್ತೆನು. ಪರಂತು, ಆಕೆಯಿಂದ ಅದಕ್ಕೆ ಯಾವ ಪ್ರತ್ಯುತ್ತರವೂ ಸಿಗಲಿಲ್ಲ; ಹೂವೂ ದೊರೆಯಲಿಲ್ಲ. ನಾನು ನಿರಾಶನಾದೆ. ನನ್ನನ್ನು ವಿವಾಹವಾಗಲು, ಆಕೆಗೆ ಸಮ್ಮತವಿಲ್ಲವೆಂದು ನನಗೆ ದೃಢವಾಯಿತು. ನಾನು ನನ್ನಲ್ಲೆ ಮರುಗಿದೆ. ನನ್ನ ಹೃದಯವು ಬೆಂದು ಬೆಂಡಾಯಿತು. ನನಗೆ ಊರಲ್ಲಿರುವುದು ಕಷ್ಟವಾಗಿ ತೋರಿತು. ಅದಕ್ಕೆ ಸರಿಯಾಗಿ, ನನಗೆ ಕೆಲಸಕ್ಕೆ ಹಾಜರಾಗುವಂತೆ ಅಪ್ಪಣೆ ಬಂದೇ ಬಿಟ್ಟಿತು. ಒಡನೆ ನಾನೂ ಹೊರಟುಹೋದೆ.

"ಈ ವಿಷಯಕ್ಕೆ ಇಂದಿಗೆ ಮುಪ್ಪತ್ತೈದು ವರ್ಷಗಳಾದುವು. ಇಂದು ಮಧ್ಯಾಹ್ನ ಒಬ್ಬ ವಿಧವೆ ಇಲ್ಲಿಗೆ ಬಂದಳು,—ಆಕೆಯೇ ಈಗ ಹೋದವಳು; ನಾನು ಹಣ ಕೊಟ್ಟವಳು. ಆಕೆ ಬಂದವಳೇ, ನನ್ನೆದುರಿಗೆ ನಿಂತುಕೊಂಡಳು. ನನಗಾಕೆಯನ್ನು ಹಿಂದೊಮ್ಮೆ ನೋಡಿದ ನೆನಪಿದ್ದಿಲ್ಲ. ನಾನಾಕೆಯನ್ನು ನೆಟ್ಟ ದೃಷ್ಟಿಯಿಂದ ನೋಡತೊಡಗಿದೆ. ನನಗೆ ಬಗೆಹರಿಯಲಿಲ್ಲ. ಆಗಾಕೆಯಂದಳು,— "ನಿಮಗೆ ನನ್ನ ಪರಿಚಯವು ಮರೆತಿರಬಹುದು; ಇದೋ! ಇದನ್ನು ಕಂಡೊಡನೆ ನಿಮಗೆ ನನ್ನ ಪರಿಚಯವು ಹತ್ತಬಹುದು!" ಎಂದವಳೇ ಒಂದು ಹಳೇ ಕಾಗದವನ್ನು, ನನ್ನ ಕೈಯಲ್ಲಿತ್ತಳು.

"ಅದನ್ನು ನೋಡಿದೊಡನೇ, ನನಗೆ ನೆನಪಾಯಿತು. ಆಕೆಯ ಪರಿಚಯವಾಯಿತು. ಅಂದು ನಾನು ಬರೆಕೊಟ್ಟ ಕಾಗದವೇ ಅದಾಗಿದ್ದಿತು. ಅಂದಿನ ಆ "ರತಿ"ಯೇ ಇಂದಿನ ಈ "ವಿಧವೆ"ಯಾಗಿದ್ದಳು. ಆಕೆಯ ಕಣ್ಣುಗಳಲ್ಲಿ ನೀರು ತುಂಬಿದ್ದಿತು. ನನ್ನ ಆಗಿನ ಮನೋಯಾತನೆಯನ್ನು ಸಹಿಸಲಾಗುತಿದ್ದಿಲ್ಲ. ಪುನಃ ಆಕೆಯೇ ಮುಂದರಿಸಿದಳು—"ನೀವು ಈ ಪತ್ರವನ್ನು ನನಗೆ ಕೊಟ್ಟಾಗ, ನಾನು ನಿರಕ್ಷರಕುಕ್ಷಿಯಾಗಿದ್ದೆನು; ಅವಿದ್ಯಾವತಿಯಾಗಿದ್ದೆನು. ನನಗೆ ಓದಲು ಬರುತಿದ್ದಿಲ್ಲ. ನಿಮ್ಮ ಪತ್ರವನ್ನು ಇನ್ನೊಬ್ಬರಿಗೆ ತೋರಿಸುವ ಧೈರ್ಯವೂ ನನಗೆ ಬರಲಿಲ್ಲ. ಆದುದರಿಂದ, ನೀವೇ ಪತ್ರವನ್ನು ಜೋಪಾನ

(ಇಲ್ಲೇ ಪುಟಕ್ಕೆ ಮುಂದುವರಿಸಿಯೆದೆ)

To serve you —
— Is our Ambition.

Resources of over A Crore and over Forty Lacs of Surplus Funds—these are the means by which we can serve you. The men in our thirty-eight offices, from the senior-most Director to the junior-most employee, are all eager to serve you. Come in to-day and tell us how we can serve you. Or, if you so prefer, we will call upon you at your request.

CANARA BANK, LIMITED.
ESTD: 1906.

ಕಳೆದ ವಾರ

ಭಾರತದ ರಾಜಕೀಯ ಸಮಸ್ಯೆ

ವೈಸರಾಯರ ಎಗ್ಜಿಕ್ಯುಟಿವ್ ಕೌನ್ಸಿಲಿನ ಎಂಟು ಮಂದಿ ಸದಸ್ಯರೂ ಭಾರತದ ರಾಜಕೀಯ ಸಮಸ್ಯೆಯನ್ನು ಬಗೆಹರಿಸಲು ನಿರ್ಧರಿಸಿದ್ದಾರೆ; ಅದರಲ್ಲಿ ಕೃತಾರ್ಥರಾಗದಿದ್ದರೆ, ಈ ಆಟವೆಲ್ಲ ವ್ಯರ್ಥ, ಬೆಲೆ ಸಾಲದ್ದೆಂದು ಅವರು ತಿಳಿಯುತ್ತಾರೆ—ಹೀಗೆಂದು ಒಂದು ಪತ್ರಿಕೆಯನ್ನುತ್ತಿದೆ. ಸರಿಯೇ. ಈ ಎಂಟು ಮಂದಿಯೂ ಆ ರೀತಿಯ ನಿರ್ಧಾರದಿಂದ ಬದ್ಧರಾಗಿರುವರೆಂಬುದು ಸಂತೋಷ. ಆದರೆ ಆ ಆಟವು ವ್ಯರ್ಥವೆಂದಾದಲ್ಲಿ, ಅವರು ಅದನ್ನು ಅಲ್ಲಿಗ್ಗೇ ಕೈಬಿಡುವರೇ? ಎಂ। ಚರ್ಚಿಲ್ ಸಾಹೇಬರೇನೋ, ತಮ್ಮ ಮನಸ್ಸಿನಲ್ಲಿ ಭಾರತದ ಕುರಿತು ಇರುವುದೇನೆಂದು ಹೇಳಿದ್ದಾರಾಗಲೇ. ಮತ್ತೆ ಅವರಾ ಮನೋಗತಕ್ಕೆ ತಿಲಾಂಶವೂ ಭಂಗ ಭಾರದಂತೆ ಇಲ್ಲಿ ನೋಡಿಕೊಳ್ಳಲು ಭಾರತದ ವೈಸ್ರಾಯ್ ಪ್ರಭುಗಳು ಹೇಗೂ ಇದ್ದೇ ಇದ್ದಾರೆ. ಆದರೂ ಆಶಾ ಜ್ಯೋತಿ ಎಂದೂ ಆರದ ಕೆಲ "ಅಕ್ಷಯ ನಿರೀಕ್ಷೆ"ಯ ಮುಂದಿ ನಮ್ಮಲ್ಲಿ ಕಲವರಿಲ್ಲದೇ ಇಲ್ಲ. ತಮ್ಮಲ್ಲಿಯೂ ನಂಬಿಕೆ ಇಲ್ಲದ, ತಮ್ಮ ದೇಶೀಯರಲ್ಲಿಯೂ ವಿಶ್ವಾಸ ವಿರಿಸದ ಅವರಾ ಹಾರೈಕೆಯ ಗತಿ, ಮುಂದೇನಾಗುವುದೆಂದು ಅವರಿಗೆ ತಿಳಿಯದಿದ್ದರೂ, ಇತರರಿಗೆ ತಿಳಿದುದೇ ಎನ್ನುವ.

* * * *

ಮಿ। ಜಿನ್ನರವರ ಶಿಸ್ತು ಕಾನೂನಿನ

ದಂಡ ಪ್ರಯೋಗವು, ನಾನಾ ಕಡೆಗಳಲ್ಲಿ ನಾನಾ ಫಲಗಳನ್ನು ಉಂಟು ಮಾಡಿವೆ. ಪಂಜಾಬಿನ ಪ್ರಧಾನರು ತಾವು ತಪ್ಪು ಗ್ರಹಿಕೆಯ ಬೋನಿಗೆ ಬಿದ್ದೆವೆಂದು ವ್ಯಥೆಪಟ್ಟು ಮಿ। ಜಿನ್ನಾರವರ ಆಜ್ಞೆಯನ್ನು ಶಿರಸಾವಹಿಸಿ ಪಾಲಿಸಿದ್ದಾರೆ. ಬಂಗಾಳ ಪ್ರಧಾನರು, ತಮ್ಮ ಅಭಿಪ್ರಾಯ ಸರಿ ಎಂದೂ ಮಿ। ಜಿನ್ನರ ಅಭಿಪ್ರಾಯವೇ ತಪ್ಪೆಂದೂ ನಂಬಿದರೂ, ಮುಸ್ಲಿಂ ಪ್ರಪಂಚದಲ್ಲಿ ಒಡಕು ಬರ ಬಾರದೆಂದು ಮಿ। ಜಿನ್ನರ ಅಪ್ಪಣೆಗೆ ತಲೆ ಬಗ್ಗಿಸಿದ್ದಾರೆ. ಹೀಗೆ ಈ ಮುಸ್ಲಿಂ ಲೀಗ್ ಪುರುಷಶ್ರೇಷ್ಠರು ಲೀಗಿನ ಆಜ್ಞೆಗೆ ತತ್ತರಿಸಿ ಅದನ್ನು ಮನ್ನಿಸಿರುವಾಗ, ತನ್ನ ತೀರ್ಮಾನದಂತೆಯೇ ಧೈರ್ಯಪೂರ್ವಕವಾದ ಕಾರ್ಯನೀತಿಯೊಡನೆ ಮುನ್ನುಗ್ಗಿದ ಈ ಕೀರ್ತಿಯ ಭಾಗ್ಯ, ಒಬ್ಬ ಮಹಿಳೆಯನ್ನೇ ಕಾದು ಕೂಂಡಿದ್ದಿತು! "ನ್ಯಾಶನಲ್ ಡಿಫೆನ್ಸ್ ಕೌನ್ಸಿಲಿನ" ಒಬ್ಬಳೇ ಒಬ್ಬ ಮಹಿಳಾ ಸದಸ್ಯೆಯನ್ನೂ "ನೀವೂ ರಾಜಿ ಕೊಡಬೇಕು" ಎಂದು ಲೀಗ್ ಪ್ರೆಸಿಡೆಂಟರು ಕೇಳುವ ಸಮಯದಲ್ಲಿ, ಮಹಮ್ಮದೀಯರ ಕಾನೂನಿನ ಮೇರೆಗೆ, ಮುಸ್ಲಿಂ ಮಹಿಳೆಯರಿಗೆ ದೊರಕಬೇಕಾದ ಹಕ್ಕು ಬಾಧ್ಯತೆಗಳನ್ನು ಅವರಿಗೆ ಕೊಡಿಸುವಲ್ಲಿ, ಅದೇ ಲೀಗ್ ಪ್ರೆಸಿಡೆಂಟರೇ ಯಾವ ಪ್ರಯತ್ನಗಳನ್ನೂ ನಡೆಸಲಿಲ್ಲವೇಕೆಂದು ಆಕೆ ವಿಸ್ಮಯಗೊಂಡಿದ್ದಾರೆ!

* * * *

"ಇಂಡಿಯಕ್ಕೆ ಅಪಾಯ"

ಈ ಕುರಿತು, ಕಲ್ಕತ್ತೆಯ ಪೋಲೀಸ್ ಮುಖ್ಯಾಧಿಕಾರಿಗಳು ಒಂದು ಬ್ರಾಡ್‌ಕಾಸ್ಟ್ ಮಾಡುತ್ತ, ಇಂಡಿಯದ ಭಿನ್ನ ಜಾತಿಗಳಲ್ಲಿ ಇರಬೇಕಾದ ಒಗ್ಗಟ್ಟಿನ ಅವಶ್ಯಕತೆಯನ್ನೂ, ಇಂಡಿಯದ ಮುಂದಾಳುಗಳು ಹೇಗೆ ಭೂರಿ ಜನರನ್ನು ಇತ್ತ ಒಟ್ಟುಗೂಡಿಸಿ, ಹಿಂದೀ ಜನಾಂಗವನ್ನು ಯಾವ ರೀತಿಯಲ್ಲಿ–ಹಿಂದೆಂದೂ ಕಾಣದ–ಅಪೂರ್ವವಾದ ಉನ್ನತಿಯ ಮಟ್ಟಕ್ಕೇರಿಸಬಹುದೆಂದೂ ಮುಂತಾಗಿ ತಿಳಿಸಿದರು. ಆದರೆ, ಇದೇ ಅಭಿಪ್ರಾಯವನ್ನೇ ಅವರು ದಯವಿಟ್ಟು ಬ್ರಿಟಿಷ್ ಅಧಿಕಾರಿಗಳಲ್ಲಿಯೂ ಬೇರೂರಿಸಲು ಯತ್ನಿಸಿದರೆ ಚೆನ್ನಾಗಿದ್ದೀತು; ಇಂಡಿಯದ ಜನನಾಯಕರೂ ಇವರಿಗೆ ಹಲವು ಬಾರಿ ವಂದನೆಗಳನ್ನು ಸಮರ್ಪಿಸುವಂತಾದೀತು. ವಸ್ತುತಃ, ಭಾರತದ ರಾಜ್ಯರಚನೆಯನ್ನು ರೂಪಿಸಿ ಅದಕ್ಕೆ ಜೀವಕಳೆಯನ್ನು ಕೊಡುವ ಬ್ರಿಟಿಷ್ ರಾಜನೀತಿಜ್ಞರು, ಅದರಲ್ಲಿ ತಮ್ಮ ಪೌರೋಹಿತ್ಯಧ ಪಾರುಪತ್ಯವನ್ನು ಒಂದಿಷ್ಟು ಕಡಿಮೆ ಮಾಡಿದರೆ, ಆಗ ಇಂಡಿಯದ ನಾನಾ ಜಾತಿಗಳಲ್ಲಿ ಒಗ್ಗಟ್ಟನ್ನು ಸ್ಥಾಪಿಸಲು ಇಂಡಿಯದ ಮುಖಂಡರಿಗೆ ಬಹಳ ಸಹಾಯವಾಗುವುದು ಎಂಬುದು ನಿಸ್ಸಂದೇಹ. ನಿಜವಾಗಿಯೂ ಪ್ರತ್ಯೇಕ ಮತದಾರ ಮಂಡಲ, ಜಾತಿವಾರು ಎವಾರ್ಡು, ರಾಷ್ಟ್ರೀಯ ಕೇಳಿಕೆಗಳಿಗೆ ವಿರೋಧವಾದವನ್ನೇ ಕೇಳುವಂತೆ "ಮೈನಾರಿಟಿ"ಗಳಿಗೆ ಉತ್ತೇಜನ–ಇವುಗಳಿಂದ ಎಂದಿಗೂ ಭಿನ್ನ ಜಾತಿಗಳಲ್ಲಿ ಐಕತೆ ಉಂಟಾಗದು. ಉಪದೇಶಗಳಿಗಿಂತ ಆಚರಣೆ ಉತ್ತಮವೆಂಬುದನ್ನು ಇಲ್ಲಿಯೂ ತೋರಬಹುದಲ್ಲವೇ?

ಅಮೆರಿಕದಲ್ಲಿ

"ಗೇಣಿಗೆ ಅಥವಾ ಕಡ ಕೊಡುವ ಮಸೂದೆ"ಯ ಉದ್ದೇಶಗಳ ಪೂರೈಕೆಗಾಗಿ ಪ್ರೆಸಿಡೆಂಟ್ ರೂಜ್‌ವೆಲ್ಟರು ಅಮೆರಿಕ ಕಾಂಗ್ರೆಸಿನಿಂದ ಇನ್ನೂ ೫೯೫೦ ಮಿಲ್ಯ ಡಾಲರುಗಳ ಹಣವನ್ನು ಅಪೇಕ್ಷಿಸಿದ್ದಾರೆ. ಅಮೆರಿಕದಿಂದ ಬ್ರಿಟನ್ ಮೊದಲಾದ ಕಡೆಗೆ ಸಾಗುವ ಸಾಮಗ್ರಿಗಳ ರಕ್ಷಣೆಗಾಗಿ ಅಮೆರಿಕದ ಹಡಗುಗಳು ಯುದ್ಧಕ್ಷೇತ್ರಗಳನ್ನು ಪ್ರವೇಶಿಸಲಿವೆ. ಅಮೆರಿಕವು ಎದೇಶಗಳ ಸುಮಾರು ೬೦ ಹಡಗುಗಳನ್ನು ವಶಪಡಿಸಿಕೊಂಡಿದ್ದು ಅಧರಲ್ಲಿ ಮೊದಲನೆಯದಾಗಿ ಇಟೆಲಿಯ ೮ ಸಾವಿರ ಟನ್ನಿನ ಹಡಗು "ಲೀವು" ವನ್ನು ಈಗ ಬ್ರಿಟನಿಗೆ ವರ್ಗಾಯಿಸಲಾಗಿದೆ.


ಬಹಳ ಗಟ್ಟಿಯಾದುದು
ಮತ್ತು ಬಹಳ ತಕ್ಕುದಾದ್ದು!
ವೆಸ್ಟ್ ಎಂಡ್ ಕ್ವೀನ್ ಎನ್ನಿ ಬಹಳ ಗಟ್ಟಿಯಾದ ಮಿಲಿಟರಿ ಮಾದರಿಯ ವಾಚು. ಹಲವು ಸೈನ್ಯಖಾತೆಯವರಲ್ಲಿ ಇದು ಪಡೆದ ಮೆಚ್ಚುಗೆಯು ಅತ್ಯಾಶ್ಚರ್ಯಕರ. ವಿಶ್ವಾಸಾರ್ಹಕ ಹಾಗೂ ಹಣಕ್ಕೆ ತಕ್ಕ ಯೋಗ್ಯ ಉಪಯುಕ್ತತೆ ಸೊಡುವಂಥದ್ದು! ಹೊರಗಿನ ಕಠಿಣ ದೈಹಿಕ ಕೆಲಸ ಮಾಡುವಾಗ ಲು ಉತ್ತಮ ಆಯ್ಕೆಯದು. ಪಾಕೆಟ್ ಮತ್ತು ರಿಸ್ಟ್ ನಮೂನೆಗಳಲ್ಲಿ ಸಿಗುತ್ತದೆ.
ಕ್ವೀನ್ ಎನ್ನಿ— 7 ಜ್ಯುವೆಲ್‌ಗಳು
ನಿಕ್ಕಲ್ ಬೆಳ್ಳಿಯ ಕೇಸ್–ಸಾದಾ ರೂ. 26
ರೇಡಿಯಂ ಅಂಕೆ, ಮುಳ್ಳುಗಳ ಸಹಿತ ರೂ. 29
ಪಾಕೆಟ್ ವಾಚುಗಳ ಬೆಲೆಯೂ ಇಷ್ಟೇ.
ಸಚಿತ್ರ ಉಚಿತ ಕೆಟ್ಟಲಾಗಿಗೆ ಬರೆಯಿರಿ.
ವೆಸ್ಟ್ ಎಂಡ್ ವಾಚ್ ಕೊ., ಬೊಂಬಾಯಿ, ಮತ್ತು ಕಲ್ಕತ್ತ.
WEST END WATCH CO.
BOMBAY CALCUTTA

ಅಮೇರಿಕದವರಿಂದ!

ವಿಮಾನ ದಾಳಿಯಿಂದ ಗಾಸಿಗೊಂಡ ಬ್ರಿಟಿಷರಿಗಾಗಿ ಅಮೇರಿಕದ ಸಂಸ್ಥೆಗಳಿಂದ ಬಂದ ಧಾರಾಳ ಉಚಿತಗಳಿವು ಲಂಡನಿನಲ್ಲಿ ಹಂಚಲ್ಪಡುತ್ತಿವೆ. ಬಾಂಬಿನಿಂದ ಅನಾಥವಾದ ಮಗುವೊಂದಕ್ಕೆ ಬೂಟ್ಸ್ ತೊಡಿಸಲು ಒಬ್ಬ ನರ್ಸ್ ಯತ್ನಿಸುತ್ತಿದ್ದಾಳೆ ಈ ಚಿತ್ರದಲ್ಲಿ.

ಅಲಕ್ಷಿಸಿದ ಕೆಮ್ಮು

ಪ್ರಗತಿಪರ ಎಳೆ ಜೀವಿತವನ್ನು ಹಾಳುಗೆಡವಿದ ಹಲವು ದುಃಖಾಂತ ಕತೆಗಳ ಕಾರಣವಾಗಿದೆ. ಈ ಕತೆ ನಿಮ್ಮ ಮನೆಗಳಲ್ಲೂ ಉಂಟಾಗದಿರಲಿ. ಕೆಮ್ಮಿನ ಮೊದಲ ಸೂಚನೆ ಕಂಡು ಬಂದೊಡನೆಯೇ ಒಂದು ಬಾಟ್ಲಿ ಶ್ವಾಸಕೋಶಗಳನ್ನು ಸಾಧುಗೊಳಿಸಿ, ಗುಣಪಡಿಸುವ ಮತ್ತು ತಡೆಯುವ ಆದರ್ಶ ಶ್ವಾಸನಾಳ ರೋಗಹಾರಿ ಟಸ್ಸ್‌ನಾಲ್ ಎಂಬ ಸುಲಭ ಹಾಗೂ ಸುರಕ್ಷಿತ ಕೆಮ್ಮಲು ಕಷಾಯವನ್ನು ಕೊಳ್ಳಿರಿ.

ಆರಂಭದಲ್ಲೇ ಟಸ್ಸ್‌ನಾಲ್‌ನಿಂದ ಚಿಕಿತ್ಸೆ ನಡೆಸಲ್ಪಟ್ಟ ಕೆಮ್ಮು ಭೀಕರ ರೂಪಕ್ಕೆ ತಿರುಗಲಾರದು. ಟಸ್ಸ್‌ನಾಲ್ ಶ್ವಾಸನಾಳ ಮತ್ತು ಕಂಠನಾಳಗಳನ್ನು ಸುರಕ್ಷಿತಗೊಳಿಸಿ, ಕಫವನ್ನು ನೀರುಮಾಡಿ, ಕಫ ಉಗುಳಲು ಸುಲಭಮಾಡಿಕೊಡುತ್ತದೆ; ನಾಯಿಕೆಮ್ಮು, ಕೆಮ್ಮು, ಶ್ವಾಸಕಾಶ ಮತ್ತು ಶ್ವಾಸಕೋಶ ಮತ್ತು ಗಂಟಲಿನ ಕ್ಷಯರೋಗದಿಂದುಂಟಾಗುವ ತುರಿಕೆ ಕೆಮ್ಮುಗಳ ನರಸೆಳೆತವನ್ನು ಶಾಂತಗೊಳಿಸಿ ಸಮಾಧಾನಪಡಿಸುತ್ತದೆ.

ನಿರ್ದಿಷ್ಟ ಅಳತೆಯಲ್ಲಿ ನಿರಪಾಯವಾಗಿ ಎಳೆ ಬಾಲವೃದ್ಧರೂ ಟಸ್ಸ್‌ನಾಲ್‌ನ್ನು ಸೇವಿಸಬಹುದು. ನೇವಸ ಮತ್ತು ಕ್ಷಯರೋಗಗಳ ಗೆಯಿಗಿ ಸಾವಿರ ವರ್ಷಗಳ ಹಿಂದಣ ಕಾಲದ ವೈಜ್ಞಾನಿಕರು ತಿಳಿದಿದ್ದ ಒಂದೇ ಗುಣದ ಎರಡು ಉತ್ಕೃಷ್ಟ ಮೂಲಿಕೆಗಳ ಪ್ರಾಮುಖ್ಯ ಅಂಶಗಳ ಕೂಡಿಕೆಯೇ ಈ ಆಧುನಿಕ ವೈಜ್ಞಾನಿಕ ಔಷಧಿ. ಶ್ವಾಸಕೋಶಗಳನ್ನು ಸುರಕ್ಷಿತ ಗುಣಕಾರಿಯಾದ ಚಿಕಿತ್ಸೆ ಮಾಡಿ, ಅವುಗಳನ್ನು ದೃಢಪಡಿಸಿ ಮತ್ತು ಶ್ವಾಸನಾಳದ ರೋಗಗಳು ಬೆಳೆಯದಂತೆ ರಕ್ಷಿಸಲು ಬೇಕಾದ ಹಿಂದಿನ ಅನುಭವ ಮತ್ತು ಇಂದಿನ ವೈಜ್ಞಾನಿಕ ಸಂಶೋಧನೆಗಳ ಸಮ್ಮಿಲನವೇ ಈ ಟಸ್ಸ್‌ನಾಲ್.

ನಿಮ್ಮ ಕೆಮಿಸ್ಟರಲ್ಲಿ

ಟಸ್ಸ್‌ನಾಲ್

ಶ್ವಾಸಕೋಶ ರೋಗಗಳೆಲ್ಲವುಗಳ ಎನೆಮಿಯಂತಿರುವದು

ಮಾರ್ಟಿನ್ ಮತ್ತು ಹ್ಯಾರಿಸ್, ಲಿ.,
ಕಲ್ಕತ್ತಾ, ಬೊಂಬಾಯಿ.

T.R.2.

ಹಿಟ್ಲರನ ಸಂತೆ; ಜಪಾನಿನ ಪಾಲಿನ ವ್ಯಾಪಾರ

ಚಿಲ್ಲರೆಯೋ? ರಖಮೋ?

ಅತ್ತ ಬ್ರಿಟನ್ ರಷ್ಯಗಳು ಇರಾನಿಗೆ ಹೊಕ್ಕದ್ದು, ಇತ್ತ ರೂಸ್‌ವೆಲ್ಟ್—ಚರ್ಚಿಲ್ಲರಿಗೆ ಭೇಟಿಯಾದದ್ದು—ಇವೆರಡಕ್ಕೂ ಏನು ಸಂಬಂಧ; ಎನ್ನ ಬೇಡಿ. ಸಂಬಂಧವಿದೆ ಆ ಸಂಬಂಧದ ಕೊಂಡಿಯನ್ನು ಜಪಾನು ಕಲ್ಪಿಸಿ ಕೊಟ್ಟಿದೆ.

ಮಿ। ಚರ್ಚಿಲ್ಲರು ಜಪಾನಿನ ಜಗಳಗಂಟತನ ನಿಲ್ಲಬೇಕೆಂದು ಎಚ್ಚರಿಸಿದುದನ್ನು ನೀವು ತಿಳಿದಿದ್ದೀರಿ. ಅಮೆರಿಕದೊಡನೆ ಜಪಾನು ಒಂದು ತೀರ್ಮಾನಕ್ಕೆ ಬಾರದಿದ್ದರೆ, ಬ್ರಿಟನೂ ಆಮೆರಿಕದ ಕಡೆಯೇ ನಿಲ್ಲುವುದೆಂದು ಅವರು ಎಚ್ಚರಿಸಿದುದನ್ನೂ ನೀವು ಕೇಳಿದ್ದೀರಿ.

ಹಾಗಾದರೆ ಜಪಾನಿನ ಕೊನೆಯ ಉದ್ದೇಶಗಳೇನು?. ಇಲ್ಲೀಗ ಇರಾನು ರಂಗಸ್ಥಳದಲ್ಲಿ ಕಾಣಬರುವುದು!

ಹಿಟ್ಲರ್ ಕಳೆದ ಶರದ್ಋತುವಿನಲ್ಲಿ ಬ್ರಿಟನಿನ ಮೇಲಿನ ಯುದ್ಧವನ್ನು ಕಳೆದುಕೊಂಡ. ಆಗ ಅವನು ಮಧ್ಯಪೂರ್ವದಲ್ಲಿ ಇಂಡಿಯಕ್ಕೊಂದು ಹಾದಿಯನ್ನು ಮಾಡಿಕೊಳ್ಳಬೇಕೆನ್ನುವ ಹಾರೈಕೆಯೊಡನೆ, ಜಗತ್ತನ್ನು ಜಯಿಸಬೇಕೆಂಬ ಜರ್ಮನಿಯ ಯೋಜನೆಗೆ ಅಗತ್ಯವಾದ ಎಣ್ಣೆ ಮತ್ತು ಆಹಾರ ಸಾಧನಗಳನ್ನೂ ಸಂಗ್ರಹಿಸಲೆತ್ನಿಸಿದ. ಮೊದಲನೆಯ ಪ್ರಯತ್ನದಲ್ಲಿ ಬ್ರಿಟನನ್ನು ನೇರವಾಗಿ ಬುಡ ಸಹಿತ ಕಳಚಿ ಬಿಡಲು ಅವನಿಗಾಗ ಅಸಾಧ್ಯವಾದುದರಿಂದ, ಪೂರ್ವದಲ್ಲಿನ ಈ ಸಾಹಸಕಾರ್ಯವೇ, ಎರಡನೆಯ ಉತ್ಕೃಷ್ಟವಾದ ಉಪಾಯವೆಂದು ಅವನು ಭಾವಿಸಿದ. ಯುರೋಪಿನ ರಷ್ಯದ ಸಹಿತ ಪೂರ್ವ ದಿಕ್ಕನ್ನು ಜಯಿಸಬೇಕೆನ್ನುವುದೇ ಅವನ ನಿರಂತರ ಹಂಬಲ!

ಪೂರ್ವದಲ್ಲಿ ತನಗೆ ಇಚ್ಛೆ ಬಂದಂತೆ ಕೈಯಾಡಲು ಬಿಡುವುದಾದರೆ ನಿಮ್ಮೊಡನೆ ರಾಜಿ ಎಂದು ಹಿಟ್ಲರ್ ಬ್ರಿಟನ್—ಫ್ರಾನ್ಸುಗಳೊಡನೆ ೧೯೪೦ನೇ ನವೆಂಬರಿನಲ್ಲಿ ಸಂಧಿಪ್ರಸ್ತಾವ ಮಾಡಿದ್ದ. ಅವು ತಿರಸ್ಕರಿಸಿದ್ದುವು. ಪರಿಣಾಮ ೧೯೪೦ನೇ ಬೇಸಿಗೆಯಲ್ಲಿ ಹಿಟ್ಲರನ ದಾಳಿ ಅಲ್ಲಿ!

ಹಿಟ್ಲರಿನ ನಿರೀಕ್ಷೆಗೆ ಎಂಬಂತೆ, ಫ್ರಾನ್ಸ್ ಶರಣು ಬಂದ ಬಳಿಕವೂ, ಯಾವಾಗ ಬ್ರಿಟನ್ ಅವನ ದಾಳಿಯನ್ನು ಹಿಂದಕ್ಕೆ ಅಟ್ಟಲು ಶುರು ಮಾಡಿತೋ ಆಗಲೇ ಅವನು ಸಮೀಪದ ಮಧ್ಯ ಪೂರ್ವದೇಶಗಳಲ್ಲಿ ಬ್ರಿಟಿಷ್ ಅಧಿಕಾರವನ್ನು ಧ್ವಂಸ ಮಾಡಿ ಇಂಡಿಯವನ್ನೂ ಬೆದರಿಸಲೇ ಬೇಕೆಂದು ಶಪಥಹಾಕಿಕೊಂಡ.

ಇಲ್ಲಿಯೇ ಈಗ ಜಪಾನ್ ಮುಂದಕ್ಕೆ ಬಂದದ್ದು! ಆಗ ಜಪಾನು ಇಂಡಿಯವನ್ನು ದಕ್ಷಿಣ ಪೂರ್ವದಿಂದಲೂ, ಹಿಟ್ಲರ್ ಇಂಡಿಯವನ್ನು ಉತ್ತರ ಪಶ್ಚಿಮದಿಂದಲೂ ಆಕ್ರಮಿಸಬೇಕೆಂದು ಪ್ಲಾನ್ ಅವರದು. ಸಿರಿಯವನ್ನು ತನ್ನ ವಶಬಿಡಿ ಎಂದು ವಿಚಿ ಫ್ರಾನ್ಸ್‌ನ್ನು ಹಿಟ್ಲರ್ ಕೇಳುತ್ತಿದ್ದಂತೆ, ಇರಾಕಿನಲ್ಲಿ ಜರ್ಮನಿಯ ಪರವಾದ ಒಂದು ದಂಗೆ ಏಳುವಂತೆ ಅವನೇ ಗಾಳಿ ಹಾಕುತ್ತಿದ್ದಂತೆ ವಿಚಿಯವರಿಗೆ "ನೀವು ಜಪಾನೀಯರಿಗೆ ಇಂಡೋ ಚೀನಾವನ್ನು ಬಿಟ್ಟು ಕೊಡಿ" ಎಂದೂ ಅವನದೇ ಅಪ್ಪಣೆಯಾಯಿತು. ಜಪಾನು ಈ ಇಂಡೋ ಚೀನದಿಂದ ತ್ಯಾಲ್ಯಾಂಡಿನ ಮಾರ್ಗವಾಗಿ ಬರ್ಮದ ಮೇಲೆ ಬೀಳಬೇಕಾಗಿತ್ತು.

ಇದೇ ರೀತಿ, ಇಟೆಲಿಯವರು ಲೀಬಿಯಾದಿಂದ ಈಜಿಪ್ಟಿನ ಮೇಲೂ, ಅಬಿಸೀನಿಯಾ ಇರೀಟ್ರಿಯಗಳಿಂದ ಬ್ರಿಟಿಷ್—ಇಜಿಪ್ಟ್‌ಗಳ ಸೂಡಾನಿನ ಮೇಲೂ ಬೀಳಬೇಕಾಗಿತ್ತು. ಇರಾಕ್ ಸಿರಿಯಾಗಳು, ಬ್ರಿಟಿಷರಿಗೆ ವಿರೋಧವಾದ ನಿಲ್ದಾಣಗಳಾಗಬೇಕಾಗಿದ್ದುವು. ಅಷ್ಟೇ ಅಲ್ಲ; ಇರಾಕ್—ಜರ್ಮನ್ ಏಜೆಂಟರ ಮಾತಿಗೆ ಜಗ್ಗಿಬಗ್ಗಿ—ಅವರು ಹೇಳಿದಂತೆ ಟರ್ಕಿಯನ್ನು ಸುತ್ತುಗಟ್ಟುವ ಕಾರ್ಯವನ್ನು ಪೂರೈಸಿ, ಟರ್ಕಿ ಹಾಗೆ "ಜರ್ಮನಿಯ ನವಸೃಷ್ಟಿ"ಯೊಳಗೆ ಸೇರುವಂತೆಯೂ ಇರಾನ್ ಒತ್ತಬೇಕಾಗಿತ್ತು!

ಆಗ ಹಿಟ್ಲರ್ ಕಾಕಸಸ್ ಮತ್ತು ರಷ್ಯದ ಎಣ್ಣೆಯ ಕ್ಷೇತ್ರಗಳ ಬುಡದಲ್ಲಿ ಫಿರಂಗಿಗಳನ್ನು ಇರಿಸಿಕೊಂಡು "ನೀವು ನಮ್ಮೊಡನೆ ಸಂಪೂರ್ಣವಾಗಿ ಸಹಕರಿಸಲೇ ಬೇಕು; ಇಲ್ಲದಿದ್ದರೆ ನಾವು ಯುರೋಪಿನಲ್ಲಿ ನಿಮ್ಮ ಮೇಲೆ ಬಿದ್ದೇವು; ಜಪಾನೀಯರು ದೂರದ ಪೂರ್ವದಲ್ಲಿ ಕೈಮಾಡಿಯಾರು" ಎಂದು ರಷ್ಯದವರಿಗೆ ಸಾರುತ್ತಿದ್ದ.

ಆದರೆ ಹಿಟ್ಲರನ ಲೆಕ್ಕಾಚಾರ ಹಲವು ಕಡೆ ತಪ್ಪಾಯಿತು. ಈಜಿಪ್ಟಿನ ಆಕ್ರಮಣ ನಡೆಯಲಿಲ್ಲ. ಇಟೆಲಿಯ ಅಬಿಸೀನಿಯಾ—ಇರಿಟ್ರಿಯಾ ಅವರ ಕೈ ತಪ್ಪಿತು. ಗ್ರೀಸ್ ಯುಗೋಸ್ಲಾವಿಯಗಳ ಫಲಾಹಾರಕ್ಕೆ ಹೊತ್ತು ವಿಪರೀತ ಹಿಡಿಯಿತು. ಇರಾಕ್—ಸಿರಿಯಾಗಳು ಬ್ರಿಟಿಷರ ವಶವಾದುವು. ರಷ್ಯ ಹಿಟ್ಲರಿಗೆ ಬೇಕಾದಷ್ಟು ಎಣ್ಣೆ ಸರಬರಾಯಿ ಮಾಡುವುದಕ್ಕಿಲ್ಲವೆಂದಿತು.

ಸರಿ! ಇನ್ನು ಟರ್ಕಿಯ ಮೇಲೆ ಯುದ್ಧವೆಂದು ಹೇಳುತ್ತ, ಹಿಟ್ಲರ್ ಹಾರಿಬಿದ್ದದ್ದು ರಷ್ಯದ ಮೇಲೆಯೇ. ಇದರಿಂದ ಜಪಾನಿನ ತಲೆ ಕರಡಾಯಿತು. ಜಪಾನರೇನೋ ದೂರದ ಪೂರ್ವದಲ್ಲಿ, ರಷ್ಯವನ್ನು ಬೆದರಿಸಲು ತಯಾರಿದ್ದರೂ, ರಷ್ಯ ದೊಡನೆ ಬಹಿರಂಗ ಯುದ್ಧ ಹೂಡಲು ತಯಾರಿರಲಿಲ್ಲ. ಕಾರಣ, ರಷ್ಯದ ವಿಮಾನಗಳು ವ್ಲಾಡಿವೋಸ್ಟಾಕಿನಿಂದ ಜಪಾನಿನ ನಗರಗಳನ್ನು ಸುಟ್ಟು ಬೂದಿ ಮಾಡಿ ಬಿಟ್ಟಾವು!

ಹಾಗೆ ಜಪಾನ್ ಹಿಂಜರಿಯಿತು. ಜರ್ಮನಿಯೊಡನೆ "ಚಿಲ್ಲರೆ"ಯಾಗಿ ಪಾಲಿನ ವ್ಯಾಪಾರ ಮಾಡಿದ ಲಾಭಾಂಶವಾಗಿ, ಇಂಡೋಚೀನವನ್ನು ಒಳಗೆ ಹಾಕಿತು. ಹಿಟ್ಲರ್ ಎಣಿಸಿದಂತೆ, ೬ ವಾರಗಳಲ್ಲಿ ರಷ್ಯದ ಪ್ರತಿಭಟನೆ ಸಡಿಲವಾಗಿದ್ದರೆ, ಕಾಕಸಸ್ ಮತ್ತು ಇಂಡಿಯಗಳ ಮೇಲೆ ಹಾರುವಂತೆ ಇರಾನ್ ಜರ್ಮನಿಗೆ ತನ್ನಲ್ಲಿ ಒಂದು ನಿಲ್ದಾಣ ಕೊಟ್ಟಿದ್ದರೆ, ಆಗ ಜಪಾನು ಈ ಪಾಲಿನ ವ್ಯಾಪಾರದಲ್ಲಿ "ರಖಂಗಟ್ಟಲೆ" ಎನಿಯೋಗವನ್ನೇ ಮಾಡುತ್ತಿತ್ತು.

ಈಗ ರಷ್ಯದ ಭೀಕರ ಪ್ರತಿಭಟನೆ, ಮಿ। ಚರ್ಚಿಲ್ಲರ ಎಚ್ಚರಿಕೆ, ಇರಾನಿನ ಗಡಿಬಿಡಿ,—ಇವುಗಳಿಂದೆಲ್ಲ ಜಪಾನಿಗೆ "ಹಿಟ್ಲರಿನ ವ್ಯಾಪಾರ"ದಲ್ಲಿ ತನ್ನ ಯಾವತ್ತು ಮೂಲವನ್ನೂ ಕರಗಿಸಲು ಇಷ್ಟವಿಲ್ಲವಾಗಿದೆ. ಇಲ್ಲಿಯೇ ಈಗ ಬ್ರಿಟನ್—ರಷ್ಯಗಳ ಇರಾನಿನ ಪ್ರವೇಶಕ್ಕೂ, ಮಿ। ರುಜ್‌ವೆಲ್ಟ್, ಮಿ। ಚರ್ಚಿಲ್ಲರ ಭೇಟಿಗೂ ನಡುವೆ ಜಪಾನು ಹಾಕಿಕೊಟ್ಟ ಕೊಂಡಿ ಕಾಣಿಸುತ್ತಿದೆ.

ಇಂಡಿಯದ ದಾರಿ ಅವನಿಗೀಗ ಕಟ್ಟಿದೆ; ಬ್ರಿಟನಿನ ದಾಳಿ ಈಗಲೂ ಸುಲಭವಲ್ಲ ಅನ್ನುವಾಗ, ಹಿಟ್ಲರ್ ಮುಂದೆ ದಕ್ಷಿಣ ಅಮೆರಿಕ, ಅಮೆರಿಕಗಳ ಮೇಲೆ ಬೀಳುವಂತೆ, ವಿಚಿ ಫ್ರಾನ್ಸಿನಿಂದ ಮೊರೊಕ್ಕೊ ಮತ್ತು ಡಾಕರನ್ನು ಕೊಡಬೇಕೆಂದು ಜೋರಾಗಿ ಕೇಳುವನೇ—ಹೇಗೆ?

ಅಜೀರ್ಣವುಂಟಾಗಿದೆಯೇ?

ಊಟವಾದಮೇಲೆ ಹೊಟ್ಟೆ ನೋಯುತ್ತದೆಯೇ?

ಫಿಲ್ಲಿಪ್ಸ್ ಮಿಲ್ಕ್ ಆಫ್ ಮ್ಯಾಗ್ನೀಷಿಯಾ ಈ ಬಾಧೆಗಳನ್ನು ತಕ್ಷಣವೇ ಪರಿಹರಿಸುವುದು.

ಊಟವಾದಮೇಲೆ ಬರುವ ಹುಳಿ ತೇಗುಗಳೂ, ಅಜೀರ್ಣವೂ, ಮಲಬದ್ಧತೆಯೂ, ಪಿತ್ತವೂ, ಹೊಟ್ಟೆಯಲ್ಲಿ ಮಿತಿಮೀರಿ ಉತ್ಪತ್ತಿಯಾಗುವ ಆಮ್ಲರಸದ (ಹುಳಿಯ) ಫಲಿತಾಂಶಗಳು. ಮಸಾಲೆ ಸಾಮಾನುಗಳನ್ನು, ಹೆಚ್ಚಾಗಿ ಒಳಗೊಂಡ ಪಲ್ಯಗಳ ಉಪಯೋಗದಿಂದಲೂ ಸುಲಭವಾಗಿ ಜೀರ್ಣವಾಗದ ಭಕ್ಷ್ಯಭೋಜ್ಯಗಳಿಂದಲೂ, ಹೊಟ್ಟೆಯಲ್ಲಿ ಈ ಆಮ್ಲರಸವು ಅಪರಿಮಿತವಾಗಿ ಉತ್ಪತ್ತಿಯಾಗುತ್ತದೆ.

ಈ ಬಾಧೆಗಳನ್ನು ಪರಿಹರಿಸಬೇಕಾದರೆ ಮೇಲೆಹೇಳಿದ ಹೆಚ್ಚಾದ ಆಮ್ಲರಸವನ್ನು ನಿಸ್ಸಾರ (alkalize) ಪಡಿಸಬೇಕು. ಈ ಕೆಲಸಕ್ಕೆ ತತ್ಕಾಲ ವೈದ್ಯಶಾಸ್ತ್ರಕ್ಕೆತಿಳಿದ ಪರಿಹಾರಗಳೆಲ್ಲೆಲ್ಲಾ ಫಿಲ್ಲಿಪ್ಸ್ ಮಿಲ್ಕ್ ಆಫ್ ಮ್ಯಾಗ್ನೀಷಿಯಾವೇ ಅತ್ಯಂತ ಶಕ್ತಿಯುಳ್ಳದ್ದು. ಉಪಯೋಗಿಸಿದಕೂಡಲೇ ಅದು ತನ್ನಗಾತ್ರದ ಅನೇಕ ಪಾಲು ಆಮ್ಲರಸದ ದುರ್ಗುಣವನ್ನು ನಾಶಪಡಿಸುವುದು. ಒಂದುಲೋಟಾ ನೀರಿನಲ್ಲಿ ಎರಡು ಟೀಸ್ಪೂನು ಫಿಲ್ಲಿಪ್ಸ್ ಮಿಲ್ಕ್ ಆಫ್ ಮ್ಯಾಗ್ನೀಷಿಯಾವನ್ನು ಕರಗಿಸಿ ಕುಡಿದರೆ ತಕ್ಷಣವೇ ಗುಣವುಂಟಾಗುತ್ತದೆ; ಯಾಕೆಂದರೆ ಅದು ಆಮ್ಲರಸದಿಂದ ತೋಯಿದ ಹೊಟ್ಟೆಯಲ್ಲಿ ಪ್ರವೇಶಮಾಡಿ ಆಮ್ಲರಸಗಳನ್ನು ನಿಸ್ಸಾರಪಡಿಸಿ ಎಲ್ಲಾನೋವುಗಳನ್ನೂ ಬಾಧೆಗಳನ್ನೂ ಹೋಗಲಾಡಿಸುತ್ತದೆ.

ಫಿಲ್ಲಿಪ್ಸ್ ಮಿಲ್ಕ್ ಆಫ್ ಮ್ಯಾಗ್ನೀಷಿಯಾ ಕರುಳುಗಳನ್ನು ಕ್ರಮಪಡಿಸಿ, ಮಲವಿಸರ್ಜನೆಗೆ ಸಹಕಾರಿಯಾಗಿ, ಕಾಂತಿಯುಕ್ತವಾದ ಆರೋಗ್ಯವನ್ನೂ ಶಕ್ತಿಯನ್ನೂ ಹಿಂದಿರಿಗಿಸುತ್ತದೆ.

ಬಿಲ್ಲೆಯರೂಪದಲ್ಲಿಯೂ ಸಿಕ್ಕುತ್ತದೆ. ನಿಮ್ಮ ಜೇಬಿನಲ್ಲಿಯೇ ಇಟ್ಟುಕ್ಕೊಂಡು ಯಾವಕ್ಷಣದಲ್ಲಿ ಅಜೀರ್ಣವುಂಟಾದರೂ ಉಪಯೋಗಿಸಲು ಒದಗುವುದು.

ಫಿಲ್ಲಿಪ್ಸ್

ಮಿಲ್ಕ್ ಆಫ್ ಮ್ಯಾಗ್ನೀಷಿಯಾ

ಆಮ್ಲನಿವಾರಣೆಮಾಡುವ ಮಲವಿಸರ್ಜನ ಸಹಕಾರಿ.

M. 5V

NOTICE

In the District Court of South Kanara

O. P. No. 68/1941.

In the matter of debts of deceased Lokaya Shetty.

Kamala Hengsu
Sesi Hengsu— } **Petitioners**

Korapalu Hengsu **Respondent.**

Notice is hereby given that the above named petitioners have applied to the Court for the grant to the 1st petitioner of a succession certificate in respect of the debts of the deceased aforesaid and that the said petition stands posted to 27-9-1941 at 10-30 A. M for disposal.

Any one desirous for opposing the said application may appear before the Court on or before the said date and file their objections if any, failing which the petition will be proceeded with exparte, and the certificate prayed for by the petitioners be granted.

Mangalore, 18-9-41 } K. Balakrishna Rao, Advocate for Ptrs.

ಪ್ರಪಂಚದ ಪಾನಿಪತ್ತು

ಇರಾನಿನ ವಿದ್ಯಮಾನಗಳು

ಇರಾನಿನ ಷಹಾರ್ದು ತಮ್ಮ ಸಿಂಹಾಸನ ತ್ಯಾಗ ಮಾಡಿ, ರಾಜಧಾನಿಯನ್ನೂ ಬಿಟ್ಟು ಇಸ್ಪಹಾನಿಗೆ ತೆರಳಿದರು. ಈಗ ಅಲ್ಲಿ ಹೊಸ ದೊರೆಗಳು ಯುವರಾಜರಾದ ಷಹಾಪುರ ಮಹಮ್ಮದ್ ರಿಜಾ ಅವರು. ಅವರ ವಯಸ್ಸು ೨೨. ಅವರು ಈಜಿಪ್ಟಿನ ಅರಸರ ಹಿರಿಯ ಸಹೋದರಿಯವರನ್ನು ಮದುವೆಯಾಗಿದ್ದಾರೆ.

ಮಾಜಿ ಷಹಾರವರು ಸಿಂಹಾಸನ ತ್ಯಾಗ ಮಾಡಿದ ನಿಜವಾದ ಕಾರಣ ಏನ್ನೂ ಸರಿಯಾಗಿ ತಿಳಿದು ಬಂದಿಲ್ಲ. ಅವರ ಆಳಿಕೆ ಜನಪ್ರಿಯವಾಗಿರಲಿಲ್ಲ ವೆಂದು ಹೇಳಲಾಗಿದೆ. ಆದರೆ ಜನರು ಮೆಚ್ಚದ ಆ ಆಳಿಕೆಯನ್ನು ಆ ಷಹಾರವರು ಬ್ರಿಟಿಷ್–ರಷ್ಯದವರ ಅಲ್ಲಿನ ಪ್ರವೇಶಕ್ಕೆ ಮೊದಲೇ ಏತಕ್ಕೆ ಬಿಟ್ಟುಕೊಡಲಿಲ್ಲ, ಈಗ ಕೂಡಲೇ ಆ ಸಿಂಹಾಸನವನ್ನು ಬಿಟ್ಟು ಬಿಡುವ ಆಕಸ್ಮಿಕವಾದ ಜರೂರಿನ ಸಂದರ್ಭಗಳು ಯಾವುವು ಒದಗಿದುವು ಎಂಬುದು ತಿಳಿಯದು.

ಏತನ್ಮಧ್ಯೆ, ಮಿತ್ರರ ಸೇನೆಗಳು ತೆಹರಾನಿಗೂ ಪ್ರವೇಶಿಸಿವೆ ಎಂಬ ವಾರ್ತೆ ಬಂದಿದೆ. ಜರ್ಮನರನ್ನು ಇರಾನಿನಿಂದ ಹೊರ ನೂಕುವಲ್ಲಿ ಇರಾನ್ ಸರಕಾರ ವಿಳಂಬಿಸುತ್ತಿದೆ ಎಂಬುದೇ ಈ ಪ್ರವೇಶದ ಕಾರಣವಾಗಿದೆ. ಆದರೂ ತೆಹರಾನಿನಲ್ಲಿ ಸರಿಯಾದ ವ್ಯವಸ್ಥೆ ಇದ್ದರೆ ಮಿತ್ರರ ಸೇನೆಗಳಲ್ಲಿಗೆ ಪ್ರವೇಶಿಸಲಾರವೆಂದೂ ಪ್ರಕಟವಾಗಿತ್ತು. ಇದರ ಮುಂದಿನ ಪರಿಣಾಮ ನಿರೀಕ್ಷಣೀಯವಾದಂತಾಯಿತು.

ಹೇಗೂ ನಾಜಿಗಳಿಗೆ ಬೆದರಿದಂತೆ ದಾಕ್ಷಿಣ್ಯವರ್ತಿಯಾಗಿ ವರ್ತಿಸುತಿದ್ದ ಇರಾನಿನಲ್ಲಿ ಮಿತ್ರರು ಕಾಲಿಟ್ಟುದು ಭಾರತದ ರಕ್ಷಣೆಯ ಹಿತದೃಷ್ಟಿಯಿಂದ ವಿಹಿತವೇ ಆಯಿತು.

ಅಮೆರಿಕದ ಮೇಲೆ ಯುದ್ಧ ಹರಿದು ಬೀಳಬಹುದೇ?

ಅದೇ ಸಂಭವವೆಂದು ಅಮೆರಿಕದ ಪ್ರಮುಖ ಸೌಕಾಧಿಕಾರಿಗಳೊಬ್ಬರು ಹೇಳುತ್ತಿರುವರು. ಜರ್ಮನ್ ಸಬ್‌ಮೆರೈನ್‌ಗಳು ಅಮೆರಿಕದ ತೀರಕ್ಕೆ ಹತ್ತಿರ ಹತ್ತಿರವಾಗುತ್ತಿವೆ; ವರ್ಷದ ಕೆಳಗೆ ಯಾವ ಆಕ್ರಮಣ ನಡೆಯಲಾರದೆಂದು ಭಾವಿಸಲಾಗಿತ್ತೋ ಅದೀಗ ನಡೆಯುವುದರಲ್ಲೇನೂ ಆಶ್ಚರ್ಯವಿಲ್ಲ ವೆಂದು ಅವರ ಅಭಿಪ್ರಾಯ.

ಅಮೆರಿಕದ ಅಟ್ಲಾಂಟಿಕ್ ಸೌಕಾಬಲ ಸಿದ್ಧವಾಗಿ ಹೊಗಟಿದೆ. ಅದು ಅಮೆರಿಕಾ ಐಸ್‌ಲ್ಯಾಂಡುಗಳ ನಡುವಿನ "ಗೇಣಿಗೆ ಅಥವಾ ಕಡ ಕೊಡುವ" ಯಾವತ್ತು ಸರಕುಗಳನ್ನು ರಕ್ಷಿಸುವ ಕಾರ್ಯವನ್ನು ನಿರ್ವಹಿಸುತ್ತಿದೆ. ಇದು ಕಾವಲಿನ ಕೆಲಸವೇ ಎಂದು ಕೆಲವರನುತ್ತಾರೆ. ಅದು ಹೇಗಿದ್ದರೂ "ಕಂಡೊಡನೆ ಗುಂಡು ಹಾಕಿ" ಎನ್ನುವ ಪ್ರೆಸಿಡೆಂಟ್ ರೂಜವೆಲ್ಟರ ಅಪ್ಪಣೆ ಯುದ್ಧ ಪ್ರಸಕ್ತಿಯನ್ನು ಹಣ್ಣು ಮಾಡಿದೆ ಎಂಬಲ್ಲಿ ಅನುಮಾನವಿಲ್ಲ.

ಇಷ್ಟಾದರೂ ನಾಜಿಗಳ ಹಡಗುಗಳು, ಸಬ್‌ಮೆರೈನ್‌ಗಳು ಇಷ್ಟಕ್ಕೇ ಹೆದರಿ ಹಿಂದೆ ನಿಂತಾವೇ ಎಂಬುದು ಗೊತ್ತಿಲ್ಲ. ಅಮೆರಿಕವನ್ನು ಹೇಗಾದರೂ ಯುದ್ಧಕ್ಕೆ ಎಳೆಯಬೇಕೆಂದಿರುವ ಹಿಟ್ಲರನ ಆ ಉದ್ದೇಶವು ಸಾರ್ಥಕವಾಗುವ ಸುಮೂಹೂರ್ತವು ಈಗಲೀಗ ಬೇಗನೆ ಒದಗಬಹುದೆಂದು ಕೋರುತ್ತದೆ.

ರಷ್ಯ—ಜರ್ಮನಿಗಳ ಸಂಗ್ರಾಮ

ರಷ್ಯ–ಜರ್ಮನಿಯ ಸಂಗ್ರಾಮವು ಇಡೀ ರಣರಂಗದಲ್ಲಿ ಅತಿ ಪ್ರಚಂಡವಾಗಿ ಸಾಗುತ್ತಿದೆ. ಈಚಿಗೆ ಕೆಲ ಕಾಲದಿಂದ, ಜರ್ಮನಿಯು ರಷ್ಯದಲ್ಲಿ ಪಡೆದುದೇನೂ ಇಲ್ಲವಾದರೂ, ಪಡೆದುದು ಧಾರಾಳ ಉಂಟೆಂದು ಹೇಳುವ ಧೀರರು ಅವರು. ಮುಂದೆ ಅವರು ಏನೇ ಪಡೆಯಲಿ ಬಿಡಲಿ, ಅಂತೂ ಅಷ್ಟು ಇಷ್ಟು ಪಡೆದೆವೆಂದು ಮೊದಲೇ ಹೇಳಿಕೊಳ್ಳುವ ದೊಡ್ಡಸ್ತಿಕೆಗೆ, ಆ ಪೂರ್ವ ಪೀಠಿಕೆಯ ಆರ್ಭಾಟಕ್ಕೆ ಜರ್ಮನರು ಹಿಂದೆ ಕಡಿಮೆ ಮಾಡಿದುದೂ ಇಲ್ಲ; ಮುಂದೆ ಮಾಡುವ ಹಾಗೂ ಇಲ್ಲ. ಆದರೂ ತಮ್ಮ ಸರ್ವಸ್ವವೂ ಹೋದರೆ ಹೋಗಲೆಂದು ಜೂಜಿಗೆ ಹೊರ್ತಟ ಆ ಜರ್ಮನರಿಗೆ, ಇಂದಲ್ಲ ನಾಳೆ, ಒಂದಲ್ಲ ಒಂದು ಕಡೆ ರಷ್ಯದಲ್ಲಿ ಜಯವೇ ಆದೀತು ಎನ್ನುವ. ಆದರೂ ಏನು? ರಷ್ಯದಲ್ಲಿ ನಾಜಿಗಳು ಚಟ್ಟೆಯಾಗುತ್ತಿದ್ದಾರೆ; ಬಲಗುಂದುತ್ತಿದ್ದಾರೆ; ಎದೆಗೆಡುತ್ತಿದ್ದಾರೆ—ಇದರ ಪರಿಣಾಮ ಫಕ್ಕನೆ ಹೊರಬಾರದಾದರೂ ಈಗಲೇ ನಾಜಿಗಳಿಗೆ "ರಷ್ಯದ ಯುದ್ಧ ಏಕೆ ನಮಗೆ ಬೇಕಾಗಿತ್ತು" ಎಂದು ಅನ್ನಿಸದೆ ಇಲ್ಲ.

ರಷ್ಯದವರು ಬಹು ಪರಾಕ್ರಮದಿಂದ ಕಾದಾಡುತ್ತಿದ್ದಾರೆಂಬುದರಲ್ಲಿ ಎರಡು ಅಭಿಪ್ರಾಯವಿಲ್ಲ. ಅವರ ಒಕ್ಕಟ್ಟನ್ನು ನಾಜಿ ಯಂತ್ರತಂತ್ರಗಳು ಮುರಿಯಲು ಶಕ್ತವಾಗಿಲ್ಲ ಎಂಬುದಷ್ಟೇ ಅಲ್ಲ; ಬ್ರಿಟನ್ ಅಮೆರಿಕಗಳ ಸತ್ಸಹಾಯವೂ, ರಷ್ಯದ ಈ ವರ್ಷದ ಅಪಾರವಾದ ಆಹಾರಸಾಮಗ್ರಿಗಳ, ಕಾಳುಕಡಿಯ ಬೆಳೆಯೂ, ಮೇಲಾಗಿ ಮುಂಬರುವ ಹಿಮಗಾಲವೂ ನಾಜಿ ಹೃದಯವನ್ನು ತಲ್ಲಣಿಸುವಂತೆ ಮಾಡಿವೆ; ರಷ್ಯದವರಲ್ಲಿ ದ್ವಿಗುಣಿತ ಉತ್ಸಾಹವನ್ನು ತುಂಬಿದೆ. ನಾಳೆ, ಒಂದಲ್ಲ ಒಂದು ಕಡೆ ರಷ್ಯದಲ್ಲಿ ಜಯವೇ ಆದೀತು ಎನ್ನುವ. ಆದರೂ ರಿಗೆ ಹಾಗಲ್ಲ; ಅವರ ನಾಡೂ, ಜೀವನವೂ, ಸ್ವಾತಂತ್ರ್ಯವೂ ಎಲ್ಲವೂ ಅಪಾಯಕ್ಕೀಡಾಗಿದೆ ಅನ್ನುವಾಗ, ಅಷ್ಟು ದೊಡ್ಡ ವೀರ ಜನಾಂಗವಾದ ರಷ್ಯದವರು ಸಾಮಾನ್ಯಕ್ಕೆ ಬಿಟ್ಟುಕೊಡುವರೆ? ತಮ್ಮ ದೇಶಗಳ ರಕ್ಷಣೆಯ ದೃಷ್ಟಿಯಿಂದಾದರೂ, ಬ್ರಿಟನ್ ಅಮೆರಿಕಗಳು "ಅಷ್ಟು ಸಹಾಯ ಸಾಕು" "ಇಷ್ಟು ಸಹಾಯ ಸಾಕು" ಎಂದು ಹರಿಕೆ ಸಲ್ಲಿಸುವ ಸಹಾಯದಾನದಿಂದಲೇ ತೃಪ್ತವಾಗುವುವೇ? ಇಲ್ಲ; ಎಂದಿಗೂ ಇಲ್ಲ! ಜಯ ಪಜಯಗಳು ಯುದ್ಧದಲ್ಲಿ ಸ್ವತಃ ಸಿದ್ಧವಾಗಿರುವಾಗ, ಇಂದು ಜರ್ಮನರಿಗೊಂದು ಕಡೆ ಜಯವಾದರೇನು? ಕೊನೆಯ ವಿಜಯ ರಷ್ಯದವರಿಗಾಗದೆಂದು ಯಾರು ಹೇಳುವವರು? ಆದುದರಿಂದ ಕ್ಷಣಿಕವಾದ ರಷ್ಯದ ಜಯಾಪಜಯಗಳಿಂದಲೇ ರಷ್ಯದ ಭವಿಷ್ಯವನ್ನು ತೀರ್ಮಾನಿಸಲು ಬರುವುದಿಲ್ಲ ಎನ್ನುವುದು!



ಅಲ್ಪ ಮೊಬಲಗುಗಳನ್ನು ನಾಣ್ಯ ಯಾ ನೋಟುಗಳ ರೂಪದಲ್ಲಿ ಇನ್ಯಾರು ಮಾಡದ ಲಕೋಟೆಗಳಲ್ಲಿ ಕಳುಹುವುದು ನಿರ್ಬಂಧಿತ ಮಾತ್ರವಲ್ಲ, ಅಪಾಯಕಾರಿ ನಷ್ಟ ಹೊಂದಲು ಕಾದಿರಬೇಡಿ; ಜಾಣ್ಮೆಯುಳ್ಳವರಾಗಿ ನಿಮ್ಮ ಲಿಕ್ಕಾಚಾರವನ್ನು ಸುಭದ್ರ ಮತ್ತು ಅತೀ ಅಗ್ಗ ವಿಧಾನವಾದ ಇಂಡಿಯನ್ ಪೋಸ್ಟಲ್ ಆರ್ಡರುಗಳ ಮೂಲಕ ತೀರ್ಮಾನಿಸಿಕೊಳ್ಳಿ, ವಿವರಗಳನ್ನು ನಿಮ್ಮ ಪೋಸ್ಟಾಫಿನಲ್ಲಿ ವಿಚಾರಿಸಿ.

USE INDIAN
POSTAL ORDERS
NO. 5

ಸಾರ್ವಜನಿಕ ನಂಬಿಕೆಯು "ಓರಿಯಂಟಲ್"ನ್ನು

ಹಿಂದುಸ್ಥಾನದ ಅಗ್ರ ವಿಮಾ ಕಂಪೆನಿಯನ್ನಾಗಿ ಮಾಡಿದೆ.

ಚಾಲ್ತಿ ಇರುವ ಪಾಲಿಸಿಗಳು 31-12-40ಕ್ಕೆ ಸರಿಯಾಗಿ ರೂ. 83 ಕೋಟಿಗೆ ಮೇಲ್ಪಟ್ಟಿದೆ.
ನಿಧಿಗಳು ,, ರೂ. 27½ ,, ,,
ವಾರ್ಷಿಕ ಆದಾಯ ,, ರೂ. 4¾ ಕೋಟಿ ವರೆಗಿದೆ.

ಬಹಳ ಆಕರ್ಷಕ ವಿಮಾ ಸ್ಕೀಮುಗಳ ವಿಶೇಷ ಮಾಹಿತಿಗಳನ್ನೊಳಗೊಂಡ ನಮ್ಮ ಪ್ರಾಸ್ಪೆಕ್ಟಸ್ ಪ್ರತಿ ಬಂದಕ್ಕೆ ಬರಕೊಳ್ಳಿ:— ದಿ ಬ್ರಾಂಚ್ ಸೆಕ್ರೆಟರಿ,

ಓರಿಯಂಟಲ್

ಗವರ್ನಮೆಂಟ್ ಸೆಕ್ಯುರಿಟಿ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಸೌತ್ ಪೆರೆಡ್, ಅಥವಾ ದಿ ಇನ್ಸ್‌ಪೆಕ್ಟರ್,
ಬೆಂಗಳೂರು. ಕೆ. ಸದಾಶಿವರಾವ್ ರೋಡ್, ಮಂಗಳೂರು.

ಹೆಡ್ ಆಫೀಸ್: ಬೊಂಬಾಯಿ. ಹಿಂದುಸ್ಥಾನದಲ್ಲಿ ಸ್ಥಾಪನೆ: 1874.

ಕಾಹಿಲೆಯಿಂದ ಎದ್ದ ಮೇಲೆ ಕ್ರಮವಾಗಿ "ಓವಲ್‌ಟಿನ್" ಕುಡಿದು, ಆರೋಗ್ಯವನ್ನೂ ಶಕ್ತಿಯನ್ನೂ ಮರಳಿ ಹೊಂದಿರಿ. ಆನಂದ ಕೊಡುವ ಅದರ ಸ್ವಾದವನ್ನು ಅನುಭವಿಸುವಿರಿ, ಕೇಂದ್ರೀಕೃತವಾದ ಅದರ ಸ್ವಾಭಾವಿಕ ಶುಶ್ರೂಷೆಯು ಕ್ಷೀಣಿಸಿದ ನಿಮ್ಮ ಶರೀರವನ್ನು ಪುನರ್ರಚಿಸುವುದು, ನರಗಳನ್ನು ಗಟ್ಟಿಗೊಳಿಸುವುದು, ಜೈವತನ್ಯವನ್ನು ಇಮ್ಮಡಿಗೊಳಿಸುವುದು, ಸುಖದಾಯಕ ನಿದ್ರೆ ಕೊಡುತ್ತೆ. "ಓವಲ್‌ಟಿನ್" ಶುದ್ಧವಾದ ಪರಿಪೂರ್ಣ ನೈಸರ್ಗಿಕ ಆಹಾರ. ಆರೋಗ್ಯಕ್ಕೆ ಅದನ್ನು ದಿನವೂ ಕುಡಿಯಿರಿ.

ಒವಲ್‌ಟಿನ್
OVALTINE
ಒಂದು ಸ್ವದೇಶಿ ಕರವಾದ ಆಹಾರಪೌಷ್ಟಿಕವಸ್ತು

ಎಲ್ಲಾ ಔಷಧಿ ಮಾರುವವರಲ್ಲೂ ಮತ್ತು ಸ್ಟೋರ್ಸ್‌ಗಳಲ್ಲೂ ಸಿಗುತ್ತದೆ.

OV/726/40

EARN Rs. 50/–PER MONTH

without investment or security. Wanted energetic candidates to represent for securing orders of High Class Art Calendars. Ask for our illustrated Free Booklet.

Glasgow Printing Co. Howrah.

THE CANARA BANKING CORPORATION, LTD.

(Incorporated in British India)

ESTD: 1906

Head Office: UDIPI, S. Kanara

STANDING ORDERS OF CUSTOMERS:

1. Collection of Interest on Govt. & other securities on due dates.
2. Payment of Premia on Policies.
3. Other remittances to specified persons,

ETC. ETC. ETC.

ARE EXECUTED.

Entrust this to us and save worry.

For full particulars apply to our nearest Office.

ಕಂಠೀರವ

KANTEERAVA

KANARESE, BI-WEEKLY

ನಾಶದ ವಿನಾ ಜೀವನದ ಶಕ್ತಿ ತಿಳಿಯದು ಸೂಕ್ತಿಮಾಲೆ—

XXIII] ಮಂಗಳೂರು, ತಾರೀಕು ೨೩—೯—೧೯೪೧ [೫೧

೧೮೬೩ ವೃಷ ಸಂವತ್ಸರದ ಆಶ್ವೀಜ ಶು। ೨ ಮಂಗಳವಾರ

ಭಾರತವೂ ಚುನಾವಣೆಗಳೂ

ಭಾರತದ ಚುನಾವಣೆಗಳನ್ನು ಮುಂದುವರಿಸಲುಳ್ಳ ಒಂದು ಮಸೂದೆಯನ್ನು ಪಾರ್ಲಿಮೆಂಟಿನಲ್ಲಿ ತಂದು ಹಾಕಿ, ಮಂಜೂರು ಮಾಡಿಸಿದರು! ಅದನ್ನು ಮುಂದಿಸುವ ಮುಂಜೂರು ಮಾಡಿಸುವ ಕಾಲದಲ್ಲಿ, ಭಾರತ ಸಚಿವರಾದ ಮಿ। ಅಮೆರಿಯವರು ಮುಂದೆ ತಂದ ವಾದಗಳು ಹಲವು. ಭಾರತದಲ್ಲಿ ಚುನಾವಣೆಗಳೆಲ್ಲಿಯಾದರೂ ನಡೆದರೆ, ಆಗ ಹಿಟ್ಲರನಿಗೆ ವಿಜಯದ ಸಂದರ್ಭಗಳೇನಾದರೂ ಒದಗಬಹುದೇ ಎಂಬಂತೆ, ಯುದ್ಧದ ಸ್ಥಿತಿಯ ಒಂದಿಷ್ಟು ಬಣ್ಣ ಪೆತ್ತಿದರು.

ಅಮೆರಿಕದಲ್ಲಿ, ಯುದ್ಧದ ಸಮಯದಲ್ಲೇ, ಸಾಮಾನ್ಯ ಚುನಾವಣೆ ನಡೆಯಿತು; ಆಸ್ಟ್ರೇಲಿಯದ ಕಾಮನ್‌ವೆಲ್ತಿನಲ್ಲಿಯೂ, ಪೆಸಿಫಿಕ್ಕಿನಲ್ಲಿ ಅಪಾಯದ ಭೀತಿ ಇರುವಾಗಲೂ ಕೂಡ ಆ ಚುನಾವಣೆ ನಡೆದೇ ಹೋಯಿತು. ಇವ್ಯಾದರೂ, ಹಿಟ್ಲರಿಗೇನಾದರೂ ಅವುಗಳಿಂದ ಬಂದಿಷ್ಟೂ ಉಪಯೋಗವಾಗಲಿಲ್ಲ. ಒಂದು ವೇಳೆ, "ಹೌಸ್ ಆಫ್ ಕಾಮನ್ಸ್"ಗೆ ಜೀವದಾನ ಮಾಡಲಾಗಿದೆ ಎಂಬ ಉದಾಹರಣೆ ಮುಂದೆ ಬರಬಹುದಾದರೂ, ಆ ತೀರ್ಮಾನವನ್ನು ಮಾಡಿಕೊಂಡಿದುದು ಆ ದೇಶದ ರಾಜಶಾಸನ ಸಭೆಯೇ—ಇತರರಲ್ಲ. ಭಾರತದ ಹಾಗೆ, ಇನ್ನೂರು ಮುನ್ನೂರು ಮಂದಿ ಸ್ತ್ರೀಪುರುಷರು,—(ಎಕ್ಕವರು ತೂಕಡಿಸುತ್ತಿರುವ ಮಹಾನುಭಾವರು)—ಶಾಸನ ಸಭಾ ಸದಸ್ಯರು, ಸಾವಿರಾರು ಮೈಲು ದೂರದಲ್ಲಿ ಕುಳಿತು, ದೇಶದ ಆವಶ್ಯಕತೆಗಳೇನು ಎಂಬೀ ವಿಚಾರದ ಅರಿವಿಲ್ಲದೆ, ರಾಜಕೀಯ ವಿಕಾಂಕ್ಷೆಗಳ ಕಡೆಗೆ ಸಹಾನುಭೂತಿ ತೋರದೆ, "ಗವರ್ನರರಿದ್ದಾರೆ; ನೀವಿದ್ದೀರಿ" ಎಂದು ಹೇಳಿ ಬಿಡಲಿಲ್ಲ!

"ಜಾತಿಯ ಜಗಳ" ಮುಂತಾದ ಮಾಮೂಲಿನ ನೆವನಗಳನ್ನು ಈ ಮಸೂದೆಯ ಸಮರ್ಥನೆಗೆಂದೂ ಮುಂದೆ ತಂದುದು, ಕಾರಣಗಳನ್ನೇನಾದರೂ ಕೊಟ್ಟೇ ತೀರಬೇಕಲ್ಲ ಎಂಬುದರಿಂದಲ್ಲದೆ ಬೇರೆಯಲ್ಲ. ಒಂದು ವೇಳೆ, ಯುದ್ಧ ಮುಗಿದರೂ ಜಾತಿಯ ಕಲಹ ಮುಗಿಯದಿರುವಾಗ, ಭಾರತದಲ್ಲಿ ಸಾಮಾನ್ಯ ಚುನಾವಣೆಗಳೇನು ನಡೆಯುವುವೋ ಇಲ್ಲವೋ ನೋಡಬೇಕು. ಅದೀಗ ಸ್ವಾರಸ್ಯ.

ಮಿ। ಅಮೆರಿಯವರು ಕೊಟ್ಟ ಒಂದು ಕಾರಣ ಮಾತ್ರ ನಿಜವೇ. "ಈಗಿನ ಪರಿಸ್ಥಿತಿಯಲ್ಲಿ ಚುನಾವಣೆ ನಡೆದರೆ, ಆಡಳಿತದ ರಾಜ್ಯಘಟನೆಯ ಸ್ಥಿತಿಯಲ್ಲಿ ಬದಲಾವಣೆ ಕಾಣದು; ಶ್ರೀ। ಗಾಂಧಿಯವರ "ಲೇದು" ತತ್ತ್ವಕ್ಕಿಷ್ಟು ಗಾಳಿ ಹಾಕಿದಂತಾಗುವುದಷ್ಟೇ!" ಹೌದು! ಮಿ। ಅಮೆರಿಯವರಿಲ್ಲಿ ಯಥಾರ್ಥವನ್ನೇ ಹೇಳಿದ್ದಾರೆ. ಇದರ ಅರ್ಥ, ಭಾರತದ ಮತದಾರರು ಗಾಂಧಿಜಿಯವರಲ್ಲಿ ಅಥವಾ ಕಾಂಗ್ರೆಸಿನಲ್ಲಿ ತಮಗಿರುವ ನಂಬಿಕೆಯನ್ನು ಈ ಚುನಾವಣೆ ಮೂಲಕವೂ ಪ್ರಕಟಿಸುವುದು ಬೇಡ ಎಂದೇ? ಅದೇನೇ ಇದ್ದರೂ, ಗಾಂಧಿಜಿಯವರಿಗೂ ಅವರ ದೇಶೀಯರಿಗೂ ನಡುವೆ, ಚುನಾವಣೆಯ ಕುರಿತಾದ ಈ ಮಸೂದೆಯ ಗೋಡೆ, ಅಡ್ಡ ನಿಲ್ಲುವಂತೆ ವಿರ್ಪಡಿಸಲಾಗಿದೆ. ಯದ್ಯಪಿ, ಚುನಾವಣೆ ನಡೆದಲ್ಲಿ, ಮತದಾರರ ತೀರ್ಮಾನವೇನಾದೀತೆಂದು, ಮಿ। ಅಮೆರಿಯವರು ಜಗತ್ತಿಗೂ, ಬ್ರಿಟಿಷ್ ಜನತೆಗೂ ಸ್ಪಷ್ಟವಾಗಿ ಸೂಚಿಸಿರುವುದಕ್ಕಾಗಿ, ಮಿ। ಅಮೆರಿಯವರಿಗೆ, ಅವರ ಪ್ರಮಾಣಿಕತೆಗೆ ವಂದನೆಗಳು ಸಲ್ಲಬೇಕಾಗಿವೆ.

ವಿದೇಶ—ಹಿಂದೂದೇಶ

ಕೀವಿನ ಬಳಿ ಉಗ್ರ ಸಮರ.

ಕೀವಿನ ಬಳಿ ಅತ್ಯಂತ ಭೀಕರ ಸ್ವರೂಪದ ಕಾಳಗ ಸಾಗುತ್ತಿದೆ. ಅಲ್ಲಿನ ಪರಿಸ್ಥಿತಿ ಬಹಳ ವಿಷಮಕ್ಕಿಟ್ಟಿದೆ. ಆದರೆ ರಷ್ಯದ ಸೇನೆಗಳ ಮತ್ತು ನಗರವಾಸಿಗಳ ರಣೋತ್ಸಾಹವೂ ಕಡಿಮೆ ಇಲ್ಲ. ಹಿಂದೊಮ್ಮೆ ಅಗೋಸ್ತಿನಲ್ಲಿ ಜರ್ಮನ್ ಸೇನೆಗಳು ಕೀವನ್ನು ವಶಪಡಿಸಿಕೊಳ್ಳಲು ಬಹಳ ಸಾಹಸ ಮಾಡಿದ್ದರೂ ವ್ಯರ್ಥವಾಗಿದ್ದಿತು. ಈಗ ಅಲ್ಲಿ ಹಿಟ್ಲರ್ ಹೊಸ ಸೇನೆಗಳನ್ನು ತುಂಬಿ ಆ ನಗರವನ್ನು ಸ್ವಾಧೀನ ಮಾಡಿಕೊಳ್ಳಬೇಕೆಂದಿದ್ದಾನೆ. ಇಷ್ಟರಲ್ಲೇ ಅವನ ನೂರಾರು ವಿಮಾನಗಳೂ, ಸಾವಿರಾರು ಮಂದಿ ಸೈನಿಕರೂ ನಷ್ಟವಾಗಿರುವರಾದರೂ ಕೀವ್ ನಗರದ ಪುರದುರ್ಗದ ಮೇಲೆ ಜರ್ಮನರ ಧ್ವಜ ಹಾರುತ್ತಿದೆ ಎಂದು ಹೇಳಲಾಗಿದೆ. ಜರ್ಮನರು ಆ ನಗರವನ್ನು ಸುತ್ತುಗಟ್ಟಿದ್ದಾರಂತೆ. ಅಲ್ಲದೆ ಕೀವಿನಿಂದ ೨೦೦ ಮೈಲುಗಳ ದೂರವಿರುವ ಪೊಲ್ಟಾವಾ ಆಗಲೇ ಜರ್ಮನರ ವಶವಾಯಿತೆಂದೂ ಸುದ್ದಿ. ಇದುವರೆಗೆ ತಾವು ೧,೮೦,೦೦೦ ಮುಂದಿ ರಷ್ಯದ ಕೈದಿಗಳನ್ನು ಹಿಡಿದೆವೆಂದೂ, ಸತ್ತವರೂ, ಗಾಯಗೊಂಡವರೂ ರಷ್ಯದವರಲ್ಲಿ ಅದಕ್ಕಿಂತಲೂ ಅಧಿಕವೆಂದೂ ಜರ್ಮನರು ಸಾರುತ್ತಾರೆ

ಲೆನೆನ್‌ಗ್ರಾಡ್—ಒಡೆಸ

ಲೆನೆನ್‌ಗ್ರಾಡಿನ ಮೇಲೆ ಜರ್ಮನರ ಆಕ್ರಮಣದ ಭರ ಹೆಚ್ಚುತ್ತಿದೆ. ಆದರೆ ರಷ್ಯದ ಸೇನೆಗಳೂ ವೀರಾವೇಶದಿಂದ ಕಾದುತ್ತಿವೆ. ಅಲ್ಲಿನ ರಕ್ಷಣಾಕಾರ್ಯಗಳ ಕುರಿತು ಇಟೆಲಿಯವರು ಪ್ರಶಂಸೆ ಸಲ್ಲಿಸಿದ್ದಾರೆ. ಆದರೂ ಆ ನಗರವನ್ನು, ಎಷ್ಟು ಖರ್ಚಾದರೂ ಸರಿ, ಹಿಡಿಯಲೇ ಬೇಕೆಂದು ಜರ್ಮನ್ ಉಚ್ಚ ಸೇನಾಧಿಪತ್ಯದ ಅಪ್ಪಣೆ.

ಒಡೆಸದಲ್ಲಿನ ಪರಿಸ್ಥಿತಿ ರಷ್ಯಕ್ಕೆ ಕೊಂಚ ಅನುಕೂಲವೆಂಬ ವಾರ್ತೆ ಬಂದಿದೆ. ಇಲ್ಲಿ ಜರ್ಮನ್–ರುಮೇನಿಯಾ ಸೇನೆಗಳು ಒಟ್ಟಾಗಿ ಮುನ್ನುಗ್ಗುತ್ತಿದ್ದರೂ ರಷ್ಯದ ಬಾಂಬರುಗಳು ಈ ಮುನ್ನಡೆಯನ್ನು ತಡೆದಿವೆ. ಶತ್ರುಗಳಲ್ಲಿ ಬಹಳ ನಷ್ಟವಾಗಿದೆ.

ಇಟೆಲಿ ಹಡಗುಗಳು ಮುಳುಗಿಸಲ್ಪಟ್ಟವು

ಮೆಡಿಟರೇನಿಯನಿನಲ್ಲಿ ಡಚ್ ಸರಕಾರದ ಒಂದು ಸಬ್‌ಮೆರೈನ್ ೧೨೦೦ ಟನ್ನಿನ ಒಂದು ಇಟೆಲಿ ಹಡಗನ್ನು ಮುಳುಗಿಸಿ ೬ ಸಾವಿರ ಟನ್ನಿನ ಇನ್ನೊಂದು ಇಟೆಲಿ ಸರಬರಾಯಿ ಹಡಗನ್ನು ಟಾರ್ಪೆಡೋ ಮಾಡಿತು.

ರೋಮ್—ಬರ್ಲಿನುಗಳ ತಿಕ್ಕಾಟವೇ?

ಲೀಬಿಯದಲ್ಲಿ ಬ್ರಿಟಿಷರ ಕಾದಾಟ ಆರಂಭವಾಗಲಿದ್ದು ಆಗ ಇಟೆಲಿಗೆ ಜರ್ಮನಿಯ ಸಹಾಯ ತಕ್ಕಂತೆ ಒದಗದಾದ ಕಾರಣ ಅಮೆರಿಕದೊಡನೆ ಈ ಕುರಿತು ಏನೋ ಮಾತಾಡಲು ಇಟೆಲಿ ಅಮೆರಿಕಕ್ಕೆ ತನ್ನದೊಂದು ಶಿಷ್ಟಮಂಡಲ ಕಳುಹಿಸಿದೆ ಎಂದು ಒಂದು ಅಧಿಕಾರರಹಿತವಾದ ಸುದ್ದಿ.

ಸ್ವಸ್ತಿಕ್ ಶಿಕಾಕ್ಕಾ

ನಿಮಗೀಗ ದೀರ್ಘ, ಕಾಂತಿಯುಕ್ತ ಕೂದಲನ್ನೂ ನಯವಾದ ಶುಭ್ರ ಮೈಹೊಳಪನ್ನೂ ಕೊಡುವ ಗುಣದ್ವಯಗಳ ಟ್ಯಾಲೆಟ್ ಸಾಬೂನು. **ಸ್ವಸ್ತಿಕ್ ಶಿಕಾಕ್ಕಾ**–ಶುದ್ಧ ಸಸ್ಯ ತೈಲಗಳಿಂದ ಮಾಡಲ್ಪಟ್ಟ-ದ್ವಿಗುಣ ಉದ್ದಿಶ್ಯದ ಸಾಬೂನು. ಇತರ ಸಾಬೂನುಗಳಂತೆ ಇದು ಕೂದಲನ್ನು ಹಾಳುಗೆಡಬಿಡದು; ಬದಲು ಅದರ ಬೆಳವಣಿಗೆಗೆ ಸಹಾಯಕವಾಗಿದೆ. ಅದು ಶುಭ್ರ ಚರ್ಮವನ್ನೂ ನಿರ್ದೋಷ ಅಂಗಕಾಂತಿಯನ್ನೂ ಕೊಡುತ್ತದೆ.

ಪೆಟ್ಟಿಗೆಯೊಂದನ್ನು ಇಂದೇ ಕೊಳ್ಳಿರಿ.

ಸ್ವಸ್ತಿಕ್ ಶಿಕಾಕ್ಕಾ ಟ್ಯಾಲೆಟ್ ಸಾಬೂನ್.

ಸ್ವಸ್ತಿಕ್ ಆಯಿಲ್ ಮಿಲ್ಸ್ ಲಿಮಿಟೆಡ್, ಬೊಂಬ್ಬಾ 15

ರಷ್ಯದ ರಣರಂಗ

ಜರ್ಮನರು ಕ್ರಿಮಿಯವನ್ನು ಮುಖ್ಯವಾದ ಪ್ರದೇಶದಿಂದ ಬೇರ್ಪಡಿಸಿರಬಹುದು; ಕೀವಿನಲ್ಲಿ ಜರ್ಮನರು ಒಳನುಗ್ಗಿದ್ದಾರೆ; ಲೆನಿನ್‌ಗ್ರಾಡಿನ ಸಮರವು ಘೋರವಾಗಿ ನಡೆಯುತ್ತಿದೆ. ಕೆಲವು ವೇಳೆ ಜರ್ಮನ್ ಸೈನಿಕರೊಡನೆ ರಷ್ಯದವರೂ, ರಷ್ಯದವರೊಡನೆ ಜರ್ಮನರೂ ಬೆರಿಕೆಯಾಗಿ ಗೊಂದಲವಾಗುವಾಗುತ್ತಿದೆ; ಲೆನಿನ್‌ಗ್ರಾಡಿನ ಕಡೆಯಿಂದ ರಷ್ಯದವರು ಜರ್ಮನರನ್ನು ೯ ಮೈಲುಗಳಷ್ಟು ದೂರ ಹಿಂದಕ್ಕಟ್ಟಿದ್ದಾರೆ; ಆದರೂ ಅಲ್ಲಿನ ಪರಿಸ್ಥಿತಿ ಗಭೀರವಾಗಿದೆ; ಒಡೆಸದ ಕಾದಾಟದಲ್ಲಿ ಜರ್ಮನಿಗೆ ಇನ್ನೂ ಫಲ ಸಿಕ್ಕಿಲ್ಲ; ಸೋಮ್‌ಲೆನ್‌ಸ್ಕಿನ ಬಳಿಯ ಬಿಯಾನಸ್ಕ್‌ನ ಕಾಳಗದಲ್ಲಿ ಜರ್ಮನರಿಗೆ ಅಪಾರವಾದ ಜನ ನಷ್ಟವಾಗಿದೆ ಎಂದು ಈಚಿಗಿನ ವಾರ್ತೆ.

ಸ್ವೀಡನಿನಲ್ಲಿ

ಇಲ್ಲಿ ಮದ್ದುಗುಂಡುಗಳು ಸಿಡಿದು ಮೂರು ಸ್ವೀಡನಿನ ಡಿಸ್ಟ್ರಾಯರುಗಳು ನಷ್ಟವಾದವೆಂದೂ, ಅದರಲ್ಲಿದ್ದ ಸುಮಾರು ೩೧ ಮಂದಿ ಕೊಲ್ಲಲ್ಪಟ್ಟು, ೧೧ ಮಂದಿಗೆ ಗಾಯಗಳಾದುವೆಂದೂ ಪ್ರಕಟವಾಗಿದೆ.

ಇರಾನಿನಲ್ಲಿ

ಬ್ರಿಟಿಷ್ ಮತ್ತು ರಷ್ಯದ ಸೇನೆಗಳು ಆಗಲೇ ತೆಹರಾನಿನೊಳಗೆ ಪ್ರವೇಶಿಸಿವೆ. ಹೊಸ ಷಹಾ ಮಿತ್ರರೊಡನೆ ಸಹಕರಿಸುವೆನೆಂದಿದ್ದಾನೆ. ಅಲ್ಲದೆ ತನ್ನ ತಂದೆಯಾದ ಮಾಜಿ ಷಹನ ಆಸ್ತಿಸ್ವಾಸ್ಥ್ಯ, ಹೇರಳ ಸಂಪತ್ತನ್ನು ಇರಾನಿನ ಪ್ರಜೆಗಳ ವಶಕ್ಕೆ ಬಿಟ್ಟುಕೊಟ್ಟಿದ್ದಾನೆ. ಇರಾನಿನ ಜರ್ಮನರನ್ನೆಲ್ಲ ಅಲ್ಲಲ್ಲೇ ತಡೆಯಲಾಗಿದೆ. ಈ ಸಂದರ್ಭದಲ್ಲಿ ರಷ್ಯದವರು ಹಾಗೂ ಬ್ರಿಟಿಷರಿಂದ ಇರಾನಿನಲ್ಲಿ ಕೈಕೊಳ್ಳಲಾದ ಕಾರ್ಯಕ್ರಮಗಳನ್ನು ಸಾರ್ವಜನಿಕರಿಗೆ, ಮುಖ್ಯವಾಗಿ ಮುಸ್ಲಿಂ ಮುಖಂಡರಿಗೆ ತಿಳಿಯಹೇಳುವುದು ಅಪೇಕ್ಷಣೀಯವೆಂದು ಮದ್ರಾಸ್ ಸರಕಾರ ತನ್ನ ಯಾವತ್ತು ಜಿಲ್ಲಾ ಕಲೆಕ್ಟರುಗಳಿಗೆ ಸೂಚಿಸಿದೆ.

ಬಂಗಾಳ ಎಸೆಂಬ್ಲಿ

ಬಂಗಾಳ ಎಸೆಂಬ್ಲಿ ಕಳೆದ ತಾ. ೧೮ರಲ್ಲಿ ಕೂಡಿ ಬಂದು, ಸಭಾರಂಭವಾದ ಮರುಕ್ಷಣದಲ್ಲಿಯೇ ಆ ಅಧಿವೇಶನವನ್ನು ಮುಂದುವರಿಸಲಾಗಿದೆ ಎಂದು ಪ್ರಕಟಿಸಲಾಯಿತು. ಕಾಹಿಲೆಯ ದೆಸೆಯಿಂದ ೩ ತಿಂಗಳ ರಜೆ ಹಾರೈಸಿದ್ದರೆಂಬ ಸ್ಪೀಕರ್ ಮಿ। ಅಜಿಜುಲ್ ಹಕ್ಕರೇ ಅಂದು ಅಧ್ಯಕ್ಷತೆ ವಹಿಸಿದ್ದರು. ಹೀಗೆ ತೊಂದರೆಗಳ ತೆರೆಯಲ್ಲಿ ತೇಲುತ್ತಿದ್ದ ಬಂಗಾಳದ ರಾಜನೀತಿಯ ನಾಟಕದ ಫರದೆ ಬಂಗಾಳ ಗವರ್ನರರ ತೀರ್ಮಾನದಂತೆ ಸದ್ಯಕ್ಕೆ ಬಿದ್ದಿತು. ಇನ್ನುಮುಂದೆ ನವೆಂಬರದಲ್ಲಿ ಈ ಎಸೆಂಬ್ಲಿ ಸೇರುವ ತನಕ ಪ್ರಧಾನ ಮಿ। ಹಕ್ಕರಿಗೂ, ಮಂತ್ರಿ ಮಿ। ಸುಹ್ರವರ್ದಿಯವರಿಗೂ ಏನೇನು ನಡೆಯುವುದೋ ತಿಳಿಯದು.

Situation Vacant

Applications are invited for the post of a clerk, from persons who have passed at least the III Form and possess a knowledge of Typewriting. The applications should not be typed but should be in the hand of the applicants themselves.

Preference will be given to those who have experience of survey work and who can write a good hand in English and Kanarese.

Applicants should state the pay they expect.

Southern Land Trust Ltd.,
Mangalore.

ಅಂತೂ ಮಿ। ಸುಹ್ರವರ್ದಿಯವರ ವಿರೋಧವಾಗಿ ಬಂದ ಅವಿಶ್ವಾಸದ ಠರಾವು ಅಲ್ಲೇ ತ್ರಿಶಂಕು ಸ್ವರ್ಗದಲ್ಲಿ ನೇತಾಡುವಂತಾಯಿತು. ಮಿ। ಹಕ್ಕರು ಸದ್ಯ ವೈಸರಾಯರ ಭೇಟಿ ಮಾಡಲಿರುವರು.

ಕೋರ್ಟ್‌ನಲ್ಲಿ ವಂತಿಗೆಗಾಗಿ ಅಪೇಕ್ಷಿಸಬಾರದು

ಯಾವ ಮ್ಯಾಜಿಸ್ಟ್ರೇಟರಾಗಲೀ ಕೋರ್ಟ್‌ನಲ್ಲಿ ಅಧಿಕಾರ ಚಲಾಯಿಸುವವರಾಗಲೀ ಸಾಕ್ಷಿಗಾರ ಮೊದಲಾದವರಿಂದ ವಂತಿಗೆಯನ್ನು ಅಪೇಕ್ಷಿಸುವುದು ಸರಿಯಲ್ಲವೆಂದು ಪಾಟ್ನಾ ಹೈಕೋರ್ಟ್ ಜಡ್ಜರಾದ ಮಿ। ಜಸ್ಟಿಸ್ ಅಗರವಾಲರು, ಒಂದು ಸಂದರ್ಭದಲ್ಲಿ ತಮ್ಮ ಅಭಿಪ್ರಾಯ ತಿಳಿಸಿದರು.

Manager's

NOTICE

There will be no issue of Kanteerava on 30–9–'41 on account of Pooja Holidays.

ಕೊನೆಯಚ್ಚೊತ್ತು

ಸದ್ಯವೇ ಜರ್ಮನರು ಡಾರ್ಡನೆಲ್ಸ್ ಮತ್ತು ಬೋಸ್ಪರಸ್‌ಗಳ ಮೇಲೆ ದಾಳಿ ಮಾಡಲಿದ್ದಾರಂತೆ;–ಕೀವ್ ನಗರವು ಇಡೀ ಜರ್ಮನರ ವಶವಿನ್ನೂ ಆಗಿಲ್ಲ;–ಹಿಂದುಸ್ಥಾನ–ಸಿಲೋನಿನ ಕಾನ್ಪರೆನ್ಸು ಮುಗಿದು ಶಿಷ್ಟಮಂಡಲಗಳ ವರದಿ ತಯಾರಾಗಲಿದೆ.

ಮಂಗಳೂರಲ್ಲಿ ಕ್ರಿಕೆಟ್ ಮ್ಯಾಚುಗಳು

ಕೆನರಾ ಕ್ರಿಕೆಟ್ ಕ್ಲಬ್ಬಿನವರಿಗೂ, ತಿರುಚಿನಾಪಳ್ಳಿಯವರಿಗೂ ನಿನ್ನೆ ನಡೆದ ಪಂದ್ಯಾಟದಲ್ಲಿ ಮೊದಲಿನವರಿಗೆ ೫ ವಿಕೆಟುಗಳು ಹೋಗಿ ೮೮ ರನ್ನು; ಎರಡನೆಯವರಿಗೆ ಎಲ್ಲ ವಿಕೆಟುಗಳಿಗೆ ೧೦೭ ರನ್ನು; ಪ್ರೆಸಿಡೆನ್ಸಿ ಕಾಲೇಜಿನವರಿಗೂ, ಸ್ಥಳೀಯ ಗವರ್ನ್‌ಮೆಂಟ್ ಕಾಲೇಜಿನ ಹೊಸ ಹಳೆಯ ವಿದ್ಯಾರ್ಥಿಗಳಿಗೂ ನಿನ್ನೆ ಆದ ಪಂದ್ಯಾಟದಲ್ಲಿ ಎರಡನೆಯವರ ಕೈ ಮೇಲಾಗಿದೆ. ಇವರಿಗೆ ೭ ವಿಕೆಟುಗಳಿಗೆ ರನ್ಸ್ ೧೭೩; ಪ್ರೆಸಿಡೆನ್ಸಿಯವರಿಗೆ ಅಷ್ಟೇ ವಿಕೆಟುಗಳಿಗೆ ರನ್ಸ್ ೭೦.

ಮಂಗಳೂರು ಮುನ್ಸಿಪಲ್ ವಿಾಟಿಂಗ್

ನಿನ್ನೆ ಸಂಜೆ ಶ್ರೀ। ಬಿ. ವೆಂಕಟರಾವ್ ಬಾಳಿಗರ ಅಧ್ಯಕ್ಷತೆಯಲ್ಲಿ ಜರುಗಿದ ವಿಾಟಿಂಗಿನಲ್ಲಿ ಡಾ। ವಿಠ್ಠಲ ಸೆಟ್ಟರನ್ನು ಸ್ವಾಗತಿಸುವ ಠರಾವಾಯಿತು; ಶ್ರೀ। ಎ. ವಿ. ಥಕ್ಕರರಿಗೊಂದು ಮಾನಪತ್ರ ಸಮರ್ಪಿಸುವ ಠರಾವಾಗಿ ಅದನ್ನು ಬರೆಯಲು ಒಂದು ಕಮಿಟಿ ರಚನೆಯಾಯಿತು. ವೆಬ್‌ಸ್ಟರ್ ಮಾರ್ಕೆಟಿಗಾಗಿ ಪಡೆದ ಸಾಲ ರೂ. ೬೦ ಸಾವಿರವನ್ನು ಬಡ್ಡಿ ಸಹಿತ ಸರಕಾರಕ್ಕೆ ಅದರ ಅಪ್ಪಣೆಯಂತೆ, ಹಿಂದಿರುಗಿಸಬೇಕೆಂದಾಯಿತು. ಆ ಮಾರ್ಕೆಟಿನ ಜೀರ್ಣೋದ್ಧಾರ ಮುಂದೆ ಬಿತ್ತು.

ನಿಮ್ಮ ಶ್ವಾಸಕ್ಕೆ ವಾಸನೆ ಇದ್ದರೆ ನೀವು ಆರೋಗ್ಯವನ್ನು ಅನುಭವಿಸಲಾರಿರಿ

ಅನುನಿತ್ಯವೂ ನಮ್ಮ ಯಕೃತ್ತಿನಿಂದ ಎರಡು ಪೈಂಟ್ ಪಿತ್ತದ ದ್ರವವು ಕರುಳೊಳಗೆ ಸುರಿಯುತ್ತಿದ್ದರೆ ನಮ್ಮ ಚಲನಗಳು ಸ್ಪಷ್ಟವಾಗಿ, ಮಲಬದ್ಧತೆಯುಂಟಾಗುತ್ತದೆ ಮತ್ತು ನಮ್ಮ ಆಹಾರವು ಅಸ್ವಾಭಾವಿಕವಾಗಿ ನಮ್ಮ 28 ಫೀಟಿನ ಕರುಳುಗಳಲ್ಲಿ ಹಾಳಾಗುತ್ತದೆ. ಈ ಹೊಲಸು ಪ್ರತಿ ಆರು ನಿಮಿಷಗಳಿಗೊಮ್ಮೆ ನಮ್ಮ ದೇಹದಲ್ಲೆಲ್ಲಾ ವಿಷವನ್ನು ಕಳುಹಿಸುತ್ತದೆ. ಅದು ನಮ್ಮನ್ನು ವ್ಯಾನಚಿತ್ತರನ್ನಾಗಿಯೂ, ಜಡಸ್ವಭಾವದವರನ್ನಾಗಿಯೂ ಯಾವದಕ್ಕೂ ಬಾರದವನ್ನಾಗಿಯೂ ಮಾಡುತ್ತದೆ. ನಮ್ಮ ಮಿತ್ರರು ಈ ಹೊಲಸು ನಮ್ಮ ಬಾಯಿಯಿಂದ ಹೊರಡುವುದನ್ನು ಅನುಭವಿಸಿ ಅದನ್ನು ದುರ್ವಾಸನಾಮಯವಾದ ಶ್ವಾಸವೆನ್ನುತ್ತಾರೆ. ಭೇದಿಯು ಮತ್ತು ಬಾಯಿ ಮುಕ್ಕಳಿಸುವ ಇತರ ಔಷಧಿಗಳು ಸ್ವಲ್ಪ ಮಟ್ಟಿಗೆ ಮಾತ್ರ ಸಹಾಯ ಮಾಡುವವು ಕಾರ್ಟರರ ಚಿಕ್ಕ ಲಿವರ್ ಮಾತ್ರೆಗಳನ್ನು ಸೇವಿಸಿ. ಅವುಗಳು ಎರಡು ಪೈಂಟ್ ಪಿತ್ತದ್ರವವನ್ನು ಸರಾಗವಾಗಿ ಸುರಿಸುತ್ತವೆ. ಮತ್ತಾಗ ನೀವು 'ಇನ್ನೂ ಇನ್ನೂ' ಹುರುಪುಗೊಂಡವರಾಗುತ್ತೀರಿ. ಕಾರ್ಟರರ ಲಿಟ್ಲ್ ಲಿವರ್ ಪಿಲ್ಸ್ ಎಂಬ ಹೆಸರಿನಿಂದಲೇ ಕೇಳಿರಿ ಮತ್ತು ನೀವು ಕೇಳಿದುದನ್ನೇ ತೆಗೆದುಕೊಳ್ಳಿ. 41

ಅಮೆರಿಕದಲ್ಲಿ ಪ್ರಚಾರಕಾರ್ಯ

ಭಾರತದ ಎದ್ಯಮಾನಗಳ ಕುರಿತಾಗಿ ಅಮೆರಿಕದವರಿಗೆ ಬೋಧನೆ ಕೊಡಲಿಕ್ಕೆಂದು ಇಂಡಿಯದ ಸಮಗ್ರ ಅನುಭವವುಳ್ಳ ಒಬ್ಬ ಯುರೋಪೀಯ ಪತ್ರಿಕಾ ಉದ್ಯೋಗಿಯನ್ನು ಅತ್ತ ರವಾನಿಸುವ ಆಲೋಚನೆ ನಡೆಯುತ್ತಿದೆಯಾಗಿ ವಾರ್ತೆ. ಈ ಪ್ರಚಾರಕಾರ್ಯದ ಖರ್ಚನ್ನು ತೆರುವುದು ಸಾರ್ವಭೌಮ ಸರಕಾರವೇ, ಇಂಡಿಯಾ ಸರಕಾರವೇ ಎಂಬುದಿನ್ನೂ ತಿಳಿದಿಲ್ಲ.

ಕಾಣೆಯಾಗಿದೆ

ಚಿರಲಾ ಪ್ರಾಂತದ ಚಿರುಕಪಳ್ಳಿ ಗ್ರಾಮದ ಸಬ್ ರಿಜಿಸ್ಟ್ರಾರರ ಆಫೀಸಿಗೆ ಕಳ್ಳರು ಹೊಕ್ಕು ಕೆಲವು ದಾಖಲೆಗಳ ಸಹಿತ ೧೦೦ ರೂಪಾಯಿಗಳನ್ನು ಜಾರಿಸಿದ್ದಾರೆ. ನಗದಿ ಪೆಟ್ಟಿಗೆ ಬಿಸಾಡಿದುದು ಸಿಕ್ಕಿದೆ. ಕಳ್ಳರ ಪತ್ತೆ ನಡೆಯುತ್ತಿದೆ.

ಕಾಂಗ್ರೆಸ್ ಆಫೀಸಿನ ಝಡ್ತಿ

ಪೋಲೀಸರು ಅಲ್ಲಹಾಬಾದ್ ಜಿಲ್ಲಾ ಕಾಂಗ್ರೆಸನ್ನು ಝಡ್ತಿಮಾಡಿ, ಕೆಲವು ಕಾಗದ ಪತ್ರಗಳನ್ನು ವಶಮಾಡಿಕೊಂಡು, ಇ. ರ. ಕಾನೂನಿನಂತೆ ನಿರ್ಬಂಧವಾಸಕ್ಕಾಗಿ ಇಬ್ಬರನ್ನು ಕೈದು ಮಾಡಿರುವರು.

ಬೊಂಬಾಯಿಯಿಂದ ಸಿಮ್ಲಕ್ಕೆ ಒಂದೇ ದಿನ

ಬೊಂಬಾಯಿಯಿಂದ ಕಾರ್ಯಗಾರವದ ಮೇಲೆ ಹೊರಟ ಒಂದು ವಿಮಾನ ಅದೇ ದಿನ ಸಿಮ್ಲಕ್ಕೆ ತಲಪಿದೆ. ಈ ಶೀಘ್ರ ಪ್ರಯಾಣ ಇದು ಪ್ರಥಮ ಬಾರಿ ಎನ್ನಲಾಗಿದೆ.

ಯುದ್ಧದ ಕೈದಿಗಳ ಸಂಖ್ಯೆ

ಇದುವರೆಗೆ ಇಂಡಿಯಕ್ಕೆ ಬಂದ ಯುದ್ಧದ ಕೈದಿಗಳ ಸಂಖ್ಯೆ ಒಟ್ಟಿಗೆ ೬೫೦೦ ಮಂದಿ ಆಫೀಸರರು; ೩೨ ಸಾವಿರ ಮಂದಿ ಇತರರು.

ಮಂಗಳೂರು

ಡಾ। ವಿಟ್ಠಲ ಶೆಟ್ಟರು

ಕಳೆದ ಜುಲ್ಯಾಯಲ್ಲಿ ಸತ್ಯಾಗ್ರಹ ಹೂಡಿ ಕಾರಾಗೃಹವಾಸಕ್ಕೆ ಗುರಿಯಾಗಿದ್ದ ನಮ್ಮ ಜಿಲ್ಲಾ ಬೋರ್ಡ್ ಪ್ರೆಸಿಡೆಂಟರಾದ ಡಾ। ವಿಟ್ಠಲ ಶೆಟ್ಟರು ತಿರುಚಿನಾಪಳ್ಳಿ ಜೈಲಿಂದ ಬಿಡುಗಡೆಹೊಂದಿ ಕಳೆದ ತಾ. ೧೯ಕ್ಕೆ ಮಂಗಳೂರಿಗೆ ಬಂದು ಸುಸ್ವಾಗತ ಪಡೆದರು.

ಕ್ರಿಕೆಟ್ ಪಂದ್ಯಾಟಗಳು

ಕಳೆದ ವಾರ ಸ್ಥಳೀಯ ಸೈಂಟ್ ಅಲೋಶಿಯಸ್ ಕಾಲೇಜಿನವರು ಪೆಂಟ್ ಲ್ಯಾಂಡ್‌ಪೇಟೆ ಸ್ಪೋರ್ಟ್ಸ್ ಸಂಘದವರೊಡನೆಯೂ, ಮಂಗಳೂರು ಕ್ರಿಕೆಟ್ ಕ್ಲಬ್ಬಿನವರೊಡನೆಯೂ ಕ್ರಿಕೆಟ್ ಪಂದ್ಯಾಟಗಳಾಡಿದಾಗ ಎರಡರಲ್ಲಿಯೂ ಆಟ "ಡ್ರಾ" ಆಯಿತು.

ತಿರುಚಿನಾಪಳ್ಳಿಯಿಂದ ಬಂದ ಒಂದು ಕ್ರಿಕೆಟ್ ಟೀಮಿನವರು ಕಳೆದ ಶನಿವಾರ ಪೆಂಟ್‌ಲ್ಯಾಂಡ್‌ಪೇಟೆ ಸ್ಪೋರ್ಟ್ಸ್ ಸಂಘದವರೊಡನೆಯೂ, ಕಳೆದ ಆದಿತ್ಯವಾರ ಸ್ಥಳೀಯ ಗಣಪತಿ, ಕೆನರಾ, ಗವರ್ನಮೆಂಟ್ ಕಾಲೇಜ್ ಹೈಸ್ಕೂಲುಗಳ ಸಂಯುಕ್ತ ಟೀಮಿನೊಡನೆಯೂ ಪಂದ್ಯಾಟವಾಡಿ ಎರಡರಲ್ಲಿಯೂ ಗೆದ್ದರು.

ದಸರಾ ಸಾಹಿತ್ಯೋತ್ಸವ

ಸ್ಥಳೀಯ ಮಿತ್ರಮಂಡಲಿಯವರೇ ಉತ್ಸವವನ್ನು ದಸರೆಯಲ್ಲಿ ನಡೆಸಲಿರುವರು. ಇದೇ ತಾ. ೨೭ರಲ್ಲಿ ಸಂಜೆ ಮೈಸೂರಿನ ಶ್ರೀ। ಕೆ. ವೆಂಕಟರಾಮಪ್ಪ ಎಂ. ಎ. ಅವರ ಭಾಷಣವೂ, ಇದೇ ತಾ. ೨೮ರಲ್ಲಿ ಸಂಜೆ ಬೆಂಗಳೂರಿನ ಸುಪ್ರಸಿದ್ಧ ಸಾಹಿತಿ ಶ್ರೀ। ದೇವುಡು ನರಸಿಂಹ ಶಾಸ್ತ್ರಿ ಎಂ. ಎ. ಅವರ ಭಾಷಣವೂ, ಇದೇ ತಾ. ೨೯ರಲ್ಲಿ ಸಂಜೆ ಸಾಹಿತ್ಯ ಗೋಷ್ಠಿಯೂ ಜರುಗಲಿದೆ. ಆ ಮೇಲೆ ಆ ಮೂರು ದಿನಗಳಲ್ಲಿಯೂ ವಿನೋದ ಗಳಿವೆ. ಇವೆಲ್ಲ ಸ್ಥಳೀಯ ಕೆನರಾ ಹೈಸ್ಕೂಲಲ್ಲಿ ನಡೆಯುವುವು. ವಿನೋದಾವಳಿಗಳಿಗೆ ಪ್ರವೇಶ ಟಿಕೆಟುಗಳ ಮೂಲಕ.

ಶ್ರೀ। ಎ. ವಿ. ಥಕ್ಕರರ ಕಾರ್ಯಕ್ರಮ

ದ. ಕನ್ನಡ ಜಿಲ್ಲೆಯಲ್ಲಿ ಅ. ಭಾ. ಹರಿಜನ ಸೇವಕ ಸಂಘದ ಜನರಲ್ ಸೆಕ್ರೆಟರಿಯವರೂ, ಸರ್ವೆಂಟ್ಸ್ ಆಫ್ ಇಂಡಿಯಾ ಸೊಸ್ಯಾಟಿಯ ಉಪಾಧ್ಯಕ್ಷರೂ ಆದ ಶ್ರೀ। ಎ. ವಿ. ಥಕ್ಕರ್‌ರವರ ಕಾರ್ಯಕ್ರಮ: ತಾ. ೨೫ ಸಂಜೆ ೪-೧೫ ಕಾಸರಗೋಡಿಗೆ ಆಗಮನ; ಆ ಮೇಲೆ ಸಾರ್ವಜನಿಕಸಭೆ, ಕಾಸರಗೋಡು ತಾಲೂಕು ಸಂಘದ ಸಭೆ. ತಾ. ೨೬. ಬೆಳಿಗ್ಗೆ, ಸೀತಂಗೋಳಿಗೆ ಸಂದರ್ಶನ. ೨-೪೫ ಘ. ಮಂಗಳೂರಿಗೆ ಆಗಮನ. ೩-೩೦ ಘ. ಬೆಸೆಂಟ್ ರಾಷ್ಟ್ರೀಯ ಶಾಲೆಗೆ ಸಂದರ್ಶನ. ಆ ಮೇಲೆ ೪-೩೦ ಘ. ಆದೇ ಶಾಲೆಯಲ್ಲಿ ಜಿಲ್ಲಾ ಹರಿಜನ ಸೇವಕ ಸಂಘದ ಸಭೆ. ಡಿ. ಸಿ. ಯಂ. ನ ಗೀತಾ ತರಗತಿಗೆ ಸಂದರ್ಶನ. ೬ ಘ. ಮೈದಾನಿನಲ್ಲಿ ಸಾರ್ವಜನಿಕ ಸಭೆ. ಬಾಬು ಗುಡ್ಡೆ ಹರಿಜನ ವಸತಿಗೆ ಸಂದರ್ಶನ. ತಾ. ೨೭ ಪೂರ್ವಾಹ್ನ ಡಿ. ಸಿ. ಯಂ. ಶಾಲೆಗಳಿಗೆ ಭಗಿನಿ ಸಮಾಜಕ್ಕೆ ಸಂದರ್ಶನ. ೪-೩೦ ಘ. ಕೆನರಾ ಹೈಸ್ಕೂಲು ಗ್ರೌಂಡಿನಲ್ಲಿ ಪಂದ್ಯಾಟ ಮತ್ತು ತಿಂಡಿ ಹಂಚುವಿಕೆ, ಡಿ. ಸಿ. ಯಂ. ಮಹಾಸಭೆ, ೭-೩೦ ಘ. ಸೂಟರ್‌ಪೇಟೆ ವಸತಿಗೆ ಸಂದರ್ಶನ. ತಾ. ೨೮. ಕಾರ್ಕಳಕ್ಕೆ ನಿರ್ಗಮನ. ಶಬರಿ ಆಶ್ರಮಕ್ಕೆ ಸಂದರ್ಶನ, ಆ ಮೇಲೆ ಸಾರ್ವಜನಿಕ ಸಭೆ. ಉಡುಪಿಗೆ ನಿರ್ಗಮನ. ೧೨-೩೦ಕ್ಕೆ ಉಡುಪಿಯ ಹರಿಜನ ಬೋರ್ಡಿಂಗ್ ಹೌಸಿಗೆ ಸಂದರ್ಶನ, ಪುತ್ತೂರು ವಸತಿಗೆ ಸಂದರ್ಶನ. ೪-೩೦ ಘ. ಸಾರ್ವಜನಿಕ ಸಭೆ. ಮಂಗಳೂರಿಗೆ ನಿರ್ಗಮನ. ೨೯ರಂದು ಮಂಗಳೂರಿನಿಂದ ನಿರ್ಗಮನ.

ಹರಿಜನ ವಾರ (೯ ದಿವಸಗಳು) ೨೪—೯—೪೧ರಿಂದ ೨—೧೦—೪೧ರ ವರೆಗೆ

ತಾ. ೨೪: ಹರಿಜನರ ಸಾರ್ವಜನಿಕ ಸಭೆ:—ಸ್ಥಳ: ಉಳ್ಳಾಲ ರಘುನಾಥಯ್ಯ ಸ್ಮಾರಕ ಮಂದಿರ. ವಿಷಯ: ಪೂನ ಒಪ್ಪಂದದ ದಿನ. ಸಮಯ: ಸಾಯಂ ೪-೩೦. ತಾ. ೨೫. ಬಿಜೆಯಿ ಹರಿಜನ ಕೊಲನಿಗೆ ಸಂದರ್ಶನ: ತಾ. ೨೬ ಸಾರ್ವಜನಿಕ ಸಭೆ ಲೈನ್ ಮೈದಾನದಲ್ಲಿ ಸಾಯಂ. ೪ಂ. ೬ಕ್ಕೆ, ಬಾಬು ಗುಡ್ಡೆ ಹರಿಜನ ಕೊಲನಿಗೆ ಸಂದರ್ಶನ. ತಾ. ೨೭ ಅಂತರ ಶಾಲಾ ಆಟಗಳ ಸ್ಪರ್ಧೆ, ಕೆನರಾ ಹೈಸ್ಕೂಲ್ ಮೈದಾನದಲ್ಲಿ ಸಾಯಂ. ೪ಂ. ೫ರಿಂದ ೫ರ ವರೆಗೆ; ಹರಿಜನ ಮಕ್ಕಳಿಗೆ ತಿಂಡಿ ಹಂಚೋಣ ಮತ್ತು ಸೂಟರ್‌ಪೇಟೆ ಹರಿಜನ ಕೊಲನಿಗೆ ಸಂದರ್ಶನ. ೨೮, ೨೯, ೩೦, ಮತ್ತು ೧ರಲ್ಲಿ ಕ್ರಮವಾಗಿ ಉಳ್ಳಾಲ ಕಾಪಿಕಾಡು, ವೆಲ್ಸ್‌ಪೇಟೆ, ಪಾಂಡೇಶ್ವರ ಮತ್ತು ಹೊಗೆಬಜಾರ್ ಹರಿಜನ ಕೊಲನಿಗಳಿಗೆ ಸಂದರ್ಶನ, (ಸಮಯ: ಪ್ರತಿದಿನ ಸಾಯಂ. ೪ಂ. ೫ರಿಂದ ೭ರ ವರೆಗೆ) ತಾ. ೨ ಸಾರ್ವಜನಿಕ ಸಭೆ-ಗಾಂಧಿ ಜಯಂತಿ.

ದಕ್ಷಿಣ ಕನ್ನಡದಲ್ಲಿ ಪ್ಲೇಗ್

ಕಳೆದ ತಾ. ೧೮-೯-೪೧ರ ವರೆಗೆ, ಪ್ಲೇಗ್ ಸೋಂಕಿದ ಮತ್ತು ಮಡಿದವರ ಸಂಖ್ಯೆ ಈ ಪ್ರದೇಶಗಳಲ್ಲಿ ಹೀಗಿದೆ:— ಬಂಟ್ವಾಳ ಮೂಡ ಸೋಂಕಿದ್ದು ೧೪; ಮೃತ ೧೧; ತುಂಬೆ ಸೋಂಕಿದ್ದು ೪; ಮೃತ ೩; ಬಂಟ್ವಾಳ ಕಸಬಾ ಸೋಂಕಿದ್ದು ೨; ಮೃತ ೨; ಕುರ್ನಾಡ್ ಸೋಂಕಿದ್ದು ೪; ಮೃತ ೪; ಕುರಿಯಾಳ ಸೋಂಕಿದ್ದು ೧; ಎಟ್ಟ ಪಡ್ನೂರು ಸೋಂಕಿದ್ದು ೧; ಮೃತ ೧. ಪುತ್ತೂರಿನಲ್ಲಿ ಪ್ರಯಾಣಿಕರ ಬಂಗಲೆ ಬಳಿ ಬಿದ್ದ ಇಲಿಗಳೆರಡು ಪ್ಲೇಗಿನವುಗಳಲ್ಲವೆಂದು ಅಧಿಕಾರಿಯುತವಾಗಿ ತಿಳಿದುಬಂದಿದೆ.

ಗವರ್ನರರ ಎಡ್ಜೈಜರರು ಮಂಗಳೂರಿಗೆ

ನಮ್ಮ ಮಾನ್ಯ ಗವರ್ನರರ ಎಡ್ಜೈಜರರಾದ ಮಿ। ಟಿ. ಆಸ್ಟಿನ್‌ರವರು ಇದೇ ಅಕ್ಟೋಬರ ತಾ. ೫ಕ್ಕೆ ಮಂಗಳೂರಿಗೆ ಬರುವರೆಂದೂ ಆ ಸಮಯದಲ್ಲಿ ಒಂದು ಸಾರ್ವಜನಿಕ ಸಭೆ ಜರಗಲಿದೆ ಎಂದೂ ತಿಳಿದುಬರುತ್ತಿದೆ.

The Canara Industrial & Banking Syndicate, Ltd.,

(Incorporated in British India)

Head Office:-UDIPI, S. India

Authorised Capital	Rs.	50,00,000.
Subscribed Capital	,,	13,48,710.
Paid up Capital	,,	5,83,991.
Reserves	,,	2,10,000.

Laxmi Cash Certificates.

Five years' cash certificates of Rs. 8/-, Rs. 80/-, Rs. 400/- and Rs. 800/- repayable at maturity at Rs. 10/-, Rs. 100/-, Rs. 500/- and Rs. 1000/- respectively are issued.

These certificates are encashable at any time before maturity.

Ask for tables and further particulars.

PETROL RATIONING

You are not getting all the petrol you want because it is required elsewhere to help win the War. You can help still further by contributing the money You save thereby to the

Governor's War Fund.

ನೋಟೀಸು

ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಸ್ಮಾಲ ಕಾಸ ನಂಬ್ರ 344/41

ಗುರುರಾಯ ಪುತ್ರಾಯ ಪರಮೇಶ್ವರ ಪುತ್ರಾಯರ ಮಗ—ಉಡ್ಪಿ ತಾಲೂಕು ನಿಲಾವರ ಗ್ರಾಮ—**ವಾದಿ.**

ಮತ್ತು

ಶ್ರೀನಿವಾಸರಾವ್— ತಳಿಯಾರ ನಾಗಪ್ಪ ಸೆರಿಗಾರರ ಮಗ-ಪುತ್ತೂರು ತಾಲೂಕು ಬಲ್ನಾಡ ಶಾಲೆಯಲ್ಲಿ ಆಕ್ಟಿಂಗ್ ಉಪಾಧ್ಯಾಯ— **ಪ್ರತಿವಾದಿ.**

ಪ್ರತಿವಾದಿಯು ವಾದಿಗೆ ತಾ. 4-7-38ರಲ್ಲು ರೂಪ್ಯಾ 30-0-0ಕ್ಕೆ ಬರಕೊಟ್ಟ ಡಿಮಾಂಡ್ ನೋಟಿನ ಬಾಬ್ತು ವಾದಿಗೆ ಬರತಕ್ಕ ರೂಪ್ಯಾ 41-3-8ಕ್ಕೆ ವಾದಿಯು ಪ್ರತಿವಾದಿ ಮೇಲೆ ದಾಕ್ಲುಮಾಡಿದ ದಾವೆಯು ತಾ. 10-10-1941ರಲ್ಲಿ ತನಿಖೆಗೆ ಇಟ್ಟಿದೆ. ಆ ಕುರಿತು ಉದಾಹರಣೆಯಿದ್ದರೆ ಸದರಿ ತಾರೀಕಿನಲ್ಲು ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ. ದಾಕಲುಮಾಡತಕ್ಕದ್ದು. ಇದಕ್ಕೆ ತಪ್ಪಿದರೆ ಸದರಿ ಪ್ರತಿವಾದಿಯನ್ನು ಎಕ್ಸ್‌ಪಾರ್ಟಿ ಮಾಡಿ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡೀತು.

K. Ramanath Pai,
Pleader for Plaintiff.

Udipi, S. C. 19-9-41.

ಯುಗೋಸ್ಲಾವಿಯದಲ್ಲಿ ಇಸ್ಲಾಮಿಗಾಗಿ ಕದನ

ಹಿಟ್ಲರನಿಗೆ ಇನ್ನೂ ಶಾಂತಿ ಇಲ್ಲ!

ಯುಗೋಸ್ಲೇವಿಯದಲ್ಲಿ ವಾಸ ಮಾಡುತ್ತಿರುವ ಕ್ರೋಟ್, ಸ್ಲೊವೆನ್ ಮತ್ತು ಸರ್ಬ್ ಜನರಲ್ಲದೆ, ಬಂದೂವರೆ ಮಿಲಿಯಕ್ಕಿಂತ ಮಿಕ್ಕುವ ಮುಸ್ಲಿಮರೂ ಇಲ್ಲಿ ಬೊಸ್ನಿಯಾ, ಹೆರ್ಜಿಗೊವಿನಾ ಮತ್ತು ದಕ್ಷಿಣ ಸರ್ಬಿಯಾಗಳಲ್ಲಿ ವಾಸಿಸುತ್ತಿದ್ದಾರೆ.

ಇಸ್ಲಾಂ ಯೂರೋಪಿಗೆ ಹೇಗೆ ಬಂತು?

೧೩೮೯ರಲ್ಲಿ ಸರ್ಬಿಯದ ಅರಸರನ್ನು, ಟರ್ಕಿಯ ಸುಲ್ತಾನರೊಬ್ಬರು ಸೋಲಿಸಿದರು. ಅಧಿಕಾರ ತಮ್ಮ ಹಸ್ತಗತವಾದ ಬಳಿಕ, ತುರ್ಕರು ಸರ್ಬಿಯದಲ್ಲಿ ಆ ಮೊದಲೇ ವಾಸವಾಗಿದ್ದ ಅಲ್ಪ ಸಂಖ್ಯೆಯ ಮಹಮ್ಮದೀಯರಿಗೇ ರಾಜ್ಯಾಡಳಿತದ ಅಧಿಕಾರಗಳನ್ನು ಕೊಟ್ಟರು. ಇಸ್ಲಾಂ ಈ ಮೂಲಕ ಅಲ್ಲಿ ಪ್ರಬಲವಾಯಿತು.

ಬೊಸ್ನಿಯಾದ ಜನರು, ಬೊಗೊಮಿಲ್ ಎಂಬ ಒಂದು ಮತದವರಾಗಿದ್ದರು. ಇಸ್ಲಾಮಿಗೂ, ಈ ಮತಕ್ಕೂ ಹೆಚ್ಚಿನ ವ್ಯತ್ಯಾಸವೇನೂ ಇರಲಿಲ್ಲ. ಬೊಗೊಮತದ ದ್ವೇಷಿಗಳಾಗಿದ್ದ ಕ್ರಿಶ್ಚಿಯನ್ನರೊಡನೆ ಮತಯುದ್ಧವನ್ನು ಬೊಸ್ನಿಯಾದವರು ಹೂಡಬೇಕಾಗಿ ಬಂತು. ಮಹಮ್ಮದೀಯರು ಸಮರಪಟುಗಳಾಗಿದ್ದರಾಗಿ, ಬೊಸ್ನಿಯಾದ ಜನತೆ ಇಸ್ಲಾಮನ್ನು ಸ್ವೀಕರಿಸಿತು.

ಟರ್ಕರ ಆಳಿಕೆಯಲ್ಲಿ!

—ಬೊಸ್ನಿಯಾ ನಾಲ್ಕು ಶತಮಾನಗಳಲ್ಲಿತ್ತು. ತನ್ನ ಬೊಸ್ನಿಯಾ ರಾಜ್ಯದ ಕುರಿತು, ಒಟ್ಟೊಮಾನ್ ಸಾಮ್ರಾಜ್ಯ ತುಂಬಾ ಹೆಮ್ಮೆಪಟ್ಟುಕೊಳ್ಳುತ್ತಿತ್ತು.

ಬೊಸ್ನಿಯಾದ ಯೋಧರು ಅತಿ ಪರಾಕ್ರಮಿಗಳು. ಯೆನ್ನಾಕ್ಕೆ ಗಂಡಾಂತರವನ್ನು ತಂದು, ಅಖಿಲ ಯೂರೋಪನ್ನೇ ನಡುಗಿಸಿದ ಯೋಧರು ಅವರು.

ಈಗಲಾದರೂ ಈ ಜನತೆ, ತಮ್ಮ ಕಾದಾಡುವ ಸೈವುಣ್ಯವನ್ನು ಹಿಟ್ಲರನ ಸೇನೆಗಳೊಡನೆ ಪ್ರದರ್ಶಿಸುತ್ತಲಿದ್ದಾರೆ.

ಜನಜೀವನ

ಇತಿಹಾಸಪ್ರಸಿದ್ಧವಾದ ಸಿರಾಜೆವೋ, ಅತಿ ಸುಂದರವಾದ ಪಟ್ಟಣ. ಇದು ಸರ್ಬಿಯದ ರಾಜಧಾನಿ.

ಮುಂದುವರಿದ ನಾಡಾಗಿದ್ದರೂ, ಬೊಸ್ನಿಯಾದಲ್ಲಿ, ಇನ್ನೂ ಪರ್ದಾ ಕ್ರಮವನ್ನು, ಕೆಲ ಹೆಂಗಸರು ಅನುಸರಿಸುತ್ತಾರೆ. ಗಂಡಸರು, ಸರ್ವಸಾಮಾನ್ಯ ತಮ್ಮ ಉದ್ದಗಿನ ಟೊಪ್ಪಿಗಳನ್ನಾಗಲೀ, ಕೆಂಪನೆಯ ರುಮಾಲುಗಳನ್ನಾಗಲೀ ತೊಟ್ಟುಕೊಳ್ಳುತ್ತಾರೆ. ಚಿಕ್ಕ ಹುಡುಗಿಯರು ಜಲ್ಲಣಗಳನ್ನು ತೊಟ್ಟುಕೊಳ್ಳುತ್ತಾರೆ.

ಇವರ ವಸತಿಗಳೆಲ್ಲ, ಫಿರೆಮಿಡ್ಡುಗಳ ಆಕೃತಿಯವು. ಕಿಟಿಕಿಯಿಂದ ಪರರು ಇಣಿಕಿ ನೋಡಬಾರದೆಂದು ಮರದ ಹಲಿಗೆಗಳಿಂದ ಮರೆಮಾಡಿಬಿಡುವರು.

ಕೊಳೆಯಲ್ಲಿ ಯಾವಾಗಲೂ ಅಪಾಯವಿದೆ. ಕ್ರಿಮಿನಾಶಕ ಲೈಫ್‌ಬಾಯ್ ಕುಟುಂಬವನ್ನು ಸಂರಕ್ಷಿಸುತ್ತದೆ.

ಕೆಲಸಮಾಡುವ ತಂದೆಯರು—ಆಡುವ ಮಕ್ಕಳು—ಅಡಿಗೆ ಕೋಣೆಯಲ್ಲಿ ತಾಯಂದಿರು—ಎಲ್ಲರೂ ಕೊಳೆಯ ಅಪಾಯಕ್ಕೆ ಗುರಿಯಾಗಿರುವರು. ಎಲ್ಲ ಕೊಳೆಯಲ್ಲಿಯೂ ಕ್ರಿಮಿಗಳು ತುಂಬಿಕೊಂಡಿವೆ—ಕ್ರಿಮಿಗಳು ಕಡಿತಗಳನ್ನು ಕೊಳೆಯುವಂತೆಯೂ ಗಾಯಗಳನ್ನು ಅಪಾಯಕರವಾಗುವಂತೆಯೂ ಮಾಡುವಂಥವುಗಳು. ಕ್ರಿಮಿಗಳ ಈ ಅಪಾಯದಿಂದ ಲೈಫ್‌ಬಾಯ್ ಸೋಪು ನಿಮ್ಮ ಕುಟುಂಬವನ್ನು ರಕ್ಷಿಸಲಿ. ಲೈಫ್‌ಬಾಯ್ ಕ್ರಿಮಿನಾಶಕವಾದ ಸೋಪು—ಅದರ ವಿಪುಲವಾದ ನೊರೆಯು ವಿಶೇಷ ಆರೋಗ್ಯಗುಣವುಳ್ಳದ್ದಾಗಿ ಅಂಟುರೋಗದಿಂದ ಕಾಪಾಡುತ್ತದೆ.

ಲೈಫ್‌ಬಾಯ್ ಸೋಪಿನಲ್ಲಿ ಸಮೃದ್ಧವಾದ ಕೋಮಲ ನೊರೆಯಿದ್ದು ನವಚೈತನ್ಯವನ್ನುಂಟುಮಾಡುತ್ತದೆ—ಮತ್ತು ಅದಕ್ಕೆ ಚರ್ಮವನ್ನು ಕಜ್ಜಿ ಮತ್ತು ಬೊಕ್ಕೆಗಳಿಂದ ರಕ್ಷಿಸುವ ಶಕ್ತಿಯಿದೆ. ಆದನ್ನು ಕುಟುಂಬದ ಆರೋಗ್ಯದ ಸೋಪನ್ನಾಗಿ ಮಾಡಿರಿ—ಮತ್ತು ಅವರೆಲ್ಲರಿಗೂ ಅದನ್ನು ನಿತ್ಯವೂ ಉಪಯೋಗಿಸುವಂತೆ ಹೇಳಿರಿ!

ಲೈಫ್‌ಬಾಯ್ "ಒಳ್ಳೆಯ ಆರೋಗ್ಯದ" ಸೋಪು



LEVER BROTHERS (INDIA) LIMITED L 23—86 KN

ಜನರಲ್ಲಿ ವಿವಿಧ ಉದ್ಯೋಗಗಳವರಿದ್ದಾರೆ. ಹೆಂಗಸರೂ ಕೂಡಾ, ಬುರುಕೆ ಹಾಕಿಕೊಂಡೇ ಅಂಗಡಿಗಳಲ್ಲಿ ವ್ಯಾಪಾರ ಮಾಡುತ್ತ ಕುಳಿತುಬಿಡುವುದಿದೆ.

ಬೊಸ್ನಿಯದ ಗತಿಸಿದ ವೀರರ ಶೌರ್ಯಪ್ರದರ್ಶನಗಳನ್ನೆಲ್ಲ, ಹಾಡುಗಾರರು ದಿನಂಪ್ರತಿ ಹಾಡಿ ಜನರಿಗೆ ನೆನಪು ಮಾಡಿಕೊಡುವರು. ಇಂತಹ ಹಾಡುಗಾರರು, ಪ್ರತಿ ಹೊಟೆಲುಗಳ ಮುಂದು ಗಡೆಯೂ ಇರುತ್ತಾರೆ. ಇಂತಹ ಖಾನಾವಳಿಗಳು ಧನಿಕ ಮತ್ತು ಬಡವರಿಬ್ಬರು ಸದಾ ಭೇಟಿಯಾಗುವ ಸ್ಥಳ.

ಇಲ್ಲಿ ಮುಸ್ಲಿಮರಲ್ಲದೆ ಇತರ ಪಂಗಡಗಳವರೂ ಇರುವರಾದರೂ, ಈ ಎಲ್ಲ ಪಂಗಡಗಳೊಳಗೆ ಪರಸ್ಪರ ಸೌಹಾರ್ದ ನೆಲೆಸಿದೆ.

"ಗಾಜ್ರೆಟ್" ಸಂಘ

ಜನತೆಯಲ್ಲಿ ವಿದ್ಯಾಭ್ಯಾಸ ಪ್ರಸಾರವು ಚೆನ್ನಾಗಿ ಆಗಿದ್ದು, ಸರ್ಬಿಯಾ ಅದೆಷ್ಟೋ ಸಾಹಿತಿಗಳಿಗೂ ವಿಜ್ಞಾನಿಗಳಿಗೂ ಜನ್ಮವಿತ್ತಿದೆ.

"ಗಾಜ್ರೆಟ್" ಸಂಘ ಸರ್ಬಿಯದ ಜನತೆಯಲ್ಲಿ ವಿಚಾರಕ್ರಾಂತಿಯನ್ನು ಮಾಡಿದೆ. ಈ ಸಂಸ್ಥೆಯಲ್ಲಿ, ೩೬,೦೦೦ ಸದಸ್ಯರ ಹೆಸರುಗಳು ರೆಜಿಸ್ಟರ್ಡ್ ಆಗಿವೆ. ೧೯೦೩ರಲ್ಲಿ, ಇದನ್ನು ಕೆಲವರು ಸಂಸ್ಥಾಪಿಸಿದಾಗ, ಇದಿಷ್ಟು ಪ್ರಸಿದ್ಧಿಗೆ ಬಂದೀತೆಂದು ಯಾರೂ ಭಾವಿಸಿರಲಿಲ್ಲ!

ಹಿಟ್ಲರನಿಗೆ ಎದುರಾದ ಯುದ್ಧ!

—ಅಧಿಕಾರಿವೃತ್ತದ ಪ್ರಕಾರ ಎಂದೋ, ಕೊನೆಗೊಂಡಿದೆಯಾದರೂ, ಸರ್ಬಿಯದ ಮುಸ್ಲಿಮರು, ಜರ್ಮನರೊಡನೆ ಸಹಕರಿಸದೆ, ಇನ್ನೂ ಅಲ್ಲಲ್ಲಿ, ಗೊರಿಲ್ಲಾ ಯುದ್ಧಗಳನ್ನೆಸಗಿ ಕಾದಾಡುತ್ತಲೇ ಇರುವರು.

ಯುದ್ಧವು, ಸಮಾಪ್ತವಾಗಿ, ಶಾಂತಿ ನೆಲೆಸಿದಾಗ, ಈ ಮುಸ್ಲಿಂ ಬಂಧುಗಳು ಹಾಡುವರು; ಪುನಃ ಕುಣಿದಾಡುವರು. ಯುಗೋಸ್ಲೇವಿಯದ ಸ್ವಾತಂತ್ರ್ಯಕ್ಕಾಗಿ ಕಾದಿ ಮಡಿದ ವೀರರಿಗಾಗಿ, ಹಾಡುವರು; ತಮಗೆ ದೊರೆತ ವಿಜಯಕ್ಕಾಗಿ ಕುಣಿಯುವರು.

ಕೈಗಾರಿಕೆಯ ವಿಚಕ್ಷಣರಾದ
ಸರ್ ವಿಶ್ವೇಶ್ವರಯ್ಯನವರು

ನಾಡಿನ ಹೆಮ್ಮೆಯಾದ ಶ್ರೀ। ವಿಶ್ವೇಶ್ವರಯ್ಯನವರ ಎಂಭತ್ತೊಂದನೆಯ ಜನ್ಮದಿನೋತ್ಸವವು ಮೊನ್ನೆ ಮೊನ್ನೆ ಜರಗಿತು. ತನ್ನ ಇಳಿ ವಯಸ್ಸಿನಲ್ಲಿಯೂ ನವಯುವಕನ ಚೈತನ್ಯದಿಂದ ವಿಶ್ವೇಶ್ವರಯ್ಯನವರು, "ಭಾರತವನ್ನು ಯಾಂತ್ರಿಕ ರಾಷ್ಟ್ರವಾಗಿ ಮಾಡಿರಿ; ಇಲ್ಲವೆ ವಿನಾಶದ ಬಳಿ ಸಾರುವಿರಿ," ಎಂದು ಹೇಳುತ್ತಿರುವರು.

ತಮ್ಮ ಜೀವನದಲ್ಲಿ, ಸಂಕಷ್ಟಗಳನ್ನು ವಿಶ್ವೇಶ್ವರಯ್ಯನವರು ಚೆನ್ನಾಗಿ ಅನುಭವಿಸಿದ್ದಾರೆ. ಹಲವೊಮ್ಮೆ, ಅವರ ಆಶಯಗಳು ಅಪೂರ್ಣವಾಗಿ, ನಿರಾಶೆ ಅವರ ಸುತ್ತು ಕವಿದಿದೆ.

ಮಮತೆಯ ಮಾತೆ

ಧಲಘಿರಲ್ಲಿ, ಶ್ರೀ। ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಬಡ ಕುಟುಂಬದಲ್ಲಿ ಜನ್ಮವೆತ್ತಿದರು. ಅವರ ತಾಯಿಗೆ ಮಗನ ಮೇಲೆ ಅಪ್ರತಿಮ ವಾತ್ಸಲ್ಯವಿತ್ತು. ಮಗನು ಸಂಪ್ರದಾಯವಾದಿಯಾಗಿ, ದೈವಿಕ ಭಾವನೆಯಿಂದ ಪೂರಿತನಾಗಿ, ಬರಿಯ ಧರ್ಮಗ್ರಂಥಗಳ ಅಧ್ಯಯನ ಮಾಡುತ್ತ ಇರಬೇಕೆಂದು ಅವರು ಆಶಿಸಿದ್ದರು.

ಮಾತೆಯ ಈ ಹಂಬಲು ಪರಿಪೂರ್ಣವಾಗಲಿಲ್ಲ. ತಮ್ಮ ಜೀವನದಲ್ಲಿ ಕೆಲವು ನಿರ್ದಿಷ್ಟ ಗುರಿಗಳನ್ನು ಸಾಧಿಸಲಿಕ್ಕಿದೆ ಎಂದು ಎಂ. ವಿ.ಯವರು ಚೆನ್ನಾಗಿ ಅರಿತಿದ್ದರು.

ಏಕಾಂತ ಪ್ರಿಯ

ವಿಶ್ವೇಶ್ವರಯ್ಯ, ತಮ್ಮ ತಾಯ್ತಂದೆಗಳು ದಾರಿದ್ರ್ಯದೇವಿಯೊಡನೆ ಸೆಣಸಾಡುತ್ತಿದ್ದರೆಂಬುದನ್ನು ಚೆನ್ನಾಗಿ ಅರಿತಿದ್ದರು. ಆದರೆ ಶಾಲೆಗೆ ಹೋಗದಿರಲಿಲ್ಲ. ಕೋಲಾರದಲ್ಲಿ ಅವರಿಗೆ ವಿದ್ಯಾಭ್ಯಾಸವಾಯಿತು.

ಅವರು ಯಾರೊಡನೆಯೂ ಬೆರೆಯುವವರೇ ಅಲ್ಲ. ಸದಾ ಏಕಾಂತ ವಾಸವನ್ನಿಚ್ಛಿಸುತ್ತಿದ್ದರು. ಜನತೆಯ ದಾರಿದ್ರ್ಯ ಅವರ ಮನಃಪಟಲದಿಂದ ಎಂದೆಂದಿಗೂ ಅಳಿಸಿಹೋಗಲಿಲ್ಲ.

ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ೨೦ ವರ್ಷವಾಗುತ್ತಿದ್ದಾಗಲೇ, ಬಿ. ಏ. ಪ್ಯಾಸುಮಾಡಿಕೊಂಡರು. ಆಗಿನ ದಿವಾನರಾದ ಶ್ರೀ। ರಂಗಾಚಾರ್ಲುರವರು, ಅವರಿಗೆ ಹಲ ಬಗೆಯಿಂದ ಸಹಾಯಮಾಡಿದ್ದಾರೆ. ಸರಕಾರದ ವಿದ್ಯಾರ್ಥಿವೇತನವನ್ನು ಪಡೆದು ಕೊಂಡು, ಅವರು ಪುಣೆಯ ಇಂಜಿನಿಯರಿಂಗ್ ಕಾಲೇಜಿಗೆ ಹೋದರು.

ಇಂಜಿನಿಯರಿಂಗ್ ಕಲಿಯುವುದೇ ಉದ್ಯೋಗ ದೊರಕಿಸಿಕೊಳ್ಳುವುದಕ್ಕೆಂದು ಎಷ್ಟೋ ಮಂದಿ ವಿದ್ಯಾರ್ಥಿಗಳ ಅಭಿಪ್ರಾಯ. ವಿಶ್ವೇಶ್ವರಯ್ಯನವರು ಮಾತ್ರ ಹಾಗೆ ಎಂದಿಗೂ ಭಾವಿಸಲಿಲ್ಲ. "ಬೇಕಾಗಿದ್ದಾರೆ" ಕಾಲಮುಗಳನ್ನು ನೋಡುವ ಗೋಜಿಗೇ ಹೋಗಲಿಲ್ಲ. ತಮ್ಮ ಅಧ್ಯಯನದಲ್ಲೇ ತುಂಬಾ ಆಸಕ್ತಿಯನ್ನು ವಹಿಸಿ ಅಭ್ಯಸಿಸುತ್ತಾ ಹೋದರು.

ಸಹಾಯಕ ಇಂಜಿನಿಯರ್

ಮುಂಬಯಿ ಸರಕಾರದ ಕೈಕೆಳಗೆ ವಿಶ್ವೇಶ್ವರಯ್ಯನವರು ಪ್ರಥಮವಾಗಿ ಸಹಾಯಕ ಇಂಜಿನಿಯರರಾಗಿ ಉದ್ಯೋಗವನ್ನು ಅವಲಂಬಿಸಿದರು. ಆಗ ಅವರಿಗೆ ನೀರಾವರಿಯ ಕಾರ್ಯರಂಗದಲ್ಲಿ ಕೆಲಸವಿತ್ತು.

ಕೂಡಲೇ ಎಕ್ಸಿಕ್ಯೂಟಿವ್ ಇಂಜಿನಿಯರರಾಗಿ ನಿರಿಸಲ್ಪಟ್ಟ ಅವರು, ೧೯೦೪ರ ತನಕ ಅದೇ ಸ್ಥಾನದಲ್ಲಿದ್ದರು. ಏಡನ್ ನಗರಕ್ಕೆ ನೀರಿನ ಸರಬರಾಯಿಯ ಮತ್ತು ಕೊಳೆ ನೀರನ್ನು ಹೊರಗೊಯ್ಯುವ ಯೋಜನೆಯನ್ನು ಅವರು ತಯಾರಿಸಿ ಕೊಟ್ಟುದು ೧೯೦೬ರಲ್ಲಿ.

"ಆರೋಗ್ಯ" ಇಂಜಿನಿಯರರಾಗಿ, ವಿಶ್ವೇಶ್ವರಯ್ಯನವರು ನಿವೃತ್ತರಾದಾಗ ಭಾರತದಲ್ಲಷ್ಟೇ ಅಲ್ಲ; ಈ ನಾಡಿನ ಹೊರಗೂ ಅವರ ಕೀರ್ತಿ ಹಬ್ಬತೊಡಗಿತ್ತು. ಅವರ ಕಾರ್ಯದಕ್ಷತೆ ವಿಚಕ್ಷಣತೆಗಳನ್ನು, ಪ್ರತಿಷ್ಠೆಯನ್ನು ಎಲ್ಲರೂ ಕಂಡುಕೊಳ್ಳುವುದಕ್ಕೆ ತೊಡಗಿದರು.

ಅವರ ಸೇವೆಯಿಂದ ಉಪಯೋಗ ಹೊಂದಿದ ದೇಶೀಯ ರಾಜ್ಯಗಳ ಮತ್ತು ನಗರಗಳ ಸಂಖ್ಯೆಗೆ ಕಡಿಮೆ ಇಲ್ಲ.

ಲೋಕ ಸಂಚಾರ

ಜಗತ್ತಿನ ಎಲ್ಲಾ ಭಾಗಗಳನ್ನೂ ಒಮ್ಮೆ ಸುತ್ತಾಡಿ ಬರಬೇಕೆಂದು, ಅವರು ಹೊರಟುದು ಆಗಲೇ. ಇದು ಅವರ ಕೀರ್ತಿಯ ಕಳಸಕ್ಕೆ ಮಿರುಗುಕೊಟ್ಟಿತು.

ಪ್ರವಾಸವು ವಿಹಾರಾರ್ಥವಾಗಿದ್ದರೂ, ಲೋಕದ ಪ್ರಮುಖ ನಗರಗಳಲ್ಲಿ ತಮ್ಮ ಜ್ಞಾನವರ್ಧನೆಗೆ ಬೇಕಾದ ಹಲವು ವಿಷಯಗಳನ್ನು ಅವರು ಕಂಡುಕೊಂಡರು.

ಇಂದಿಗೆ ಅವರು ಅಮೇರಿಕದ ಯಾಂತ್ರಿಕ ಪ್ರಗತಿಯನ್ನು ಕಂಡೇ, ಭಾರತದಲ್ಲೂ ಯಂತ್ರ ಕೈಗಾರಿಕೆಯಲ್ಲಿ ಕ್ರಾಂತಿಯನ್ನುಂಟು ಮಾಡಬೇಕೆಂದು ಹೇಳುತ್ತಿರುವುದು.

ಮೈಸೂರ ದಿವಾನರು

ಪ್ರವಾಸದಿಂದ ಮರಳಿದ ಬಳಿಕ, ಮೂರು ವರ್ಷಗಳ ತನಕ ವಿಶ್ವೇಶ್ವರಯ್ಯನವರು, ಮೈಸೂರು ಸರಕಾರದ ಕೈಕೆಳಗೆ ಮುಖ್ಯ ಇಂಜಿನಿಯರಾಗಿ ನಿಯಮಿತರಾದರು. ಮೈಸೂರು ಪ್ರಾಂತಕ್ಕೆ ಅವಶ್ಯವಿರುವ ಹಲವು ಯೋಜನೆಗಳನ್ನು ಅವರು ಆ ಮೂರು ವರ್ಷಗಳಲ್ಲಿ ತಯಾರಿಸಿದರು.

ನಾಲ್ಕನೆಯ ವರ್ಷ ಅವರು ದಿವಾನರಾದರು. ಈ ಇಂಜಿನಿಯರ್-ದಿವಾನರು ತಮ್ಮ ಹೊಸ ಕಾರ್ಯರಂಗದಲ್ಲಿ ಆರುವರೆ ವರ್ಷಗಳ ತನಕವಿದ್ದು, ಅಸಮಾನ ಖ್ಯಾತಿಯನ್ನು ಗಳಿಸಿದರು.

ಮೈಸೂರಲ್ಲಿ ಯಂತ್ರಯುಗದ ಆರಂಭವಾಯಿತು. ಹಳ್ಳಿಪಟ್ಟಣಗಳೆರಡರಲ್ಲೂ ಅಸಾಧ್ಯ ಸುಧಾರಣೆಗಳಾದುವು. ಬರಿಯ ಮೈಸೂರು "ಮಾದರಿ"ಯ ಮೈಸೂರಾಯಿತು. ಮೈಸೂರಿನ ವೃಂದಾವನ, ಭದ್ರಾವತಿ, ಭದ್ರಾವತಿಯ ಕಬ್ಬಿಣದ ಕಾರ್ಖಾನೆ, ಸರ್ ಕೃಷ್ಣರಾಜೇಂದ್ರ ಸಾಗರ ಅಣೆಕಟ್ಟು ಮೊದಲಾದುವುಗಳನ್ನು ಕಾಣುವಾಗ ವಿಶ್ವೇಶ್ವರಯ್ಯನವರ ನೆನಪಾಗುತ್ತದೆ.

ಪರಾಧೀನತೆಯ ಬಲೆಯಲ್ಲಿ!

ನಾವು ಎಂತಹ ಸಂಕಷ್ಟಗಳನ್ನು ಸಹಿಸಬೇಕಾಗಿದೆಯೆಂಬುದನ್ನು, ಸರ್ ಎಂ. ವಿಶ್ವೇಶ್ವರಯ್ಯನವರು ಚೆನ್ನಾಗಿ ಅರಿತಿರುವರು. ನಮ್ಮದೇ ಆದ ಆಶಯಗಳು ಈಡೇರುವುದನ್ನು ಕಾಣುವ ಸಹನೆ ಪರರಾಷ್ಟ್ರಗಳಿಲ್ಲ.

ಆ ಹೊರಗಣ ಅಧಿಕಾರದ ದೆಸೆಯಿಂದಾಗಿಯೇ ಏನೋ, ಫಲಪ್ರದವಾಗುವುದೆಂದು ಜನರೆಲ್ಲ ಎಣಿಸಿದ, ಕಾರು-ಮೋಟಾರುಗಳ ಯಂತ್ರ ತಯಾರಿಯ ಅವರ ಯೋಜನೆಯನ್ನು, ಮೈಸೂರು ಸರಕಾರವು ಬದಿಗೊತ್ತಬೇಕಾಯಿತು ಎಂಬ ಭಾವನೆ ಜನರಲ್ಲಿ ಉಂಟಾಗಿದೆ.

ಹಲವು ಹನಿನೆಂಟು ಸಲ ನಿರಾಶೆ ಮುಸುಕಿದಂತೆ ಕಂಡರೂ, ಕತ್ತಲು ಕವಿಯದಂತೆ, ವಿಶ್ವೇಶ್ವರಯ್ಯನವರು ನೋಡಿಕೊಳ್ಳುತ್ತಿದ್ದಾರೆ. ತಮ್ಮ ಯೋಜನೆಗಳು ಇಂದಲ್ಲ, ನಾಳೆ ಕಾರ್ಯರೂಪಕ್ಕೆ ಬಂದೇ ತೀರುವುವೆಂಬ ದೃಢ ಭರವಸೆಯನ್ನು ಅವರು ಇಟ್ಟುಕೊಳ್ಳುತ್ತಿದ್ದಾರೆ.

ಲಗರ ವೃದ್ಧನ ಭರವಸೆ ಸುಳ್ಳಾಗುವುದೆಂದು ಹೇಳಲು ಧೈರ್ಯಬರುವುದಿಲ್ಲ. ಅವರಿಗೆ ನೂರು ವರ್ಷಗಳ ಸಂಪೂರ್ಣ ಆಯುಸ್ಸನ್ನೂ ದೇವರು ದಯೆಪಾಲಿಸಲಿ!

ರಷ್ಯಕ್ಕೆ ಅಮೆರಿಕದವರ ಸಾಲ

ಅಮೆರಿಕದಲ್ಲಿ ಯುದ್ಧಸಾಮಗ್ರಿಗಳನ್ನು ಕೊಳ್ಳಲಿಕ್ಕಾಗಿ ರಷ್ಯದವರಿಗೆ ಅಮೆರಿಕವು ೧೦೦ ಮಿಲ್ಯ ಡಾಲರುಗಳ ಸಾಲದ ಸೌಕರ್ಯವನ್ನೊದಗಿಸಿದೆ.

ರಷ್ಯದಲ್ಲಿ ಮಿಲಿಟರಿ ಶಿಕ್ಷಣ

ರಷ್ಯದಲ್ಲಿ ೧೬ರಿಂದ ೫೦ ವರ್ಷಗಳ ವರೆಗಿನವರೆಲ್ಲ ಮಿಲಿಟರಿ ತರಬೇತಿ ಪಡೆಯುವಂತೆ ಅಲ್ಲಿನ ಸರಕಾರದಲ್ಲಿ ಆಜ್ಞೆಯಾಗಿದೆ.

ರಿಜಿಸ್ಟರ್ಡ್ ನಂ. 18024



ರಕ್ತವೃದ್ಧಿಗೆ— ವೀರ್ಯಪುಷ್ಟಿಗೆ

ವೀರ ರತ್ನ ನಂ. 1:

ವೀರ್ಯ (ಧಾತು) ನಷ್ಟದಿಂದುಂಟಾದ ಸಮಸ್ತ ವ್ಯಾಧಿಗಳಿಗೆಲ್ಲಾ ಅಮೃತಪ್ರಾಯವಾದದ್ದು

ಇಂದ್ರಿಯವು ನಿರಾಗಿ ಸೋರುವಿಕೆ, ಮುಷ್ಟಿ ಮೈಥುನ, ಸ್ವಪ್ನಾವಸ್ಥೆ, ವೃದ್ಧಾಪ್ಯ, ಅಜೀರ್ಣ, ಮಲಬದ್ಧತೆ, ನರಗಳ ನಿಶ್ಶಕ್ತಿ, ನಪುಂಸಕತ್ವವೇ ಮುಂತಾದ ಭಯಂಕರ ವ್ಯಾಧಿಗಳನ್ನು ಬಹು ಶೀಘ್ರದಲ್ಲೇ ಗುಣಪಡಿಸಿ ನವಯೌವನವನ್ನುಂಟುಮಾಡಿ ದೀರ್ಘಕಾಲ ರತಿಸುಖವನ್ನನುಭವಿಸುವಂತೆಮಾಡುವುದು. ಪಥ್ಯವೇನು ಇಲ್ಲ. ಅನುಪಾನ ಪತ್ರಿಕೆ ಔಷಧಿಯ ಜೊತೆಯಲ್ಲುಂಟು. ಬೆಲೆ: ½ ಪೌಂ. ರೂ. 1-8-0. ¼ ಪೌಂ. ಆಣೆ 0-14-0

ವೀರ ರತ್ನ (ನಂ. 2) ತೈಲ

ಇದನ್ನು ಜನನೇಂದ್ರಿಯದ ಮೇಲೆ ಹಚ್ಚುವುದರಿಂದ ಬಾಲ್ಯದ ಅನೇಕ ದುರಭ್ಯಾಸಗಳಿಂದಲೂ, ಅತಿಭೋಗದಿಂದಲೂ, ಮುಷ್ಟಿ ಮೈಥುನಗಳಿಂದಲೂ, ಜನನೇಂದ್ರಿಯವು ಬಿಗಿತಪ್ಪಿ ಡೊಂಕಾಗಿರುವಿಕೆ. ಅದರಿಂದುಂಟಾದ ನರಗಳ ದೌರ್ಬಲ್ಯ, ನಪುಂಸಕತ್ವವೇ ಮುಂತಾದುವನ್ನು ಶೀಘ್ರದಲ್ಲಿಯೇ ಗುಣಪಡಿಸಿ ನರಗಳಲಿ ಬಲವನ್ನುಂಟುಮಾಡಿ ಸಂಭೋಗಕ್ಕೆ ಉತ್ಸಾಹವನ್ನು ಕೊಡುವುದು. ನೂರಾರು ಮಾತುಗಳಿಂದೇನು? ಉಪಯೋಗವೇ ನಿಜವಾದ ಉದಾಹರಣೆ ಇದರಿಂದ ಗಾಯ ಗುಳ್ಳೆಗೆಳಾಗುವುದಿಲ್ಲ. ಬೆಲೆ: ಅರ್ಧ ತೊಲೆ ಸೀಸೆ 1ಕ್ಕೆ ರೂ. 1—4—0.

ಪತ್ರವ್ಯವಹಾರಗಳು ಗುಟ್ಟಾಗಿಡಲ್ಪಡುವುದು. ಅಂಚೆವೆಚ್ಚ ಬೇರೆ.

ವೀರ ರತ್ನ ಫಾರ್ಮಸಿ, 20 ಗ್ರೈನ್ ಬಜಾರ್ ನ್ಯೂ ಮಾರ್ಕೆಟ್, ಬೆಂಗಳೂರು, ಸಿಟಿ (K.)

THE BANK OF MANGALORE LTD., MANGALORE

Balance Sheet as at 30th June 1941

CAPITAL & LIABILITIES

Paid-up Capital	—	—	—	20,865	0 0
General & Contingent Reserves	—	—	—	5,900	0 0
Income-tax Reserve	—	—	—	1,350	1 0
Due to Bankers				nil	
Deposits	—	—	—	1,32,152	8 3
Bills for Collections	—	—	—	21,574	1 2
Sundries including Profits			—	3,232	1 11
				1,85,073	12 4

PROPERTY & ASSETS

Furniture & Safes	—	—	—	1,400	0 0
Authorised Investments			—	1,16,164	6 10
Investment on Govt. Securities			—	7,854	0 0
Fixed Deposit with a Scheduled Bank			—	10,000	0 0
Bills per Contra	—	—	—	21,574	1 2
Sundries	—	—	—	3,585	3 0
Cash-in-hand & with Bankers at Call			—	24,496	1 4
				1,85,073	12 4

ಕಾರ್ಕಳ

ಜೂನಿಯರ ರೆಡ್‌ಕ್ರಾಸ ಸಭೆ

ಶ್ರೀ ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆಯ ಜೂನಿಯರ ರೆಡ್‌ಕ್ರಾಸ ಸಭೆಯ ಈ ವರ್ಷದ ಸದಸ್ಯರಿಗೆ ಅವರ ಬೇಜುಗಳನ್ನು ಕೊಡುವ ಸಮಾರಂಭವು ತಾ. ೧೪ರ ದಿನ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ। ಡಿ. ನರಸಿಂಹ ಶಾಸ್ತ್ರಿ, ಯಂ. ಎ., ಯಲ್. ಟಿ.,ಯವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು. ಶಾಲೆಯ ಮೆನೇಜರ ಶ್ರೀ। ಕೆ. ಕೃಷ್ಣ ಪೈಗಳವರು ಸಭಿಕರಿಗೆ ಅಧ್ಯಕ್ಷರ ಪರಿಚಯ ಮಾಡಿಕೊಟ್ಟ ಬಳಿಕ, ಗ್ರೂಪಿನ ಕೌನ್ಸೆಲರ ಶ್ರೀ। ಕಟಪಾಡಿ ಶ್ರೀನಿವಾಸ ಶೆಣೈಯವರು ವರದಿಯನ್ನು ಓದಿ, ಹಿಂದಿನ ವರ್ಷದಲ್ಲಿ ಅನೇಕ ವಿಧಗಳಿಂದ ಗ್ರೂಪನ್ನು ಪ್ರೋತ್ಸಾಹಿಸಿದ ಶ್ರೀ।ಗಳಾದ ಯು. ಕಣ್ಣಪ್ಪ ಬಿ. ಎ., ಯಲ್. ಟಿ., ನೊದಲಾದವರಿಗೆ ಧನ್ಯವಾದಗಳನ್ನು ಕೊಟ್ಟರು. ರೆಡ್‌ಕ್ರಾಸ ತತ್ವಗಳ ಮಹತ್ವ ಮತ್ತು ಈ ಅಂದೋಲನಕ್ಕೆ ಮಹಾಜನರು ಕೊಡಬೇಕಾದ ಪ್ರೋತ್ಸಾಹಗಳ ಕುರಿತು ಮಾತನಾಡುತ್ತ ಅಧ್ಯಕ್ಷರು ಗ್ರೂಪಿನ ಚಟುವಟಿಕೆಗಳನ್ನು ಪ್ರಶಂಸಿಸಿ ಭಾಷಣ ಮಾಡಿದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ। ಯಂ. ಸುವರ್ಣೋತ್ತಮ ಕಾಮತ ಬಿ. ಎ., ಯಲ್. ಟಿ., ಯವರು ಧನ್ಯವಾದ ಸಮರ್ಪಣೆ ಮಾಡಿದ ಬಳಿಕ, ಶಾಲೆಯ ಶಿವಾಜಿ ಕಬ್ ಪೇಕ್ ಮತ್ತು ವೆಂಕಟ್ರಮಣ ಸ್ಕೌಟ್ ಟ್ರೂಪುಗಳ ವಿವಿಧ ವಿನೋದಗಳ ಪ್ರದರ್ಶನವಾಗಿ ಸಭೆ ಮುಗಿಯಿತು.

"ಯುದ್ಧ ಪ್ರಯತ್ನಗಳೊಡನೆ ಸಹಕರಿಸಿರಿ"

ತಾ. ೧೪—೯—೧೯೪೧ ರ ದಿನ ಕೂಡಿದ ಕಾರ್ಕಳ ಮತ್ತು ನಿಟ್ಟೆ ಕೇಂದ್ರ ದಳ ಉಪಾಧ್ಯಾಯರ ಸಭೆಯಲ್ಲಿ ಅಧ್ಯಕ್ಷರಾಗಿ, ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ। ಡಿ. ನರಸಿಂಹ ಶಾಸ್ತ್ರಿ, ಯಂ. ಎ., ಯಲ್. ಟಿ.,ಯವರು ಹಿಟ್ಲರಿಜಮ್ಮಿನ ನಾಶಕ್ಕಾಗಿ ಲೋಕ ಯುದ್ಧದಲ್ಲಿ ಹೋರಾಡುವ ಬ್ರಿಟಿಷರ ಯುದ್ಧ ಪ್ರಯತ್ನಗಳೊಡನೆ ಉಪಾಧ್ಯಾಯರು ಅತ್ಯವಶ್ಯ ಸಹಕರಿಸಬೇಕೆಂದು ಭಾಷಣ ಕೊಟ್ಟು, ಸಹಕರಿಸುವ ನಾನಾ ಉಪಾಯಗಳನ್ನು ಸೂಚಿಸಿದರು. ಇದೇ ರೀತಿ ಅವರು ಶ್ರೀ ವೆ. ಹಾ. ಎಲಿಮೆಂಟರಿ ಶಾಲೆಯ ಜೂನಿಯರ ರೆಡ್‌ಕ್ರಾಸ ಸಭೆಯಲ್ಲಿಯೂ ಮಹಾಜನರನ್ನು ಪ್ರಾರ್ಥಿಸಿದ್ದಾರೆ ಕಾರ್ಕಳ ತಾಲೂಕು ಯುದ್ಧ ಸಹಾಯ ಸಮಿತಿಯ ಆಶ್ರಯದಲ್ಲಿ, ಇದೇ ತಾ. ೫೫, ೨೬, ೨೭, ಮೂರು ದಿನ ಯುದ್ಧ ಸಹಾಯಕ್ಕಾಗಿ ಇಲ್ಲಿ ನಾಟಕಾದಿಗಳ ಪ್ರದರ್ಶನವಾಗುವದು.

ಅಕ್ಕಿ ಸಹಾಯ

ಬಡ ಜನರಿಗೆ ಸೇರಿಗೆ ೦—೨—೦ ದರದಲ್ಲಿ ಅಕ್ಕಿ ಮಾರುವದಕ್ಕೋಸ್ಕರ ಕಳೆದ ತಿಂಗಳ ತಾ. ೨೩ರಿಂದ ಈ ತಿಂಗಳ ತಾ. ೧೭ರ ತನಕ ಶ್ರೀ।ಗಳಾದ ಆರ್. ನಾಗೇಶ ಶೆಣೈ, ಟಿ. ನರಸಿಂಹ ಶೆಣೈ, ತನಿಯ ಪೂಜಾರಿ, ಟಿ. ಭವಾನಿಶಂಕರ ರಾವ್, ದೇವಣ್ಣ ಬಾಬು ನಾಯಕ, ಯನ್. ರಾಮಣ್ಣ ಶೆ, ಕೆ. ಪಿ. ಪುಂಡಲೀಕ ಪ್ರಭು, ಯನ್. ರಾಮರಾಯ ಕಿಣಿ, ಬಳ್ಕುಂಜೆ ನಾಗೇಶ ಶೆಣೈ, ತಹಶಿಲ್ದಾರ ಯಂ. ಅಪ್ಪುರಾವ್, ಎ. ಎ. ಶೆಣೈ, ಶ್ರೀ ವೆಂಕಟ್ರಮಣ ದೇವಸ್ಥಾನ, ಜನರಲ್ ಮೋಟರ್ಸಿನ ಐ. ಎಂ. ಸೈ, ಕೇಶವ ರಾಮಚಂದ್ರ ಶೆಣೈ, ಕೆ. ಪಿ. ಕೇಶವ ಪ್ರಭು, ಡಾಕ್ಟರ ಸಿ. ರಾಮ ಕಾಮತ್, ಡಾಕ್ಟರ ಯನ್. ಯಂ. ಅಡ್ಯಂತಾಯ ಮತ್ತು ಹೈದರ ಸಾಹೇಬರವರು ಉದಾರ ಧನ ಸಹಾಯ ಮಾಡಿ ಸಹಕರಿಸಿದ್ದಾರೆ. ದಿನಾಲೂ ಪೇಟೆಧಾರಣೆಯ ಸರಾಸರೀ ೧೫ ಮುಡಿಗಳಂತೆ ಅಕ್ಕಿಯನ್ನು ಕಡಿಮೆ ದರದಲ್ಲಿ ಮಾರಲಾಗುತ್ತದೆ.

ನಾನು ಹೇಳುತ್ತಿದ್ದಲ್ಲವೇ
ನೊದಲು
ಪುರೋಹಿತ ಶ್ವಾಸಹಾರೀ
ತೆಗೆದುಕೊಳ್ಳಿರಿ ಅಂತಾ



ದಮ್ಮು ಒಮ್ಮೆಲೇ ನೆಟ್ಟಗಾಗಬೇಕು ಎಂಬ ಆಶೆಯಿಂದ ಅನೇಕರು ಕ್ಷಣಿಕ ಗುಣಕೊಡುವ ಔಷಧ ತೆಗೆದುಕೊಂಡು ಬೇಸತ್ತು ಹೋಗಿದ್ದಾರೆ. **ಪುರೋಹಿತ ಶ್ವಾಸಹಾರಿಯು** ಇಂಥದಲ್ಲ; ಆದರೆ ದಮ್ಮನ್ನು ಒಂದೆರಡು ದಿನ ನೊಂದಿಸದೆ ಮೆಲ್ಲಮೆಲ್ಲಗೆ ಸಮೂಲವಾಗಿ ಗುಣ ಮಾಡುವ ಉತ್ಕೃಷ್ಟ ಶಾಸ್ತ್ರೀಯ ಉಪಾಯವು. ಆದನ್ನು ತೆಗೆದುಕೊಳ್ಳಲು ಆರಂಭಿಸಿದ ಕೂಡಲೇ ಕೆಮ್ಮು ಹೋಗುವದು, ತೇಕು ಕಡಿಮೆಯಾಗುವದು, ಶೌಚದ ತೊಂದರೆ ಉಳಿಯುವದಿಲ್ಲ, ಪಚನ ಕ್ರಿಯೆಯು ತಿದ್ದುವದು, ಸಾವಕಾಶವಾಗಿ ಶಕ್ತಿ ಹೆಚ್ಚಾಗಿ ಪುಪ್ಪುಸ ಗಟ್ಟಿಮುಟ್ಟಾಗಿ ಕೊನೆಗೆ ದಮ್ಮು ಪೂರ್ಣವಾಗಿ ಗುಣವಾಗುವದು.

ದಮ್ಮು, ತೇಕು, ಥೇಕರಿಕೆ, ಗಂಟಲು ಉರಿಯುವಂಥ ಕೆಮ್ಮು ಮತ್ತೂ ಪುಪ್ಪುಸದ ಎಲ್ಲ ವಿಕಾರಗಳಿಗೆ **ಪುರೋಹಿತ ಶ್ವಾಸಹಾರಿ** ಫ್ಲೇನ (ನೀಲೀ ಪ್ಯಾಕಿಂಗ್) ಉಪಯೋಗಿಸಬೇಕು. ಬದ್ಧಕೋಷ್ಠ ಮತ್ತೂ ಆಮ್ಲಪಿತ್ತ ಹೆಚ್ಚಾಗಿ ದಮ್ಮು ಹತ್ತಿದವರು **ಶ್ವಾಸಹಾರೀ ಕೆಂಪೌಂಡ** (ಕೆಂಪು ಪ್ಯಾಕಿಂಗ್) ತೆಗೆದುಕೊಂಡರೆ ಹೆಚ್ಚು ಗುಣ. ರೂ. ೨—೨—೦; ರೂ. ೩—೧೨—೦; ರೂ. ೬—೮—೦ ಕೆಮ್ಮತ್ತಿನಲ್ಲಿ ಸಣ್ಣ ದೊಡ್ಡ ಬಾಟಲಿಗಳಲ್ಲಿ ಎಲ್ಲ ಕಡೆ ಸಿಗುವವು.

ತರಿಸಿಕೊಳ್ಳುವ ವಿಳಾಸ: **ಡಾ. ಪುರೋಹಿತ ಫಾರ್ಮೆಸಿ,** ಕೋಲ್ಹಾಪುರ.
ಇಲ್ಲವೆ **ಮೆ. ವನಮಾಳೀ ಭಿಖಾ ಮತ್ತು ಕಂ.,**
ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ.

ಪುರೋಹಿತ ಶ್ವಾಸಹಾರಿ

ಪ್ರತಿ ಮನೆಯಲ್ಲೂ ಮುಖ್ಯವಾದುದು.

ಗೃಹಿಣಿಯರೆಲ್ಲರಿಗೂ ೫೦೧ ಸ್ಪೆಶಲ್ ಅತಿ ಮುಖ್ಯವಾದುದು, ಕಾರಣ ಮನೆಯಲ್ಲಿ ಬಟ್ಟೆಗಳನ್ನು ಸ್ವಲ್ಪಕಾಲದಲ್ಲೇ ಶ್ರಮವಿಲ್ಲದೆ ಒಗೆಯಲಾಗುವುದು. ಬಿಳೀ ವಸ್ತ್ರಗಳನ್ನು ಬಿಳುಪು ಮಾಡುವುದು. ಬಣ್ಣದ ಬಟ್ಟೆಗಳಿಗೂ, ನಾಜೂಕಾದ ಬಟ್ಟೆಗಳಿಗೂ, ಹಾನಿ ಮಾಡುವುದಿಲ್ಲ.

ಪ್ರಾಣಿಗಳ ಕೊಬ್ಬು ಮಿಶ್ರವಾಗಿಲ್ಲ.

ಟಾಮ್‌ಕೋ ಸೇಲ್ಸ್ ಡಿಪಾರ್ಟ್‌ಮೆಂಟು
ಬೊಂಬಾಯಿ, ಕರಾಚಿ, ಮದರಾಸು, ಕಲಕತ್ತ, ಅಲಹಾಬಾದ್, ಲಾಹೋರ್, ಭಾವನಗರ್, ಎರ್ನಾಕುಲಮ್, ನಾಗಪೂರ್, ಹೈದರಾಬಾದ್, (ದಕ್ಕನ್)
2 A ಸೌತ್ ಪೆರೆಡ್, ಬೆಂಗಳೂರು.

ದಿ ತಾತಾ ಆಯಿಲ್ ಮಿಲ್ಸ್ ಕಂ., ಲಿ., ತಾತಾಪುರಂ ಮತ್ತು ಬೊಂಬಾಯಿ.

ಸಭೆ—ಭಾಷಣಗಳು

ಕಳೆದ ತಾ. ೧೫ರಂದು ಹೃಷಿಕೇಶದ ಬ್ರಹ್ಮಚಾರಿ ಶ್ರೀದೇವಿ ಸ್ವರೂಪರವರು ಹಿಂದೂ ಸಂಘಟನೆಯ ಅವಶ್ಯಕತೆಯ ಕುರಿತು ಭಾಷಣವನ್ನಿತ್ತರು. ಹಾಗೇ ಈಚಿಗೆ ಡಾಕ್ಟರ ಎನ್. ಯಂ. ಅಡ್ಯಂತಾಯರ ಅಧ್ಯಕ್ಷತೆಯಲ್ಲಿ, ಕಾರ್ಕಳ ಪರಸ್ಪರ ಸಹಕಾರ ಸಂಘದ ಸಭೆ ಕೂಡಿ, ೨೫ ವರ್ಷಕ್ಕಿಂತ ಹೆಚ್ಚಿಗೆ ಸರ್ವಿಸ್ ಆದ ನೌಕರ ಚಾಕರರನ್ನು ಉದ್ಯೋಗದಿಂದ ನಿವೃತ್ತ ಮಾಡಬಾರದೆಂದೂ, ನೌಕರರ ಸಂಬಳದಲ್ಲಿ ಕಡಿತ ಹಾಕಬಾರದೆಂದೂ ನಿರ್ಣಯಗಳಾದುವು. ಕಳೆದ ತಾ. ೧೩ರ ದಿನ ಕೃಷಿ ಖಾತೆಯ ಹೆಡ್‌ಕ್ವಾರ್ಟರ್ಸ ಡಿಪ್ಯುಟಿ ಡ್ಯಾರೆಕ್ಟರರಾದ ಶ್ರೀ। ಬುದ್ಧ ವಿಧೇಯರಾವ್ ನಾಯ್ಡುರವರು, ಸುಧಾರಿತ ಕೃಷಿ ಕ್ರಮಗಳ ಕುರಿತು ಭಾಷಣವನ್ನಿತ್ತರು. ಈ ಕ್ರಮಗಳನ್ನು ಬಳಕೆಗೆ ತರುವದಕ್ಕೋಸ್ಕರ ಶ್ರೀ। ಇ. ರಂಗರಾಯರು ಅಧ್ಯಕ್ಷರಾಗಿ ಇಲ್ಲೊಂದು ಸಮಿತಿಯ ರಚನೆಯಾಗಿದೆ. ಈ ಸಂದರ್ಭದಲ್ಲಿ ಜಿಲ್ಲಾ ಕೃಷಿ ಇಲಾಖಾಧಿಕಾರಿಗಳಾದ ಶ್ರೀ। ಎಟ್ಟಲ ರಾಯರೂ, ಜಿ. ಸಖಾರಾಮರಾಯರೂ ಮಾತನಾಡಿದರು. ಅಂದೇ ಕೂಡಿದ ಉಪಾಧ್ಯಾಯರ ಕೇಂದ್ರ ಸಭೆಯಲ್ಲಿ ಶ್ರೀ। ಭಾಸ್ಕರ ರಾಯರು 'ಚರಿತ್ರೆಪಾಠಗಳ' ಕುರಿತು ಭಾಷಣವನ್ನಿತ್ತರು. ಹಾಗೂ ಅದೇ ದಿನ ಕೂಡಿದ ಉಪಾಧ್ಯಾಯಿನಿಯರ ಸಭೆಯಲ್ಲಿ ಶ್ರೀ। ಯಂ. ಆಲ್ಬರ್ಟ್‌ರವರು ಬಾಯ್ದೆರೆ ಪ್ರಬಂಧಗಳ ಕುರಿತು ಭಾಷಣವನ್ನೂ ಕುಮಾರಿ ರಾಜೀವಿ ಶಂಗೇರರವರು, ಆ ವಿಷಯ ಮಾದರಿ ಪಾಠವನ್ನೂ ಕೊಟ್ಟರು. ಸತ್ಯಾಗ್ರಹಿಗಳಾದ ಶ್ರೀ। ಶ್ಯಾಮರಾಯ ನಾಯಕ ಮತ್ತು ದೇವಪ್ಪ ಆಳ್ವರಿಗೆ ವಿದಾಯವನ್ನೀಯುವ ಹಾಗೂ ಶ್ರೀ। ಕೆ. ಜಿ. ಕಾಮತರು ಹರಿಜನ ಆಶ್ರಮಕ್ಕೆ ದಾನವಾಗಿ ಕೊಟ್ಟ ಗಡಿಯಾರದ ಅನಾವರಣ ಸಮಾರಂಭಗಳು ಆಶ್ರಮದ ವಠಾರದಲ್ಲಿ ವಿದ್ಯುಕ್ತ ನಡೆದುವು.

ಪೂರ್ವದ ರಣರಂಗದಲ್ಲಿ

ರಷ್ಯದ ಸೇನೆಗಳು ಪೂರ್ವ ರಣರಂಗದಲ್ಲಿ, ಯಾರ್ಟ್‌ಸೇವೋರನ್ನು ಹಿಡಿದು, ೧೦ ಸಾವಿರ ಜರ್ಮನರನ್ನು ಕೊಂದು ಗಾಯಗೊಳಿಸಿ ಸೊಮ್‌ಲೆನ್‌ಸ್ಕನ್ನು ಸುತ್ತುಕಟ್ಟಿದ್ದಾವೆ.

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ಅಮ್ಲುಜಾರಿ ನಂಬ್ರ 458/1941.
ಸ್ಮಾಲ್ ನಂಬ್ರ 117/1939.

ಶಂಭಟ್ಟ— **ಅರ್ಜಿದಾರ.**

ಮತ್ತು

ಉಮ್ಮಾಭಿಯಾನೆ ಖತೀಜಮ್ಮ ಕೂಡಾ ಹನ್ನೊಂದು ಜನರು— **ಎದ್ರಿರು.**

ಸದರಿ ಅಮ್ಲುಜಾರಿಯ 1, 3 ಮತ್ತು 5ನೇ ಎದ್ರಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

1. ಉಮ್ಮಾಭಿ ಯಾನೆ ಖತೀಜಮ್ಮ, 3. ಅಮಿನಾ, 5. ಉಮ್ಮಾಭೀ ಎಲ್ಲರೂ ಮೃತ ಬಪ್ಪಳಿಗೆ ಮೊಯಿದಿನ್ ಕುಂಞಿ ಬ್ಯಾರಿಯ ಮಕ್ಕಳು. ಪುತ್ತೂರು ತಾಲೂಕು ಬಲ್ನಾಡು ಗ್ರಾಮಸ್ತರು

ದೋಸೆ ಕೃಷ್ಣ ಭಟ್ಟರು ವಾದಿಯಾಗಿ ಪ್ರತಿವಾದಿ ಮೃತ ಬಪ್ಪಳಿಗೆ ಮೊಯಿದಿನ್ ಕುಂಞಿ ಬ್ಯಾರಿಯ ಮೇಲೆ ಸದರಿ ಕೋರ್ಟಿನಲ್ಲಿ ರೂ. 161ಕ್ಕೆ ಪಡೆದ ಡಿಕ್ರಿಯನ್ನು ಪರಾಭಾರೆಗೆ ಹೊಂದಿದ ಸದರಿ ಅರ್ಜಿದಾರನು ಮೇಲೆ ಹೇಳಿದ ಡಿಕ್ರಿ ಪ್ರಕಾರ ಅರ್ಜಿದಾರಗೆ ಬರತಕ್ಕ ರೂ. 225ರ ಅಂದಾಜು ವಸೂಲಿಗೆ ನಡಿಸಿದ ಮೇಲಿನ ಅಮ್ಲುಜಾರಿಯಲ್ಲಿ ಮೃತ ಬಪ್ಪಳಿಗೆ ಮೊಯಿದಿನ್ ಕುಂಞಿ ಬ್ಯಾರಿಯ ಬಾಬ್ತು ಈಗ ಅವನ ಸೊತ್ತುಗಳಿಗೆ ಸಂಪೂರ್ಣ ಹಕ್ಕುದಾರರಾದ ಎದ್ರಿರ ಹಕ್ಕಿನ ಬಾಬ್ತು ಪುತ್ತೂರು ತಾಲುಕು ಬಲ್ನಾಡು ಗ್ರಾಮದ ಬಾಬ್ತು ಸರ್ವೆ ನಂಬ್ರ 22ರಲ್ಲಿ I B (ಮೊದಲು) ಈಗ ಸರ್ವೆ ನಂಬ್ರ 306ರಲ್ಲಿ 5, 46 ರಲ್ಲಿ I B, 46ರಲ್ಲಿ 8 ಕೂಡಾ 71 ಸೆಂಟ್ಸು ವಿಸ್ತೀರ್ಣದ ಆಣೆ 9 ಬೇರೇಜಿನ ಆಸ್ತಿ ಸರ್ವಾದಿಯಲ್ಲಿ ಎದ್ರಿರಿಗಿರುವ ವಾಯಿದೆ ಗೇಣಿ. ಹಕ್ಕು ವ ಅದರಲ್ಲಿ ಎದ್ರಿರಿಗಿರುವ ಕೃತದ ಹಕ್ಕೂ ಸಹಾ ಜಪ್ತಿಗೆ ಅಪೇಕ್ಷಿಸಿದ ಮೇಲಿನ ಅರ್ಜಿಯು ತನಿಖೆ ಬಗ್ಗೆ ಸದರಿ ಕೋರ್ಟಿನಲ್ಲಿ ತಾ. 8-10-1941ಕ್ಕೆ ಇಟ್ಟಿರುತ್ತದೆ. ಆದ್ದರಿಂದ ಅದಕ್ಕೆ ನಿಮ್ಮ ಆಕ್ಷೇಪವಿದ್ದಲ್ಲಿ ತಾ. 8-10-41ನೇ ದಿವಸ ಹಗಲು ಘಂಟೆ 10ಕ್ಕೆ ಕೋರ್ಟು ಮುಂದೆ ಸ್ವತಹವಾಗಲೀ, ವಕೀಲರ ಮೂಲಕವಾಗಲೀ ದಾಕಲು ಮಾಡಿಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ ನಿಮ್ಮ ಗೈರು ಹಾಜರಿಯಿಂದ ಸದರಿ ಅರ್ಜಿಯು ತೀರ್ಮಾನಿಸಲಾಗುವದು.

(By order of Court)
P. Krishna Bhat,
Vakil for Petitioner.
ಪುತ್ತೂರು, ತಾ. 16-9-1941.

ದಿ ಬೊಂಬಯಿ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

೧೯೪೦ನೇ ಇಸ್ವಿಯ ವಿದ್ಯಮಾನಗಳು

ಭಾರತದ ಸುಪ್ರಸಿದ್ಧ ಜೀವ ವಿಮಾ ಸಂಸ್ಥೆಗಳ ಶ್ರೇಣಿಗೆ ಸೇರಿದ ಈ ಸಂಸ್ಥೆಯ ೧೯೪೦ನೇ ಇಸ್ವಿಗೆ ಸಂಬಂಧಿಸಿದ ಆಡಳಿತದ ವರದಿ ಮತ್ತು ಲೆಕ್ಕಪತ್ರಗಳ ಪ್ರತಿಯೊಂದನ್ನು ಸಂಸ್ಥೆಯವರು ಕೃಪೆಯಿಟ್ಟು ಕಳುಹಿಸಿಕೊಟ್ಟುದನ್ನು ನಾವು ಅತ್ಯಾದರದಿಂದ ಸ್ವೀಕರಿಸಿ ಆ ವಿಷಯದಲ್ಲಿ ಎರಡು ಮಾತುಗಳನ್ನು ಹೇಳ ಬಯಸುತ್ತೇವೆ.

ವರದಿಯ ವರ್ಷದಲ್ಲಿ ವಿಮಾ ಕಾರ್ಯಕ್ಕಾಗಿ ಒಟ್ಟಿಗೆ ರೂ. ೧,೪೫,೫೧,೭೫೦ ರೂ.ಗಳ ಮೊತ್ತದ ೬೯೦೬ ಪ್ರಪೋಜಲುಗಳು ಈ ಕುಪೆನಿಯ ಕಡೆಗೆ ಬಂದಿದ್ದು, ಅವುಗಳಲ್ಲಿ ಒಟ್ಟಿಗೆ ೧,೨೨,೦೭,೬೫೦ ರೂಪಾಯಿಗಳ ಮೊತ್ತದ ೬೦೦೯ ಪೊಲಿಸಿಗಳನ್ನು ಕಂಪೆನಿಯು ಕೊಟ್ಟಿತು. ಮಿಕ್ಕ ವ್ಯಗಳಲ್ಲಿ ಕೆಲವು ಪೂರ್ಣವಾಗಲಿದ್ದುವು; ಕೆಲವು ತಿರಸ್ಕೃತವಾದುವು; ಕೆಲವು ಹಿಂದೆಗೆಯಲ್ಪಟ್ಟವು.

ಕ್ಲೈಮುಗಳಲ್ಲಿ ಮರಣಕ್ಕಾಗಿ ಸಲ್ಲ ಬೇಕಾಗಿ ಬಂದ ಮೊತ್ತ ರೂಪಾಯಿ ೬,೨೮,೬೨೪-೫-೦; ಪಕ್ವವಾದ ಎಂಡೌಮೆಂಟ್ ಎಶ್ಯೂರೆನ್ಸ್, ಬೋನಸಿನ ಸಹಿತ ರೂ. ೩,೫೫,೩೩೩-೯-೦; ಕಂಪೆನಿಯು ೧೯೪೦ನೇ ಇಸ್ವಿಗಾಗಿ ತೆತ್ತ ಮೂಲಧನದ ಮೇಲೆ ಸೇಕಡಾ ೪ರ ಡಿವಿಡೆಂಡ್ ಮತ್ತು ಸೇಕಡಾ ೮ರ ಬೋನಸನ್ನು ಕೊಡಲು ನಿರ್ಧರಿಸಿರುವುದು ಸ್ಮರ್ತವ್ಯ.

ಗತವರ್ಷದ ವ್ಯವಹಾರಗಳಿಂದ ಸಂಸ್ಥೆಯ ಜೀವ ವಿಮಾನಿಧಿ ೨೨ ಲಕ್ಷ ರೂಪಾಯಿಗಳಷ್ಟು ಹೆಚ್ಚಿರುವುದೂ, ಕಂಪೆನಿಯ ವಿನಿಯೋಗಗಳ "ಮಾರ್ಕೆಟ್ ಬೆಲೆ" ಗತವರ್ಷದ ಅಂತ್ಯದಲ್ಲಿ, "ಪುಸ್ತಕಗಳಲ್ಲಿ ಕಾಣುವ ಬೆಲೆ"ಗಿಂತ ೨೨ ಲಕ್ಷ ರೂಪಾಯಿಗಳಷ್ಟು ಏರಿರುವುದೂ, ಈ ವಿನಿಯೋಗಗಳ ಬೆಲೆ ಏರುಫೇರಾದಾಗ ಅದನ್ನು ಹೊಂದಿಸಿಕೊಳ್ಳುವಂತೆ ೫ ಲಕ್ಷ ರೂಪಾಯಿಗಳ "ವಿನಿಯೋಗ ಕ್ಷೋಭ ನಿಧಿ"ಯೊಂದು ಬೇರೆ ಇರುವುದೂ ಗುರುತಿಸಿಕೊಳ್ಳುವ ಸಂಗತಿಯಾಗಿದೆ.

ಜಿಲ್ಲೆಗೆ ಸುಪರಿಚಿತರಾಗಿರುವ ಈ ಸಂಸ್ಥೆಯ ವರದಿಯ ವರ್ಷದ ವಿದ್ಯಮಾನಗಳು, ಇಂದಿನ ಯುದ್ಧದ ಪರಿಸ್ಥಿತಿಯಲ್ಲಿ, ಅತ್ಯಂತ ಸಮರ್ಪಕವಾಗಿವೆ ಎನ್ನುವಲ್ಲಿ ಭಿನ್ನಾಭಿಪ್ರಾಯಗಳಿರವು. ಕಂಪೆನಿಯ ವಿಚಕ್ಷಣ ಆಡಳಿತೆ, ಸುಭದ್ರವಾದ ವಿಧಿನಿಯಮಗಳ ಅನುಸರಣ, ಆಧುನಿಕ ಎಮೂ ಸೌಕರ್ಯ ಇವೇ ಮೊದಲಾದುವು ಈ ಸಂಸ್ಥೆಯ ಸ್ಥಾನಮಾನವನ್ನು, ಶ್ರೇಯಸ್ಸನ್ನೂ ಮೇಲ್ಮಟ್ಟಕ್ಕೆ ತಂದಿರುವವಲ್ಲದೆ ಈ ಸಂಸ್ಥೆಯ ನಿರಂತರ ವೃದ್ಧಿಗತಿಯ ಸರ್ವತೋಮುಖವಾದ ಮೇಲ್ಮೆಗೆ, ನಮ್ಮವರೆಂದು ಹೆಮ್ಮೆ ಪಡಬೇಕಾದ ಉಡುಪಿಯ ಮೆ॥ ಕೊಚ್ಚಿಕಾರ್ ಸಹೋದರ ಸಂಸ್ಥೆಯ ಅವಿಶ್ರಾಂತ ಪರಿಶ್ರಮವೂ ಒಂದು ಮುಖ್ಯ ಕಾರಣವೆಂದು ಪ್ರತ್ಯೇಕವಾಗಿ ಎತ್ತಿ ಸೂಚಿಸದಿರಲಾಗುವುದಿಲ್ಲ. ಸಂಸ್ಥೆಯು ಇನ್ನೂ ಬೆಳೆದು, ಪುಷ್ಟಿಗೊಂಡು, ಭಾರತಕ್ಕೆ ಭೂಷಣಪ್ರಾಯವಾಗಿ ಬಾಳಿ, ಮತ್ತಷ್ಟು ಸರ್ವಜನಾದರಣೀಯವೆನ್ನಿಸಿ ಕೀರ್ತಿಶಾಲಿಯಾಗಲೆಂದು ನಮ್ಮ ಅಂತಃಕರಣ ಪೂರ್ವಕವಾದ ಹಾರೈಕೆ!

ರಷ್ಯದ ರಣರಂಗ

ಈ ರಣರಂಗದ ಉದ್ದಕ್ಕೂ ಘೋರ ಕಾದಾಟ ನಡೆಯುತ್ತಿದೆ. ಪೆಟ್ಸಾಮೊವಿನ ಬಳಿ ಕೆಲವೊಂದು ಶತ್ರು ಹಡಗುಗಳು ಮುಳುಗಿಸಲ್ಪಟ್ಟಿವೆ. ಜರ್ಮನರ ಹಲವು ದಳಗಳು ಧ್ವಂಸವಾಗಿವೆ. ಕೀವ್‌ನಗರವನ್ನು ಜರ್ಮನ್ ಸೇನೆಗಳು ಭೀತಿಪಡಿಸುತ್ತಿವೆ. ಒಡೆಸದ ಬಳಿ ಘೋರ ಸಮರವು ಜರುಗುತ್ತಿದೆ. ನೀಪಿಯರ್ ನದಿಯ ಬಳಿ ಕ್ರೆಮೆನ್‌ಚಗನ್ನು, ಜರ್ಮನರು ಅತ್ಯಧಿಕ ಜನನಷ್ಟ, ಸಾಮಗ್ರಿಗಳ ನಷ್ಟ ದೊಡನೆ ಹಿಡಿದಿರುವರೆಂದು ಹೇಳಲಾಗಿದೆ. ಮಾಸ್ಕೊವಿನ ವಿಮಾನ ದಾಳಿಯನ್ನು ಹಿಂದಕ್ಕಟ್ಟಲಾಗಿದೆ. ಬೇಗನೆ ಹಿಮ-ಮಂಜುಗಳ ಕಾಟ ರಷ್ಯದಲ್ಲಿ ಆರಂಭವಾಗಬಹುದೆಂದು ನಿರೀಕ್ಷಿಸಲಾಗಿದೆ.

ವೆಂಕಟಗಿರಿ ಮಹಾತ್ಮೆ

ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ಕಾರ್ಯಗಳು ವಾಚಕರಿಗೆ ಮನಃಖಚಿತವಾಗುವಂತೆ ಗ್ಲೇಜ್ ಕಾಗದದಲ್ಲಿ ೧೪ ಹಾಫ್‌ಟೋನ್ ಬ್ಲಾಕುಗಳಿಂದ ಕೂಡಿದೆ.



೫೯೬ ಪದ್ಯಗಳಿರುವ ೧೫ ಅಧ್ಯಾಯಗಳು. ದಪ್ಪವಾದ ಕಾಗದ, ಮುದ್ದಾದ ಮುದ್ರಣ. ಬೆಲೆ ರೂಪಾಯಿ ೧-೮-೦ ಟಪ್ಪಾಲು ಹಾಸಲು ಬೇರೆ. ಸಂಸ್ಕೃತ ಭವಿಷ್ಯತ್ಪುರಾಣದಿಂದ ಸ್ವರ್ಗಸ್ಥರಾದ ಮೂಲ್ಕಿ ಕವಿ ರಾಮಕೃಷ್ಣಯ್ಯನವರಿಂದ ಭಾಮಿನಿಷಟ್ಪದಿಯಲ್ಲಿ ಕನ್ನಡಿಸಲ್ಪಟ್ಟಿತು. ಸುಲಭ ಶೈಲಿ, ಸರ್ವರಿಗೂ ಅನುನಿತ್ಯಪಠನ ಪುಸ್ತಕವಾಗಿರಲು ಉಚಿತವಾಗಿರುವುದು. ಸೈಜು ಡೆಮ್ಮಿ ಅಷ್ಟಪತ್ರದ 168 ಪುಟಗಳು. ಕೆತ್ತಾನಾರಿನ ಬೈಂಡು. ಪ್ರತಿಯೊಂದಕ್ಕೆ ರೂ. 1-8-0. ಟಪ್ಪಾಲು ಹಾಸಲು ಬೇರೆ.

ಕವಿ ಎಂಡ್ ಸನ್ಸ್, ಮಂಗಳೂರು, ದ. ಕ.

50 ವರ್ಷಗಳಿಂದ ಜಗತ್ಪ್ರಸಿದ್ಧ

ಮದನಮಂಜರಿ

ಮಾತ್ರೆಗಳು

ಬಲಹೀನತೆ, ಮಲಬದ್ಧತೆ, ವೀರ್ಯಸ್ಖಲನ, ಧಾತುವಿಕಾರ ಮೊದಲಾದುವುಗಳನ್ನು ಶೀಘ್ರದಲ್ಲೇ ಪರಿಹರಿಸಿ, ರಕ್ತ ಮತ್ತು ವೀರ್ಯಗಳನ್ನು ಧಾರಾಳ ಹೆಚ್ಚಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುತ್ತದೆ.

ಕ್ರಯ: ಡಬ್ಬಿ 1ಕ್ಕೆ 1 ರೂ.

ಮದನಮಂಜರಿ ಫಾರ್ಮಸಿ,
184, ಜೈನಾ ಬಜಾರ್, ಮದ್ರಾಸ್.
ಪುತ್ತೂರು ಏಜೆಂಟರು:—**ಪೈ ಫಾರ್ಮೆಸಿ.**

ಕಾರಣ .....?

(೪ನೇ ಪುಟದಿಂದ ಮುಂದುವರಿದುದು)

ದಲ್ಲಿಟ್ಟು, ಕೂಡಲೇ ಓದು ಬರಹ ಕಲಿಯಲು ಹಟಹಿಡಿದು ಪ್ರಾರಂಭಿಸಿದೆ. ನಿಮ್ಮ ಪತ್ರವನ್ನು ಓದುವ ಶಕ್ತಿಯು, ನನ್ನಲ್ಲುಂಟಾದ ಸಮಯದಲ್ಲಿ, ನಿಮ್ಮ ವಿವಾಹವು ಆಗಿಹೋಗಿದ್ದಿತು. ನನ್ನ ಆಗಿನ ಸ್ಥಿತಿಯು ತೀರಾ ಚಿಂತಾಜನಕವಾಗಿದ್ದಿತು. ಆದರೂ ನಿಮಗೆ ಬರೆಯೋಣವೆಂದು ಯತ್ನಿಸಿದೆನು. ಪರಂತು, ಮನಸ್ಸು ಬೇಡ; ಆ ಸ್ಥಾನವನ್ನು ಇನ್ನೊಬ್ಬಳು ಆಕ್ರಮಿಸಿದ್ದಾಳೆ; ಅಲ್ಲಿ ನಿನಗೆ ಸ್ಥಳವಿಲ್ಲ ಅನ್ನುತಿದ್ದಿತು. ಹಾಗೇ ನಾನು ಸುಮ್ಮನಾಗುತಿದ್ದೆನು. ದೈವೇಚ್ಛೆಯೇ ಹಾಗಿದ್ದಿತು; ಹಾಗಾಯಿತು.

"ಕೊನೆಗೆ ನನ್ನ ವಿವಾಹದ ದಿನವೂ ಬಂತು. ಆದರೆ ವಿವಾಹಕ್ಕೆ ನನಗೆ ಮನಸ್ಸಿದ್ದಿಲ್ಲ. ನನ್ನ ಹೃದಯದಲ್ಲಿ ನಿಮಗೆ ಮಾತ್ರ ಸ್ಥಾನವಿದ್ದಿತು. ಆಜನ್ಮ ವಿವಾಹವಾಗದೆನೇ ಇರುವೆನೆಂದೇ ನಾನು ಗ್ರಹಿಸಿದ್ದೆ. ಆದರೆ, ಸಮಾಜಕ್ಕೆ ಬೆದರಿ, ಕೊನೆಗೊಬ್ಬರ ಕೈಹಿಡಿದೆ.

"ಅದು ಬಾಹ್ಯಾಡಂಬರಕ್ಕೆ ಮಾತ್ರ! ನನಗೆ ಸಂಸಾರದಲ್ಲಿ, ಸಂತೋಷವಿದ್ದಿಲ್ಲ. ನನ್ನ ಹೃದಯದಲ್ಲಿ ಅನ್ಯನಿಗೆ ಸ್ಥಳವಿದ್ದಿಲ್ಲ. ಹೇಗೂ, ಕಾಲ ಕಳೆಯೋಣ ಅನ್ನಿಸಿತು. ಅಂತೇ ದಿನಗಳು ಕಳೆದುವು. ಕಳೆದ ವರುಷ, ನನ್ನ ಪತಿಯು ಮೃತ ಪಟ್ಟರು.

"ನೀವೆಲ್ಲಿದ್ದೀರೆಂಬ ವರ್ತಮಾನವನ್ನು ನಾನು ಆಗಾಗ ತಿಳಿದುಕೊಳ್ಳುತಿದ್ದೆ. ಅಂತೇ, ನಾನಿಲ್ಲಿಗೆ ಬಂದೆ. ಇಲ್ಲೇ ಒಂದು ಕಡೆಯಲ್ಲಿ, ಒಂದು ಆಶ್ರಮವನ್ನು ತೆರೆದು ಅದರಲ್ಲಿ ಬಡ ಹುಡುಗಿಯರಿಗೆ ಓದು ಬರಹ ಕಲಿಸಬೇಕೆಂದು ನಿಶ್ಚಯಿಸಿ, ಸಕಲ ಏರ್ಪಾಡುಗಳನ್ನೂ ಮಾಡಿರುವೆನು. ನಾಳೆ, ಅದರ ಪ್ರವೇಶೋತ್ಸವವಾದುದರಿಂದ, ತಮ್ಮ ಹಸ್ತದಿಂದ ಅದನ್ನು ತೆರೆಯಿಸಬೇಕೆಂದು ಕೇಳಲು ನಾನಿಲ್ಲಿಗೀಗ ಬಂದುದು. ತಾವಿದನ್ನು ನಿರಾಕರಿಸಲಾರಿರೆಂಬ ಅಷ್ಟು ನಂಬಿಕೆಯು ನನಗಿದೆ!" ಅಂದಳು. ಅಷ್ಟು ಮಾತ್ರವಲ್ಲದೆ, ತಾನೀಗ ಇಂಗ್ಲಿಷ್ ಸಹ ಚೆನ್ನಾಗಿ ಬಲ್ಲೆನೆಂದು ತಿಳಿಸಿದಳು.

"ನಾನು ಒಡನೆ ಒಪ್ಪಿದೆನು; ಒಂದು ಸಾವಿರ ರೂಪ್ಯಾಗಳನ್ನಾಕೆಗಿತ್ತೆನು. ಅಲ್ಲದೆ, ನನ್ನಿಂದ ಬೇಕಾದ ಇತರ ಸಹಾಯವನ್ನೂ, ಆ ಆಶ್ರಮಕ್ಕೆ ಈಯಲು ಸಿದ್ಧನಿರುವೆನೆಂದೂ ಹೇಳಿ, ಆಕೆಯನ್ನೀಗಲೇ ಬೀಳ್ಕೊಟ್ಟೆನು. ನಾಳೆ ೧೦ ಘಂಟೆಗೆ ಅದರ ಪ್ರವೇಶೋತ್ಸವ. ನಿಮಗೂ ನನ್ನ ಆಮಂತ್ರಣವಿದೆ. ನೀವೂ ಇಲ್ಲಿಗೆ ಬನ್ನಿರಿ. ಒಟ್ಟಾಗಿ ಹೋಗುವ!" ಅಂದರು ರಾಯರು. ಅವರ ಆಗಿನ ಮುಖ ಭಂಗಿಯು ಗಂಭೀರತೆಯನ್ನು ತಾಳಿದ್ದಿತು.

— ಸಮಾಪ್ತಿ —

ಪಂಡಿತ ಪಂತರ ಬಿಡುಗಡೆ

ಸಂಯುಕ್ತ ಪ್ರಾಂತದ ಮಾಜಿ ಪ್ರಧಾನರಾದ ಪಂಡಿತ ಗೋವಿಂದ ವಲ್ಲಭ ಪಂತರ ಜೈಲು ವಾಸ ಮುಗಿದು ಬರುವ ತಿಂಗಳಲ್ಲಿ ಬಿಡುಗಡೆಯಾಗಲಿದೆ.

ಗ್ರೇಂಡ್

ಆಕ್ಸನ್ ಸೇಲ್

ತಾ. 28-9-41ರ ವರೆಗೆ ಮಾತ್ರ.

ಅನೇಕ ತರದ ಜವುಳಿಗಳು
ಬೆಲೆ ಅತಿ ಕಡಿಮೆಗೆ
ವಿಕ್ರೀತ ಮತ್ತು ಏಲಂ ಕೂಡಾ
ಪ್ರತಿ ಆದಿತ್ಯ, ಬುಧ, ಶುಕ್ರವಾರಗಳಲ್ಲಿ.
ಏಲಂ ಸಂಜೆ ಗಂಟೆ 5ಕ್ಕೆ ಪ್ರಾರಂಭ.

ಎ. ವರದರಾಜು ಚೆಟ್ಟಿಯಾರ್,
ಜವುಳಿ ಅಂಗಡಿ,
ಮಾರ್ಕೆಟ್ ರಸ್ತೆ, ಮಂಗಳೂರು.

ನಿಮಗೆ ಬೇಕಾಗುವ ಎಲ್ಲಾ ತೆರನ **ರಬ್ಬರ್ ಸ್ಟ್ಯಾಂಪ್**
ಮೊನೋಗ್ರಾಮ್ ಮೊಹರುಗಳು,
ಸೇದೆಗಳ ಬೇಜ್, ಬೆಲ್ಟ್, ತರವಾರಿ ಸೈನ್ ಬೋರ್ಡ್ ಇತ್ಯಾದಿಗಳಿಗೆ

ಕ್ರೌನ್ ರಬ್ಬರ್ ಸ್ಟ್ಯಾಂಪ್ ಕಂಪೆನಿ,

(ಸ್ಥಾಪನೆ: 1926)

A 17, ಬಲ್ಮಠ ರಸ್ತೆ——ಮಂಗಳೂರು.

(ಮೈಸೂರು ಸರಕಾರದ ಸ್ಟೋರ್ಸ್ ಪರ್ಚೇಸ್ ಕಮಿಟಿಯ ಅಧಿಕೃತ ಪಟ್ಟಿಯಲ್ಲಿ ಸೇರಿಸಲ್ಪಟ್ಟಿದೆ)

ನೂತನ ಪಾಠಪಟ್ಟಿಗನುಸಾರವಾಗಿ ಪ್ರಕಟಿಸಲ್ಪಟ್ಟ ಈ ಕೆಳಗಿನ ನಮ್ಮ ಹೊಸ ಪುಸ್ತಕಗಳು ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯವರಿಂದ ಕ್ಲಾಸು ಉಪಯೋಗಕ್ಕಾಗಿ ಮಂಜೂರಾತಿಯನ್ನು ಹೊಂದಿವೆ. (Vide consolidated list of approved books Fort St. George Gazette, dated 30—4—1940, pages 59, 60, 62, 68, 70, 71, 86, 87, 88, 92 & 155.)

(1) **ಹೊಸ ಕನ್ನಡ ಪಾಠಮಾಲೆ**—1ರಿಂದ 5ನೇ ದರ್ಜೆಯ ವರೆಗೆ.
(2) **ನೂತನ ಬಾಲ ಗಣಿತ**—3ನೇ ದರ್ಜೆಯಿಂದ 8ನೇ ದರ್ಜೆಯ ವರೆಗೆ.
(3) **ಭಾರತದ ಇತಿಹಾಸ**—6ನೇ, 7ನೇ ಮತ್ತು 8ನೇ ದರ್ಜೆಗಳಿಗೆ
(4) ಡಿ ಡಿ I, II, III, IV ಮತ್ತು V ಫಾರ್ಮುಗಳಿಗೆ.
(5) **ನೂತನ ಸಾಮಾನ್ಯ ಗಣಿತ**—IV ಫಾರ್ಮಿಗೆ.

ಹೊಸ ಕನ್ನಡ ಪಾಠಮಾಲೆಯ 6, 7, ಮತ್ತು 8ನೇ ದರ್ಜೆಯ ಪುಸ್ತಕಗಳು ಅಚ್ಚಿನಲ್ಲಿವೆ. ಹೆಚ್ಚಿನ ಮಾಹಿತಿಗೆ ನಮಗೆ ಬರೆದುಕೊಳ್ಳಿರಿ:—

ಬಾಲಸಾಹಿತ್ಯ ಮಂಡಲ, ಲಿಮಿಟೆಡ್, ಮಂಗಳೂರು.

Guaranteed For Purity.
BEST CASTOR OIL
TASTELESS KP ODOURLESS.
ಶುದ್ಧಮಾಡಿದ ಹರಳೆಣ್ಣೆ ವಾಕರಿಕೆ ರಹಿತ ಇಲ್ಲವೆಂದು ಡಾಕ್ಟರಗಳಿಂದ ಸರ್ಟಿಫೈಮಾಡಿದ್ದು
CASTOR OIL WORKS, COIMBATORE.

K.P. Castor Hair Oil

ಬಹಳ ತಂಪು, ಚೇತನದಾಯಕ, ಉತ್ತಮ ಪರಿಮಳ, ಕೂದಲು ಬೆಳೆಸಲು ಸಹಾಯಕವಾಗುತ್ತಿದೆ. ಕಾಂತಿ ಗೂಡಿಸುತ್ತದೆ. ಕೂದಲು ಬಾಚಿ ಅಣಿ ಮಾಡುವರೆ ನೆರವಾಗುತ್ತದೆ.

ಅತ್ಯುತ್ತಮವಾದ ಕೂದಲು ಶಕ್ತಿವರ್ಧಕ ಒಮ್ಮೆ ಪರೀಕ್ಷಿಸಿರಿ.

ಯೋಗ್ಯ ದರದಲ್ಲಿ ಉತ್ತಮ
ದೇವಪೂಜಾ ಸಾಮಗ್ರಿ
ಅಪೇಕ್ಷಿಸುವವರು ಇಂದೇ ನಮ್ಮ ಪಾತ್ರೆಗೊಂದು ಪತ್ರ ಬರೆಯಿರಿ.

ಸಚಿತ್ರ ಕ್ಯಾಟಲಾಗ್ ಫುಕಟಾ ಕಳುಹಿಸಿ ಕೊಡುವೆವು. ಈ ಚಿತ್ರದಲ್ಲಿ ಕಾಣುವ ಉಪಕರಣಗಳು ಬೇಕಾದ ಸೈಜಿನಲ್ಲಿ ಖಾತ್ರಿಯಾಗಿ ಸದಾ ಸಿದ್ಧವಿರುವುವು. ಅಲ್ಲದೆ, ಉಡುಪಿಯಲ್ಲಿ ತಯಾರಾಗುವ ಬೆಳ್ಳಿ ಸಾಮಾನುಗಳನ್ನು ಶುದ್ಧ ಬೆಳ್ಳಿಯಿಂದ ತಯಾರಿಸಿ ಕಳುಹಿಸಬಲ್ಲೆವು. ಗಿರಾಕಿಗಳಿಗೆ ತುಂಬಾ ಅನುಕೂಲ.

ಹೆಚ್ಚಿನ ಮಾಹಿತಿ ಕ್ಯಾಟಲಾಗಿನೊಂದಿಗೆ
ಕಲ್ಮಂಜೆ ವ್ಯಾಸಾಚಾರ್ಯ,
ಭ್ಯಾಂಡೆ ವ್ಯಾಪಾರಿ, ಉಡುಪಿ, ದ. ಕ.
Kalmanje Vyasacharya, Brass-ware Merchant, UDIPI, S. K.

ಕೇಸ್ಟ್ರೋಫೀನ್
ಹರಳೆಣ್ಣೆ ಚಾಕ್‌ಲೇಟ್‌ಗಳು.
ಮಕ್ಕಳಿಗೂ ಹಾಗೂ ಜವ್ವನಿಗರಿಗೂ ಏಕಪ್ರಕಾರವಾಗಿ ಪೂರ್ಣ ನಿರುಪದ್ರವಿ, ಸಿಹಿ, ಆನಂದದಾಯಕ, ಪ್ರಯೋಜನಕಾರಿಯಾದ ಉತ್ತಮ ಚೇತನದಾಯಕ ಬೇಧಿ ಔಷಧಿ.

ಉದರಶೂಲೆಗೊಳಿಸದು ಮತ್ತು ಚಟಹಿಡಿಸದು. ಸೀಸೆಗಳಲ್ಲಿ 25, 50 ಮತ್ತು 100 ಚಾಕ್‌ಲೇಟುಗಳು, ಹಾಗೂ 2 ಬಿಲ್ಲೆಗಳ ಪ್ಯಾಕೇಟುಗಳು.

ಪ್ರತಿ ಒಂದಕ್ಕೆ ಒಂದಾಣೆ.

ಎಲ್ಲಾ ಔಷಧಿ ವ್ಯಾಪಾರಿಗಳಲ್ಲೂ, ಸ್ಟೋರ್‌ಗಳಲ್ಲೂ ಸಿಗುತ್ತದೆ.

ಕೇಸ್ಟ್ರೋಫೀನ್ ಮೆನ್ಯುಫೇಕ್ಚರಿಂಗ್ ಕಂಪೆನಿ,
ಪಿ. ಒ. ಬಾಕ್ಸ್ ನಂಬ್ರ 88, ಕರಾಚಿ.

ಮಕ್ಕಳಿಗೆ
ಡೋಂಗರೆ ಇವರ

ಬಾಲ್ಯಾವಸ್ಥೆ
ಆದರ್ಶಕರವಾದ ಪೌಷ್ಟಿಕ.
ಇದು ಮಧುರವಿದ್ದು, ಇದರಲ್ಲಿ ಮಕ್ಕಳ ಬೆಳವಣಿಗೆಗೆ ಬೇಕಾಗುವ ಯೋಗ್ಯ ಔಷಧಗಳು ಇರುತ್ತವೆ.

ಬಲ್ಗೇರಿಯದ ಬೊರಿಸ್ ದೊರೆ!

(೩ನೇ ಪುಟದಿಂದ ಮುಂದುವರಿದುದು)

ಮಸಿ ಮೆತ್ತಿಸಿಕೊಂಡಿದ್ದ ಈ ಮನುಷ್ಯ, ಅರಸನೆಂಬುದನ್ನು ಆ ಪ್ರಾಣಿ ಅರಿಯಲಿಲ್ಲ! ಬೋರಿಸ್, ಬಲ್ಗೇರಿಯದ ಯಂತ್ರ ಚಾಲಕರ ಟ್ರೇಡ್ ಯೂನಿಯನಿನ ಅಧ್ಯಕ್ಷನಾಗಿದ್ದಾನೆ.

ಆತನ ಉದ್ಯೋಗ

ಬೋರಿಸ್, ವಯರ್‌ಲೆಸ್, "ಯಾಚ್" ನಡೆಸುವುದು, ಮೋಟರ್ ಬಿಡುವುದು, ಸೈಕಲ್ ಸವಾರಿ ಮಾಡುವುದು, ಪ್ರಾಕೃತಿಕ ಚರಿತ್ರೆಯ ಮಾದರಿಯಾದ ವಸ್ತುಗಳನ್ನು ಸಂಗ್ರಹಿಸುವುದು– ಇವುಗಳಲ್ಲೆಲ್ಲ ಹೆಚ್ಚು ಆಸಕ್ತಿ ವಹಿಸುತ್ತಾನೆ.

ಬಡ ಜನರಲ್ಲಿ, ಬೋರಿಸನ ಖ್ಯಾತಿ ಹೆಚ್ಚು. ಬೋರಿಸ್ ಮಾತನಾಡುವಾಗ ಲೆಲ್ಲ, "ನಾವು, ಬಲ್ಗೇರಿಯನ್ನರು" ಎನ್ನುತ್ತಾನೆ. ಹಿಂದಿನ ದೊರೆ ಫೆರ್ಡಿನಾಂಡ್, "ನನ್ನ ಕೋಣಗಳೇ— ಎಮ್ಮೆಗಳೇ!" ಎಂದು ಜನರನ್ನು ಸಂಭೋದಿಸುತಿದ್ದ.

ಬಡವರ ಬಂಧು

ಬಡವರನ್ನು, ಬೋರಿಸ್ ಚೆನ್ನಾಗಿ ಬಲ್ಲ. ಬಲ್ಗೇರಿಯದಲ್ಲಿ ಕಲವರು, ಜಗತ್ತಿನಲ್ಲೇ ಅತಿ ಬಡವರಾಗಿ ಇದ್ದಾರೆ. ಬೋರಿಸ್ ಅವರ ಗುಡಿಸಲುಗಳಿಗೆ ಹೋಗಿ, ಅವರ ಅತಿಥಿಯಾಗಿದ್ದಾನೆ. ಅವರ ಮದುವೆ ಸಂಭ್ರಮಗಳಲ್ಲಿ, ಭಾಗ ವಹಿಸಿದ್ದಾನೆ. ತಾನು ಸಂದರ್ಶಿಸದ ಒಂದೇ ಒಂದು ಹಳ್ಳಿ ಬಲ್ಗೇರಿಯದಲ್ಲಿಲ್ಲ ವೆಂದು ಬೋರಿಸ್ ಹೆಮ್ಮೆಪಡಬಹುದು. ಅವನ ವಾರ್ಷಿಕ ಉತ್ಪನ್ನ ೧೫,೦೦೦ ಪೌಂಡುಗಳು. ಜಗತ್ತಿನ ರಾಜರಲ್ಲೆಲ್ಲ, ಇಷ್ಟು ಕಡಿಮೆ ಉಪಯೋಗಿಸುವವರು ಬೇರೆ ಯಾರೂ ಇಲ್ಲ.

ಅವನ ಮದುವೆ

ಬೋರಿಸನ ಪತ್ನಿ, ರಾಣಿ ಅಯೋನ್ನಾ—ಗಯೋನ್ನಾ ಎಂದೂ ಅವಳಿಗೆ ಹೆಸರಿದೆ—ಇಟೆಲಿಯ ಒಬ್ಬ ರಾಜಕುಮಾರಿಯಾಗಿದ್ದಳು. ಆದರೆ ಬಲ್ಗೇರಿಯಕ್ಕೆ ಬಂದ ಬಳಿಕ, ಆ ನಾಡನ್ನು ತನ್ನ ಮಾತೃಭೂಮಿಯೆಂಬ ವಾತ್ಸಲ್ಯದಿಂದಲೇ ಕಾಣತೊಡಗಿದಳು.

ಈಗ ರಾಜ ರಾಜ್ಞಿಯರಿಬ್ಬರೂ ಮಗಳು ರಾಜಕುಮಾರಿ ಮೇರಿ ಲ್ಯೂಸಿಯೊಡನೆಯೂ, ಪುತ್ರ ರಾಜಕುಮಾರ ಸೈಮ್ಯನ್‌ನೊಡನೆಯೂ ಸುಖಜೀವನ ನಡೆಸುತ್ತಿದ್ದಾರೆ.

ಶಾಂತಿಯನ್ನು ತಂದ

ಅಶಾಂತವಾಗಿದ್ದ ಬಲ್ಗೇರಿಯದ ಸಿಂಹಾಸನದ ಮೇಲೆ, ಬೋರಿಸ್ ೨೪ನೆಯ ವಯಸ್ಸಿನಲ್ಲಿ ಕುಳಿತುಕೊಂಡ. ಆ ತನಕ ಅವನು ಪ್ರಖ್ಯಾತನಾಗಿದ್ದುದು ಸ್ವಪ್ರತಿಷ್ಠೆಯಿಂದ. ಭಯಂಕರ ಕದನವಾಗುತ್ತಿದ್ದಲ್ಲಿ ಕಡು ಧೈರ್ಯದಿಂದ ನುಗ್ಗಿ ಸೇನಾಧಿಪತಿಗಳಿಗೆ ಕಣ್ಣೇ ಕಾಲು ಮಾಡಿ ಬಿಡುತ್ತಿದ್ದುದರಿಂದ ಬೋರಿಸ್ ದಕ್ಷತೆಯಿಂದ ಆಳಿ, ಶಾಂತಿಯನ್ನು ತಂದ. ಆ ಶಾಂತಿ ದೀರ್ಘ ಕಾಲ ಉಳಿದಿದೆ.

ಆದರೂ, ಅವನಿಗೆ ಸ್ವಕೀಯರಾದ ವೈರಿಗಳೂ ಇಲ್ಲದಿಲ್ಲ. ಎಷ್ಟೋ ಸಲ ಆತನನ್ನು ಕೊಲೆಮಾಡುವುದಕ್ಕೆಂದು ಗುಂಡು ಹಾರಿಸಿ ಅವನ ಎದೋಧಿಗಳು ಅಕೃತಾರ್ಥರಾದುದಿದೆ. ಒಮ್ಮೆ ಮಾಸೆಯ ಒಂದಂಶವನ್ನು ಸುಡಿಸಿಕೊಂಡು ಹಿಂತಿರುಗಿದುದೂ ಇದೆ.

ಧೈರ್ಯವಂತ ದೊರೆ

ಬೋರಿಸ್ ಧೈರ್ಯವಂತ. ಬುದ್ಧಿಯೂ ಗಟ್ಟಿಯೆ; ದೇಹವೂ ಗಟ್ಟಿಯೆ. ಬಲ್ಗೇರಿಯ ಯುಗೋಸ್ಲೇವಿಯಗಳೊಳಗಿದ್ದ ೨೦ ವರ್ಷಗಳ ಕಾಲದ ಜಗಳವನ್ನು ತೀರಿಸುವುದಕ್ಕೆ ಬೋರಿಸ್ ಬೆಲ್‌ಗ್ರೇಡಿಗೆ ಹೋಗಿದ್ದ.

ಮೂರು ಯುದ್ಧಗಳಿಂದ ಬಳಲಿ ಬೆಂಡಾಗಿದ್ದ ಬಲ್ಗೇರಿಯದಲ್ಲಿ, ಬೋರಿಸ್ ಶಾಂತಿ ಸ್ಥಾಪಿಸಲು ಯತ್ನಿಸಿದ್ದಾನೆ. ೨೩ ವರ್ಷಗಳ ಆಳಿಕೆಯಲ್ಲಿ, ಆ ಶಾಂತಿಯನ್ನು ಕಾಪಾಡಿದ್ದಾನೆ.

ತಾನು ಸಿಂಹಾಸನ ತ್ಯಾಗ ಮಾಡುವುದರಿಂದಾಗಿ, ರಾಷ್ಟ್ರಕ್ಕೆ ಒಳ್ಳಿತಾಗುವುದಾದರೆ ತಾನು ಅದಕ್ಕೂ ಸಿದ್ಧನಿರುವುದಾಗಿ ಬೋರಿಸ್ ಒಂದೆಡೆ ಹೇಳಿದ್ದಾನೆ.

ಅವನು ನಾಜಿ ವಾದಿಯಲ್ಲ; ಬ್ರಿಟಿಷ್ ಪಕ್ಷಪಾತಿಯಲ್ಲ; ಬರೇ ಬಲ್ಗೇರಿಯ ವಾದಿ.

ರಾಜ್ಯವನ್ನು ಕಳೆದುಕೊಂಡ, ನಾಜಿ ಆರಸ ಫ್ರೋಕ್ಸಿ ಫೆರ್ಡಿನಾಂಡ್, ಜರ್ಮನಿಯಲ್ಲಿ ಗೂಢ ತಂತ್ರಗಳನ್ನು ಹೂಡುತ್ತಿದ್ದನೆಂದು ಕೇಳಿದೆವು. ಬೋರಿಸ್ ರಾಜ್ಯರಂಗದಿಂದ ಅದೃಶ್ಯನಾಗುವುದು ಸಂಭವನೀಯವಲ್ಲ.

ಹಿಟ್ಲರನ ಅಷ್ಟ "ಸ್ವಾಹಾ" ಮಂತ್ರಗಳು

(೧ನೇ ಪುಟದಿಂದ ಮುಂದುವರಿದುದು)

ಎಲ್ಲ ಕಡೆಗಳಿಗೂ ಒಯ್ಯುವುದು; ಮೆರೆಸುವುದು."

ಹಿಟ್ಲರನ ವಚನ

"ಯುದ್ಧ ಅಮರವಾಗಿದೆ. ಯುದ್ಧ ಸಾರ್ವತ್ರಿಕವಾಗಿದೆ. ಯುದ್ಧವೇ ಜೀವನ."

ಜರ್ಮನ ಪತ್ರಿಕೆಯ ಮಾತು

"ಯುದ್ಧ ಮುಗಿದ ಮೇಲೆಯೂ ಶಸ್ತ್ರಧಾರಣೆಯ ಕಾರ್ಯವು, ಈಗಿನಂತೆ, ಜರ್ಮನಿಗೆ ಜಗತ್ತಿನಲ್ಲೆಲ್ಲ ಹೊಸ ಶ್ರೇಷ್ಠ ರಾಷ್ಟ್ರದ ಅಧಿಕಾರವೇ ಉಂಟಾಗುವಂತೆ, ಸಾಗುತ್ತಲೇ ಇರುತ್ತದೆ."

ಉಪಾಧ್ಯಾಯರ ಸಂಘ

ಮುಲ್ಕಿ ಸೆಂಟರಿನ ಉಪಾಧ್ಯಾಯರ ಸಂಘದ ಸಾಮಾನ್ಯ ಮಾಸಿಕ ಸಭೆ ಕಳೆದ ತಾ. ೧೩ರಲ್ಲಿ ಕಾರ್ನಾಡು ಬಿ. ಇ. ಯಂ. ಎಲಿಮೆಂಟರಿ ಶಾಲೆಯಲ್ಲಿ ಕೂಡಿ ಬಂತು. ಉಪಾಧ್ಯಾಯರು ಗಮನಿಸತಕ್ಕ ವಿಷಯಗಳ ಮೇಲೆ (ಮಂಗಳೂರು ರೇಂಜ್ ಶಾಲೆಗಳ ಡಿಪ್ಯೂಟಿ ಇನ್ಸ್‌ಪೆಕ್ಟರ್) ಶ್ರೀ। ಯಚ್. ರಾಮರಾವ್, ಯಂ. ಎ., ಯಲ್. ಟಿ.,ರವರು ಅನುಭವವನ್ನು ಕೊಟ್ಟರು. ಅನಂತರ ಮೂಲ್ಕಿ ಬೋ. ಎಲಿಮೆಂಟರಿ ಶಾಲಾ ಉಪಾಧ್ಯಾಯ ಶ್ರೀ। ಯಂ. ರಾಮರಾವ್ ಕಾಮತ್‌ರ, ಸಭಾಧ್ಯಕ್ಷತೆಯಲ್ಲಿ ಉಪನ್ಯಾಸ, ಇತ್ಯಾದಿ ಕಾರ್ಯಭಾಗಗಳು ಜರಗಿದುವು.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಘಾಯಗಳು, ಬಾತುಕೊಳ್ಳುವುದು, ಜೇಳು ವಿಷ ಮುಂತಾದ ಬೇನೆ, ಪಕ್ಷವಾತ, ಪೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

(REGD.)

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ; ತುರಿಕಜ್ಜಿ, ಹುಳುಕಡ್ಡಿ, ಪಿತ್ಥಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿ ಗಳಿಗೂ ಉತ್ತಮ ಔಷಧ.

ಅಮೃತಾಂಜನ,
ಲಿಮಿಟೆಡ್

ಬೊಂಬಾಯಿ ——— ಮದ್ರಾಸ್ ——— ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE PIE-MONEY BANK, LTD.,
Maidan Road, Mangalore.

Undertakes all kinds of Banking Business.

Current account at 2½% per annum.

Savings Bank Deposits at 4½% per annum.

FIXED DEPOSITS.

For 2 years 5%. 1 year 4½%. For 6 months 4%. 3 months 3½%.

Auction Chit Funds ranging from Rs. 100—5000 run regularly on systematic lines.

Unique Banking facilities to Businessmen and interested Public.

Apply for particulars:— *K. R. Guru, Managing Director.*

ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗ ಮಾಡುವುದರಿಂದುಂಟಾಗುವ ರೋಗ ಗಳಿಗೂ ಮಿತಿಮೀರಿ ಭೋಗ ಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವ ವನ್ನು ಸಮೂಲದಿಂದ ಕಿತ್ತುಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿ ಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯತಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು.

ಅರ್ಧ ತೊಲೆ ಸೀಸೆ 1ಕ್ಕೆ ರೂ. 5—0—0

ಆತಂಕನಿಗ್ರಹ ಫಾರ್ಮೆಸಿ, ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

ಏಜಂಟ್ಸ್:—ಪಲ್ಕ್ ಎಂಡ್ ಸನ್ಸ್, ಮಂಗಳೂರು.

CONFIDENCE

IS A GREAT ASSET IN BUILDING BUSINESS.

THE

Bombay Life Assurance Co., Ltd.

has created Public Confidence by its

Fair Dealings
Prompt Settlement of Claims
Liberal Terms
Long Experience &
Sound Investments.

To Insure or to Represent, it pays you to consult us:—

KOCHIKAR BROTHERS, LTD.,

CHIEF AGENTS FOR SOUTH INDIA—INCLUDING INDIAN STATES

Udipi, Mangalore, Calicut, Madras, Trivendrum, Bangalore City, & Bombay 4.

Edited and Published by B. Vittal Rau at the Kanteerava Office, Maidan North Road, Mangalore
Printed by M. Baburaya Prabhu, B. A., at the Mangalore Press, Car Street, Mangalore